ಪ್ರಚೋದನೆ

ಲಂಕೇಶ್

05 ನವೆಂಬರ್ 2014 ರೂ. 15/-

ಕೆನೆತ್ ಆಂಡರ್ಸನ್



ಹೊಸದುರ್ಗ ಹೊಳಲ್ಕೆರೆಯ ನರಭಕ್ಷಕ



ಧ್ರುವ ಎಂಬ ಧೂಮಕೇತು

ಬಹದ್ದೂರ್ 10 ಕೋಟಿ ಸರದಾರ



ಎಡವುತ್ತಿದೆ ರೇಪ್ ಕೇಸ್




ಧಾರವಾಡ ವಿವಿ ವಾಲಿ V/S ವಾಲಾ





ಹಂಸಲೇಖರ ಹಾಡ್ತು ಹಾಸೆ



'ಪೆದ್ ಪೆದ್ದೋಳ್ ಸಂಗ್ತಿ ಮೀಕೊದ್ದು, ಮಾಕೊದ್ದು

(ಸಮಾನ ಶಾಲಾ ಹೋರಾಟ ಮಾಲಿಕೆ - 1)

"ಭಾರತ ದೇಶದ ಪ್ರಜಾತಂತ್ರ ಉಳಿಯಬೇಕಾದರೆ ಸಮಾನಶಾಲಾ ವ್ಯವಸ್ಥೆ ಬರಲೇಬೇಕು. ಬಡವರ ಮಕ್ಕಳಿಗೂ ಉತ್ತಮ ಗುಣಮಟ್ಟದ ಶಿಕ್ಷಣ ಸಿಗಬೇಕಾದರೆ, ಪ್ರಬಲ ಸಮುದಾಯಗಳ ಮಕ್ಕಳೂ ಬಡವರ ಮಕ್ಕಳೂ ಒಂದೇ ಶಾಲೆಯಲ್ಲಿ ಓದುತ್ತಿರಬೇಕು. ಇಲ್ಲದಿದ್ದರೆ ಬಡಮಕ್ಕಳು ಓದುವ ಶಾಲೆಗಳು ಈಗಿನ ಸರ್ಕಾರಿ ಶಾಲೆಗಳ ಥರ ಆಗೇ ಆಗುತ್ತವೆ. ಇದರಿಂದ ನಷ್ಟವಾಗುವುದು ಬಡಮಕ್ಕಳಿಗಷ್ಟೇ ಅಂದುಕೊಂಡಿದ್ದೀರಾ? ಶ್ರೀಮಂತರ ಮಕ್ಕಳು ಬದುಕಿನ ಬಹುಮುಖ್ಯವಾದ ಪಾಠಗಳಿಂದ ವಂಚಿತರಾಗುತ್ತಾರೆ. ತಮ್ಮ ವರ್ಗ ಮತ್ತು ಬಹುಪಾಲು ತಮ್ಮದೇ ಜಾತಿ ಹಿನ್ನೆಲೆಗಳಿಂದ ಬಂದ ಮಕ್ಕಳ ಬದುಕನ್ನಷ್ಟೇ ನೋಡುತ್ತ ಬೆಳೆವ ಈ ಮಕ್ಕಳು ನಾಳೆ ಈ ಸಮಾಜವನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆ? ಬದುಕನ್ನು ಹೇಗೆ ಎದುರಿಸಲು ಸಾಧ್ಯ? ಅವರು ಈ ದೇಶಕ್ಕೆ ಏನು ಕೊಡುಗೆ ನೀಡಬಹುದು?" ಸಮಾನ ಶಾಲಾ ವ್ಯವಸ್ಥೆಯ ಅಗತ್ಯದ ಕುರಿತು ದೇವನೂರು ಮಹಾದೇವ ಅವರು ಗೆಳೆಯ ಗುರುಪ್ರಸಾದ್ ನಿರ್ಮಿಸುತ್ತಿರುವ ಡಾಕ್ಯುಮೆಂಟರಿಗಾಗಿ ನೀಡಿದ ಸಂದರ್ಶನದ ತುಣುಕು ಇದು.

ಈ ತಾತ್ವಿಕ ನೆಲೆಯನ್ನು ಹಿನ್ನೆಲೆಯಾಗಿಟ್ಟುಕೊಂಡು, ನಮ್ಮೂರಿನ ಹೈಸ್ಕೂಲ್ ನನಗೇನು ಕೊಟ್ಟಿತು ಎಂದು ಆಲೋಚಿಸಿದ್ದೇನೆ. ಅದು ಗೌರಿಬಿದನೂರು ತಾಲೂಕು ಹೊಸೂರು ಗ್ರಾಮದ ನ್ಯಾಷನಲ್ ಹೈಸ್ಕೂಲ್. ಇಂದು ನಾನೇನಾಗಿದ್ದೇನೋ, ಅದಕ್ಕೆ ಈ ಶಾಲೆ ಬಹುಮಟ್ಟಿಗೆ ಕಾರಣವಾಗಿದೆ ಎಂದು ಗಾಢವಾಗಿ ಅನ್ನಿಸುತ್ತದೆ. ಒಂದೆರಡು ಪ್ರಸಂಗಗಳೊಂದಿಗೆ ಅದನ್ನು ಮುಂದಿಡುವ ಪ್ರಯತ್ನ ಮಾಡಿದ್ದೇನೆ.

ಖಾಸಗಿ ಶಾಲೆಯಾಗಿದ್ದರೂ ನಮ್ಮ ನ್ಯಾಷನಲ್ ಹೈಸ್ಕೂಲ್ ಒಂದು ಅನುದಾನಿತ ಶಾಲೆಯಾಗಿತ್ತು. ಅದರ ಜೊತೆಗೆ, ಶಾಲಾಭಿವೃದ್ಧಿಯ ಹೊರೆಯನ್ನು ಪರೋಕ್ಷವಾಗಿ ಪೋಷಕರ ಮೇಲೆ ಹೊರಿಸದೇ, ದಾನಿಗಳಿಂದ ಹಣ ತಂದು ಅಭಿವೃದ್ಧಿಯನ್ನು ಮಾಡಲು ಇಲ್ಲಿ ಎಚ್ಚೆನ್ ಇದ್ದರು. ಹಾಗಾಗಿ ಸುತ್ತಲಿನ ಎಲ್ಲಾ ಹಳ್ಳಿಗಳ ಎಲ್ಲಾ ವರ್ಗ, ಜಾತಿಗಳ ಪೋಷಕರಿಗೂ ಈ ಶಾಲೆ ಕೈಗೆಟಕುತ್ತಿತ್ತು. ಆ ಅರ್ಥದಲ್ಲಿ ಇದು ಸಮಾನಶಾಲೆ (Common School). ನಮ್ಮ ದೇಶದಲ್ಲಿ 1986ರವರೆಗೆ ಇದ್ದದ್ದು ಕಾಮನ್ ಸ್ಕೂಲ್‌ಗಳೇ. ಏಕೆಂದರೆ ಅನುದಾನಿತ ಶಾಲೆಗಳನ್ನು ಹೊರತುಪಡಿಸಿದರೆ ಹೆಚ್ಚಿನ ಖಾಸಗಿ ಶಾಲೆಗಳೇ ಇರಲಿಲ್ಲ. ನಮ್ಮ ಶಾಲೆಯೂ ಸಹ ಅದೇ ಆಗಿತ್ತು.

ಈ ಶಾಲೆಯ ಕೊಠಡಿಗಳಲ್ಲಿ ಮತ್ತು ಹೊರಗೆ ನನ್ನ ಸಹಪಾಠಿ ಗೆಳೆಯರಿಂದ ನಾನು ಬಹಳಷ್ಟನ್ನು ಕಲಿತೆ. ನಮ್ಮೂರಿನ ರವಿ, ಸುಜಿ, ಬಾಲಾಜಿ, ಅರವಿಂದ ಇವರುಗಳಿಂದ ಕಲಿತದ್ದು ಒಂದಾದರೆ, ಅದಕ್ಕಿಂತ ಭಿನ್ನವಾದ ಲೋಕದಿಂದ (ಇನ್ನೂ ಚಿಕ್ಕ ಹಳ್ಳಿಗಳ ರೈತಾಪಿ ಹಿನ್ನೆಲೆಯಿಂದ) ಬಂದಿದ್ದ ಗೆಳೆಯರಿಂದ ಇನ್ನೂ ಹೆಚ್ಚು ಕಲಿತೆ. ಸೊನಗಾನಹಳ್ಳಿ ನಂಜೇಗೌಡ, ಕುರೂಡಿಯ ರವೀಂದ್ರ, ನಮ್ಮೂರಿನ ಅಶ್ವತ್ಥ ಮತ್ತು ಬೊಮ್ಮಶೆಟ್ಟಹಳ್ಳಿ ಸೀನನಿಂದ ನಾನು ಕಲಿತದ್ದಕ್ಕೆ ಒಂದು ತೂಕವಾದರೆ, ಹೊಸಕೋಟೆ ಮತ್ತು ಯರ್ರಪೋತೇನಹಳ್ಳಿಯ ಗೆಳೆಯರು, ಭಕ್ತರಹಳ್ಳಿಯ ನಾಗರಾಜ ಮತ್ತು ಕೃಷ್ಣಪ್ಪನಿಂದ ಕಲಿತದ್ದಕ್ಕೆ ಇನ್ನೊಂದು ತೂಕ. ಅದಕ್ಕಿಂತ ಭಿನ್ನವಾದ ಮತ್ತೂ ಒಂದು ಲೋಕ ನಮ್ಮೂರಿನ ದಲಿತ ಲೋಕ. ನಮ್ಮ ತರಗತಿಯಲ್ಲಿದ್ದ 3 ವೆಂಕಟೇಶರೂ ಅದೇ ಲೋಕದಿಂದ ಬಂದವರಾಗಿದ್ದರು. ಹೊಸೂರೆಂಬ ದೊಡ್ಡ ಊರಿನ 'ದೊಡ್ಡ' ಕುಟುಂಬದ ಸುರಕ್ಷಿತ ಲೋಕದಿಂದ ಬಂದ 'ಬುದ್ಧಿವಂತ' ವಿದ್ಯಾರ್ಥಿಯಾಗಿದ್ದ ನಾನು ಅವರುಗಳ ಲೋಕದ ಎಲ್ಲಾ ಸಂಗತಿಗಳಲ್ಲಿ ಸಂಪೂರ್ಣ ದಡ್ಡನಾಗಿದ್ದೆ. ಅವೆಲ್ಲವನ್ನೂ ಈ ಸ್ನೇಹಿತರು ನನಗೆ ಕಲಿಸುತ್ತಾ ಹೋದರು. ಸಮಾನ ಶಾಲೆಯಲ್ಲಿ ಮಾತ್ರ ಕಲಿಯಲು ಸಾಧ್ಯವಿದ್ದ ಈ ಸಂಗತಿಗಳನ್ನು ನ್ಯಾಷನಲ್ ಹೈಸ್ಕೂಲ್ ಕಲಿಸಿತು ಅಥವಾ ಜೊತೆಗಿರುವ ಸಹಪಾಠಿಗಳಿಂದಲೇ ಅವೆಲ್ಲವನ್ನೂ ಕಲಿಯುವ ಅವಕಾಶವನ್ನು ಕಲ್ಪಿಸಿತು.

ಕೌಟುಂಬಿಕ ಸ್ಥಾನಮಾನದ ದೃಷ್ಟಿಯಿಂದ ಸಹಪಾಠಿಗಳ ಸಂಬಂಧ ಸಂಪೂರ್ಣ ಬೇರೆ ನೆಲೆಯದ್ದಾಗಿದ್ದರೆ, ಶಾಲೆಯೊಳಗೆ ನಮ್ಮ ನಡುವಿನ ಸಂಬಂಧ ಒಂದು ಮಟ್ಟಕ್ಕೆ ಅವನ್ನೆಲ್ಲ ಮೀರಿದ್ದಾಗಿತ್ತು. ಒಮ್ಮೆ ಹೈಸ್ಕೂಲಿನ ಗೇಟ್ ದಾಟಿ ನಾನು ಮತ್ತು ಇಬ್ಬರು ವೆಂಕಟೇಶರು ಮಾತಾಡಿಕೊಳ್ಳುತ್ತಾ ಬರುತ್ತಿದ್ದೆವು. ಒಬ್ಬ ವೆಂಕಟೇಶ ಕೇಳಿದ 'ನಾನೊಂದು ಹೇಳ್ತೀನಿ ಅದು ಯಾವ ವಾದ್ಯದ್ದು ಅಂತ ನೀನು ಹೇಳಬೇಕು' ಅಂತ. ಆತ ವಾದ್ಯದ ರಿದಂಅನ್ನು ಬಾಯಿಯಲ್ಲಿ ವೇಗವಾಗಿ ಹೇಳುತ್ತಾ ಹೋದ 'ಪೆದ್ ಪೆದ್ದೋಳ್ ಸಂಗ್ತಿ ಮೀಕೊದ್ದು, ಮಾಕೊದ್ದು, ಪೆದ್ ಪೆದ್ದೋಳ್ ಸಂಗ್ತಿ ಮೀಕೊದ್ದು ಮಾಕೊದ್ದು ಪೆದ್ ಪೆದ್ದೋಳ್ ಸಂಗ್ತಿ ಮೀಕೊದ್ದು ಮಾಕೊದ್ದು.....' ಅವನು ಮೊದಲ ಸಾಲು ಹೇಳುವಷ್ಟರಲ್ಲಿ ನಾನು ಅದನ್ನು ಗುರುತಿಸಿ ಹೇಳಿದೆ 'ಇದು ತಮಟೆ'. ಈ ಸದ್ದನ್ನು ನಾನು ಮರೆಯಲು ಸಾಧ್ಯವಿರಲಿಲ್ಲ, ಅದೆಷ್ಟೋ ದಿನ ನಮ್ಮ ಮನೆ ಮುಂದೆ ಮಿಡಿದ ಸದ್ದು ಅದು. ಅವನು ಖುಷಿಯಿಂದ ಹೌದು, ಹೌದು ಅಂದ. ಇಷ್ಟರಲ್ಲಿ ನಾವು ಪಿಳ್ಳಾಂಜನೇಯ ಗುಡಿತನಕ ಬಂದಿದ್ದೆವು. ಅಲ್ಲಿಂದ ಮನೆ ಹತ್ತಿರ ನಾನು ಎಡಕ್ಕೆ ತಿರುಗಿ, ಅವರು ಮುಂದಕ್ಕೆ ಕಾಲೋನಿ ಕಡೆಗೆ ಹೋಗುವ ತನಕವೂ ಏನೇನೋ ಮಾತಾಡಿಕೊಂಡು ಬಂದೆವು. ಆದರೆ



ಅವ್ಯಾವುವೂ ನನ್ನ ಮನಸ್ಸಿನೊಳಗೆ ಹೋಗೇ ಇರಲಿಲ್ಲ. ತಲೆಯೊಳಗೆ 'ಪೆದ್ ಪೆದ್ದೋಳ್ ಸಂಗ್ತಿ ಮೀಕೊದ್ದು ಮಾಕೊದ್ದು' ಕುಣಿಯುತ್ತಿತ್ತು.

ಎಂದೂ ಮರೆಯಲಾಗದ ಪಾಠವನ್ನು ಆ ದಿನ ಕಲಿತಿದ್ದೆ. ದಮನಿತ ಸಮುದಾಯದ ವಾದ್ಯವಾದ ತಮಟೆಯನ್ನು ಬಡಿವವರಿಗೆ ರಿದಂಆಗಿ 'ಪೆದ್ ಪೆದ್ದೋಳ್ ಸಂಗ್ತಿ ಮೀಕೊದ್ದು ಮಾಕೊದ್ದು' ಅಂತ ಹೇಳಿಕೊಟ್ಟಿರಲಿಕ್ಕಿಲ್ಲ, ಆದರೆ ವೆಂಕಟೇಶ ಅದನ್ನು ನನಗೆ ಹೇಳಿದಾಗ ಹಲವು ಪ್ರಶ್ನೆಗಳು ಮೂಡಿದವು. ಇದನ್ನು ಈತ ನನಗೆ ಯಾಕೆ ಹೇಳಿದ? ಸಿಟ್ಟನ್ನು ತೋಡಿಕೊಳ್ಳಲು, ವ್ಯಂಗ್ಯವಾಗಿ ಈ ರೀತಿ ಹೇಳುತ್ತಿರಬಹುದೇ? ವಾದ್ಯವೊಂದು ಜನರ ಮನದೊಳಗೆ ಹುದುಗಿರುವ ಭಾವವನ್ನೂ ಹೇಳಬಲ್ಲುದೇ? ಬೇರೆಲ್ಲಾ ವಾದ್ಯ ಬಿಟ್ಟು ತಮಟೆ ಮಾತ್ರ 'ದೊಡ್ ದೊಡ್ಡೋರ್ ಸುದ್ದಿ ನಿಮಗ್ ಬೇಡ, ನಮಗ್ ಬೇಡ' ಅಂತ ಯಾಕ್ ಹೇಳುತ್ತೆ? ಹಾಗಾದರೆ ನಮ್ಮ ಮನೆ ಮುಂದೆ ಆಗಾಗ್ಗೆ ಬಡಿಯುವಾಗ ಅಲ್ಲಿ ಹೊರಡುವ ಸದ್ದು ಇದೇ ರೀತಿ ಧ್ವನಿಸುತ್ತಿರಬಹುದೇ? ದಮನಿತ ಸಮುದಾಯಗಳು, ತಮ್ಮನ್ನು ಶೋಷಿಸುತ್ತಿರುವವರ ವಿರುದ್ಧ ಕಟ್ಟಿಕೊಳ್ಳುವ ಆಲೋಚನೆಗಳು ತಮಟೆಯನ್ನು ಹೀಗೆಲ್ಲಾ ಬಡಿಯುತ್ತಿರಬಹುದೇ?

ಇಷ್ಟೇ ಖಚಿತವಾದ ಪದಗಳಲ್ಲಿ ಅಂದು ಈ ಪ್ರಶ್ನೆಗಳು ಮೂಡಿರಲಿಲ್ಲ. ಅಂದು ಮನಸ್ಸಿನಲ್ಲಿ ಮೂಡಿದ ಭಾವಕ್ಕೆ ಈಗ ಈ ವಾಕ್ಯಗಳಲ್ಲಿ ಬರೆಯುತ್ತಿದ್ದೇನೆ ಅಷ್ಟೇ. ಅಂದು ತಮಟೆಯ ರಿದಂಅನ್ನು ಈ ರೀತಿ ಹೇಳಿದ ವೆಂಕಟೇಶನ ಬಗ್ಗೆ ಅಭಿಮಾನ ಮೂಡಿತ್ತು. ಆ ನಂತರ ಶಾಲೆ ಬಿಡುವವರೆಗೂ ಆತ ಸ್ನೇಹಿತನಾಗಿದ್ದ ಮತ್ತು ನನ್ನ ಹಿನ್ನೆಲೆ ಹಾಗೂ ಬದುಕಿನ ದೃಷ್ಟಿಕೋನವನ್ನು ಕದಡಿದ ಸಂಗತಿಯೊಂದನ್ನು ಆತ ಕಲಿಸಿದ್ದ.

ಈಗಲೂ ನೆನಪಿನಲ್ಲಿರುವ 'ಗರ್ವಭಂಗ'ದ ಸಂಗತಿಗಳು ಇನ್ನೂ ಹಲವಿವೆ. ವಿಜ್ಞಾನ ವಿಷಯಗಳ ಚರ್ಚಾಸ್ಪರ್ಧೆಯಲ್ಲಿ ಮಿಡ್ಲ್ ಸ್ಕೂಲ್‌ನಿಂದ ಬಂದು ಭಾಗವಹಿಸಿದಾಗಲೇ ಬಹುಮಾನ ಗಳಿಸಿದ್ದೆ. 9ನೇ ತರಗತಿಯಲ್ಲಿದ್ದಾಗಲೇ ಹೈಸ್ಕೂಲ್‌ನ ನಾಲ್ವರ ತಂಡಕ್ಕೆ ಆಯ್ಕೆ ಆದೆ ಅಥವಾ ಆಯ್ಕೆ ಮಾಡಿದರು. ಹೊಸೂರು ಮತ್ತು ಯಲ್ಲೂರಿನಲ್ಲಿ ಎರಡು ವರ್ಷದಲ್ಲಿನ ಒಟ್ಟು ನಾಲ್ಕು ಸ್ಪರ್ಧೆಗಳಲ್ಲೂ ಭೌತಶಾಸ್ತ್ರ ವಿಭಾಗದಲ್ಲಿ ಎ ಗ್ರೇಡ್ ಮೊದಲ ಬಹುಮಾನ. ಯಲ್ಲೂರಿನಲ್ಲಿ ಮೇಡಂ ಒಬ್ಬರು ನನ್ನ ಭಾಷಣ ಕೇಳಿ 'ನಿನ್ನಂತಹ ಮಕ್ಕಳಿರಬೇಕಪ್ಪಾ' ಎಂದು ಬಿಟ್ಟರು. ಅಹಂಕಾರ ಮೇಲೇರಲು ಇನ್ನೇನು ಬೇಕು?

ಅಷ್ಟು ಮೇಲೇರಿ ಕೂತಿದ್ದವನಿಗೆ ನಮ್ಮದೇ ತರಗತಿಯಲ್ಲಿ ಪ್ರಾಕ್ಟೀಸ್‌ಗೆಂದು ಅದೇ ವಿಷಯವನ್ನು ಲೆಕ್ಚರ್ ಕೊಡಲು ಮೇಷ್ಟ್ರು ಹೇಳಿದ್ದರು. ಅತ್ಯಂತ ವಿಶ್ವಾಸದಿಂದ ನ್ಯೂಟನ್ನಿನ ಸೂತ್ರದ ಬಗ್ಗೆ ಭಾಷಣ ಹೊಡೆಯುತ್ತಾ 'ಭೂಮಿಯಿಂದ ಮೇಲಕ್ಕೆ ಹೋಗುತ್ತಾ, ಹೋಗುತ್ತಾ ಎಲ್ಲಿ ಗುರುತ್ವಾಕರ್ಷಣೆ ಸೊನ್ನೆ ಆಗುತ್ತೋ ಅಲ್ಲೀ....' ಅಂತ ಹೇಳುತ್ತಿದ್ದವನಿಗೆ ಸಹಪಾಠಿ ಹುಡುಗಿಯೊಬ್ಬಳು 'ಅದು ಎಲ್ಲಿ ಸೊನ್ನೆ ಆಗುತ್ತೆ' ಅಂತ ಕೇಳಿದಳು. ಎಲ್ಲಿ ಅಂತ ನನಗೆ ಗೊತ್ತಿಲ್ಲ, 'ಮೇಲಕ್ಕೆ ಹೋಗ್ತಾ ಹೋಗ್ತಾ ಕಡಿಮೆಯಾಗಿ ಸೊನ್ನೆ ಆಗುತ್ತೆ' ನನ್ನ ಉತ್ತರ. ಹಾಗೆಯೇ ಅಣುಬಾಂಬ್‌ನ ಪರಿಣಾಮ ಹೇಳುತ್ತಾ 'ಹಿರೋಶಿಮಾ ನಾಗಸಾಕಿಗಳಲ್ಲಿ ಈಗಲೂ ಅಂಗವಿಕಲ ಮಕ್ಕಳು ಹುಟ್ಟುತ್ತಾ ಇದ್ದಾರೆ'. ಅದನ್ನು ಹೇಳುತ್ತಿದ್ದ ಹಾಗೆ ಬಂದ ಪ್ರಶ್ನೆ 'ಆಗ ಬಾಂಬ್ ಹಾಕಿದ್ರೆ ಈಗ್ಯಾಕೆ ಮಕ್ಕಳು ಅಂಗವಿಕಲರಾಗಬೇಕು?' ತಾನೇ ಸ್ವತಃ ಅಂಗವಿಕಲ ಮಕ್ಕಳನ್ನು ನೋಡಿಕೊಂಡು ಬಂದಷ್ಟು ದೃಢ ವಿಶ್ವಾಸದಿಂದ ಹೇಳುತ್ತಿದ್ದವನಿಗೆ ಏನಾಗಬೇಕು? ಉತ್ತರ ಗೊತ್ತಿಲ್ಲ, ಮತ್ತೆ ತಿಣುಕಾಟ. ಬಹುಶಃ ಈ ಪ್ರಶ್ನೆಗಳನ್ನು ಕೇಳಿದ್ದು ಸರೋಜ ಮತ್ತು ಹೊಸಕೋಟೆ ಮುಮ್ತಾಜ್ ಬೀ. ಆ ವಯಸ್ಸಿನಲ್ಲಿ ಹುಡುಗರು ಕೇಳಿದರೇ ಕಷ್ಟ. ಇನ್ನು ಹುಡುಗಿಯರಿಂದ ಇಂತಹ ಬಾಣಗಳು ಬಂದರೆ?

ಇಂತಹ ಗರ್ವಭಂಗಗಳ ಸಂದರ್ಭಗಳಲ್ಲಿ ವಾಪಸ್ಸು ವ್ಯಂಗ್ಯದಿಂದ ಉತ್ತರ ಕೊಟ್ಟದ್ದು ಇತ್ತಾದರೂ, ನಂತರ ಅದು ಅಪಾರ ಮುಜುಗರವನ್ನು ನನ್ನೊಳಗೇ ತಂದಿರುತ್ತಿತ್ತು. ಹಿನ್ನೆಲೆಯ ಕಾರಣಕ್ಕೆ ಮೇಲರಿಮೆಯನ್ನೇ ಹೊದ್ದ ವ್ಯಕ್ತಿಯನ್ನು ಭೂಮಿಯ ಮಟ್ಟಕ್ಕೆ ಇಳಿಸಲು ಇವೆಲ್ಲವೂ ಸಹಾಯ ಮಾಡಿದವು. ಅಂದರೆ ಬುದ್ಧಿವಂತಿಕೆ ಮತ್ತು ಜ್ಞಾನದ ಮೇಲಿನ ಹಕ್ಕು ಕೆಲವರ ಗುತ್ತಿಗೆ ಅಲ್ಲ ಎಂಬುದರ ಜೊತೆಗೆ, ಗೊತ್ತಿಲ್ಲದ್ದನ್ನು ತಿಳಿಯಲು, ಹುಡುಕಿಕೊಂಡು ಹೋಗಲು ಇವೆಲ್ಲಾ ಸಹಾಯ ಮಾಡಿವೆ.

ನಮ್ಮೂರಿನ ಪಕ್ಕದಲ್ಲಿರುವ ಸೊನಗಾನಹಳ್ಳಿ ರಸ್ತೆಯಲ್ಲಿ ಹಳ್ಳಕ್ಕೆ ಅಡ್ಡ ಸೇತುವೆ ಕಟ್ಟಲು ಹೋಗಿದ್ದ ಘಟನೆಯೂ ಒಂದು ವಿಸ್ಮಯವನ್ನು ಮೂಡಿಸಿದ ಸಂದರ್ಭ. ಅಂದು ನನ್ನದೇ ವಯಸ್ಸಿನ ಜೊತೆಗಾರರಿಗೆ ಅಲ್ಲಿ ನೀರಿಗೆ ಅಡ್ಡ ಕಲ್ಲು, ಮರಳು ಮೂಟೆ ಹಾಕುವ ವಿಚಾರದಲ್ಲಿ ಇದ್ದ ತಿಳಿವಳಿಕೆಗೂ ನನ್ನದಕ್ಕೂ ಹೋಲಿಕೆಯೇ ಇಲ್ಲ. ಅಷ್ಟೊಂದು ದೊಡ್ಡ ದೊಡ್ಡ ಬಂಡೆಕಲ್ಲುಗಳನ್ನು ಎತ್ತಿಕೊಂಡು ಬಂದು ಎಸೆಯುತ್ತಿದ್ದ ಗೆಳೆಯರು ನೋಡುನೋಡುತ್ತಿದ್ದಂತೆ ಸುಮಾರಾದ ಸೇತುವೆಯನ್ನು ಎಬ್ಬಿಸಿಬಿಟ್ಟರು: ತೀರಾ ಸಣ್ಣ ಕಲ್ಲುಗಳನ್ನೇ ತಂದು ಹಾಕಿದ್ದ ನಾನು ಅಲ್ಲಿಗೆ ಅಪ್ರಯೋ ಇಂತಹ ಹಲವು ಘಟನೆಗಳು ಸಮಾನತೆಯ ಪಾಠ ವಿನಯವನ್ನು ಕಲಿಸಿದವು.

ಬಹುಶಃ ಇಂತಹ ಬಿಡಿಬಿಡಿ ಸಂಗತಿಗಳಲ್ಲಿ ಅವೆಷ್ಟು ಹೈಸ್ಕೂಲ್‌ನ ಕಾಲ ವಿದ್ಯಾರ್ಥಿಯ ವ್ಯಕ್ತಿತ್ವದೊಳಗೆ ಇಳಿಸ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಸಂದ ತೀರಾ ಎಳವೆಯದು. ಆಗ ಬರೀ ಚೆ ಮಗುವಿನದ್ದಾಗಿರುತ್ತದೆ. ವ್ಯಕ್ತಿತ್ವವೊಂದು ಅರಳುವ ಸ ಮತ್ತು ಕಾಲೇಜಿಗೆ ತಯಾರಾಗುವ ಅವಧಿ ಹೈಸ್ಕೂಲಿ ಅದಕ್ಕೊಂದೇ ಅಲ್ಲವೇ ಅದನ್ನು 'ಪ್ರೌಢ'ಶಾಲೆಯೆನ್ನುವ

ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಷ್ಟೇ ವಿದ್ಯಾರ್ಥಿಯನ್ನು ಮನುಷ್ಯನಾಗಿ ರೂಪಿಸುವುದಿಲ್ಲ, ಜೊತೆಗೆ ತನ್ನ ಪರಿಸರದಿಂದ ಮಗು/ವಿದ ಕಲಿಯುವುದು ಬಹಳ ಹೆಚ್ಚು. ಒಂದು ವೇಳೆ ಮ ಪರಿಸರದಲ್ಲಿ ಒಂದೇ ರೀತಿಯ ವಿದ್ಯಮಾನಗಳು ಇದ್ದರೆ, ವೈವಿಧ್ಯಮಯವಾದ ಸಂಗತಿಗಳಿಂದ ವಂಚಿತವಾಗುತ್ತದೆ. ಕಾಡಿನ ಪರಿಸರದಲ್ಲಿ ಬೆಳೆ ಮಗುವಿಗೆ ಅದರ ಪ್ರತಿಯೊಂದು ವಿವ ಬಹು ಬೇಗ ಗೊತ್ತಾಗುತ್ತದೆ. ಹ ಪರಿಸರದಲ್ಲಿ ಎಲ್ಲರೊಡನೆಯೂ ಬೆರೆತು ಮಗುವಿಗೆ ಹಳ್ಳಿ ಪೂರ್ತಿ ಅರ್ಥವಾ ಆದರೆ ಇಂದಿನ ಅಪಾರ್ಟ್‌ಮೆಂಟ್ ಬೆಳೆಯುವ ಮಗುವಿಗೆ, ಈ ಅರ್ಥವಾಗುವ ಸಾಧ್ಯತೆ ಬಹಳ ಅಂತಹುದೇ ಅಪಾರ್ಟ್‌ಮೆಂಟಲ್ಲೈಸ್ ಶಾಲೆಗೇ ಹೋಗುವುದರಿಂದ ಇನ್ನೂ ಕಲಿಯುತ್ತದೆ.

ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚು ಗಳಿಸುವುದೇ 'ಬುದ್ಧಿವಂತ'ನ ಪರಿಗಣಿತವಾಗುವುದಕ್ಕೆ ಮಾನದಂಡವ ಅದರಲ್ಲಿ ಪರಿಣಿತಿ ಗಳಿಸಿದ್ದ ನನ ವಿನಯವನ್ನೂ, ಬದುಕಿನ ಬಗ್ಗೆ ದೃಷ್ಟಿಕೋನವನ್ನೂ ಕಲಿಸಿದ್ದು ಹೈ ಅವಧಿಯ ಇಂತಹ ಭಿನ್ನ ಸಂಗತಿಗಳು. ಬೆಂಗಳೂರಿಗೆ ಬಂದ ಮೊದಲ ತಿಂಗಳ ಲಂಕೇಶ್ ಪತ್ರಿಕೆಯನ್ನೂ, ಬೆಂಗ ನ್ಯಾಷನಲ್ ಕಾಲೇಜಿನ ಲೈಬ್ರರಿಯಿಂದ ಕನ್ನಡದ ಮುಖ್ಯ ಲೇಖಕರ ಕೃತಿ ಬಿಡದೇ ಓದಲಾರಂಭಿಸಿದೆ. ಹೊ ನ್ಯಾಷನಲ್ ಹೈಸ್ಕೂಲ್ ಹಾಕಿದ್ದ ವ ತಳಹದಿ' - ಅಂದರೆ ಆ ಶಾಲೆ ಚಟುವಟಿಕೆಗಳ ಮೂಲಕ ಕ ಶಾಲೆಯೊಳಗೆ ವಿವಿಧ ಹಿನ್ನೆಲೆಯಿಂದ ಬಂದಿದ್ದ ಸಹಪಾಠಿಗಳ ಬದುಕಿನ ವಿವರಗಳಿಂದ ನಾನು ಎಲ್ಲವೂ ಕನ್ನಡ ಸಾಹಿತ್ಯದ ಚಿಂತನೆಯನ್ನು ಬೇರೆ ರಿ ಅರ್ಥಮಾಡಿಕೊಳ್ಳುವುದನ್ನು ಕಲಿಸಿತು. ಲಂಕೇಶರ ಚಿಂತನೆಗಳ ಬೇರೆ ಬೇರೆ ಮಗ್ಗುಲುಗಳನ್ನೂ ಮಾಡಿಕೊಳ್ಳುವುದು ಸಾಧ್ಯವಾಯಿತು.

8ನೇ ತರಗತಿಗೇ ಬೆಂಗಳೂರಿನಲ್ಲಿ ಸೆಟ್ಲ್ ಆಗಿ ಬದುಕಿನ ತಿರುವು ಬೇರೆ ಆಗಿ ಬಿಡುತ್ತಿತ್ತೇನೋ ಅದೃಷ್ಟಕ್ಕೆ ನಾನು ಹೊಸೂರಿನಲ್ಲೇ ಉಳಿದೆ. ಉಳಿ ಸಮಾನ ಶಾಲೆಯು ಕಲಿಸಿದ ಬದುಕಿನ ಪಾಠಗಳು ಇದ್ದುದರಲ್ಲಿ ಒಳ್ಳೆಯ ಮನುಷ್ಯನನ್ನಾಗಿ ರೂಪಿಸಿದ ಭಾವಿಸುತ್ತೇನೆ. ಪೆದ್ ಪೆದ್ದೋಳ್ ಸಂಗ್ತಿಯನ್ನು ಪ್ರ ಭಾರತವೂ-ಇಂಡಿಯಾವೂ ಒಂದಾಗಬೇಕು ಪ್ರಯತ್ನಕ್ಕೆ ಹಚ್ಚಿದೆ.

ಇಂದು ಸಮಾನ ಶಾಲೆಗಳಿಲ್ಲ. 1990ರ ಜಾರಿಯಾದ ಜಾಗತೀಕರಣ ನೀತಿಯು ಎಲ್ಲಾ ಕ್ಷೇ ಶಿಕ್ಷಣ ಕ್ಷೇತ್ರವನ್ನೂ ಖಾಸಗಿಯವರ ಪಾಲು ಸೇವಾ ಮನೋಭಾವದಿಂದ ಶಿಕ್ಷಣವನ್ನು ನ ಸಂಸ್ಥೆಗಳಿಗೂ ಸರ್ಕಾರವು ಅನುದಾನವನ್ನು ನಿ ಅಸಮಾನ ಶಿಕ್ಷಣ ನೀತಿಯು ಸಾರ್ವತ್ರಿಕವಾಗಿ ದಿನೇ ಹೆಚ್ಚಾಗುತ್ತಿದೆ. ಹಾಗಾಗಿ ಹಳ್ಳಿಯಿಂದ ಪಟ್ಟಣಗಳ ಶಾಲೆಗಳಿಗೆ ಸೇರುತ್ತಿದ್ದಾರೆ. ತಮ್ಮ ಜೇಬಿನಲ್ಲಿರುವ ಹಣಕ್ಕೆ ಹೊಂದುವ ಶಾಲೆಗೆ ಸೇರು ಅಲ್ಲಿ ಅವರು ತಮ್ಮ ವರ್ಗ(ಅಂತಸ್ತು) ಅಥವಾ ಮಕ್ಕಳ ಜೊತೆ ಮಾತ್ರ ಬೆರೆಯುತ್ತಾರೆ. ಅಸ ಪಾಠವು ಅಲ್ಲಿಂದಲೇ ಶುರುವಾಗುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಅಪಾಯ. ಅದನ್ನು ಬದಲಿಸಲು ಕನ್ನಡ ಶಾಲೆಗಳಲ್ಲಿ ಕಲಿತ ನಮ್ಮಂಥವರೆಲ್ಲಾ ಸ ದೊಡ್ಡ ಆಂದೋಲನವನ್ನೇ ನಡೆಸುವ ಅಗತ್ಯ

...ಸುರ ಬಲಿ ಮಹಾರಾಜನ ರಾಜ್ಯಕ್ಕಾಗಿ ದೀಪಗಳನ್ನು ಬೆಳಗಿಸೋಣ

...ಬರುವ ಶುಕ್ರವಾರ ದೀಪಾವಳಿ ಹಬ್ಬ ಇದ್ದರೂ ...ೀ ಎಲ್ಲೆಡೆ ಹಬ್ಬದ ವಾತಾವರಣ ಕಣ್ಣು ಕುಕ್ಕುತ್ತಿದೆ. ...ಣಗ್ಗಿನಿಂದ ಪಟಾಕಿಗಳ ಸದ್ದು ಕಿವಿಗಳಿಗೆ ಬಡಿಯುತ್ತಿದೆ. ...ಅಲಂಕಾರ ಮತ್ತು ಪಟಾಕಿಯ ಬಣ್ಣಗಳಿಂದಾಗಿ ಈ ...ಚಿಕ್ಕಮಕ್ಕಳಿಗೆ ಇಷ್ಟವಾದ ಹಬ್ಬ. ಆದರೆ ಈ ಹಬ್ಬದ ... ಇರುವ ಕುತರ್ಕವನ್ನು ನಾವು ನಮ್ಮ ಮಕ್ಕಳಿಗೆ ...ವಾಗುವ ಹಾಗೆ ಹೇಳಬೇಕಿದೆ.


...ನು ಚಿಕ್ಕವಳಾಗಿದ್ದಾಗ ಪ್ರಥಮ ಬಾರಿಗೆ ಬಲಿ ...ರಾಜನ ಕತೆ ಕೇಳಿದಾಗ, ಅಂತಹ ಒಳ್ಳೆಯ ರಾಜನ ...ನ್ನ ಪಟಾಕಿ ಹೊಡೆಯುವ ಮೂಲಕ ಸಂಭ್ರಮಿಸುವುದು ...ೀ ಅನ್ನಿಸಿತ್ತು. ಬಲಿ ಮಹಾರಾಜನನ್ನು ಕೊಲ್ಲುವ ...ತೆ ದೇವರಾದ ವಿಷ್ಣುವಿಗೆ ಯಾಕಿತ್ತು ಎಂಬ ಪ್ರಶ್ನೆ ...ತ್ತು. ಆಗೆಲ್ಲ ಇಂತಹ ಪ್ರಶ್ನೆಗಳಿಗೆ ಉತ್ತರಗಳು ಸಿಕ್ಕಿರಲಿಲ್ಲ. ...ಗ ಬಲಿಯೊಬ್ಬನೇ ಆರ್ಯ 'ದೇವತೆ'ಗಳಿಗೆ ...ಯಾಗಲಿಲ್ಲ, ಮಹಿಷಾಸುರ ಸೇರಿದಂತೆ ಇನ್ನೂ ...ಷ್ಟು ಅನಾರ್ಯ ಹೀರೋಗಳಿದ್ದಾರೆ ಎಂದೂ, ...ರ ಕೊಲೆಗಳ ಹಿಂದೆ ಪುರೋಹಿತಶಾಹಿಗಳ ಕುತಂತ್ರ ... ಕೆಲಸ ಮಾಡಿದೆ ಎಂದೂ ಅರ್ಥವಾಗಿದೆ.

...ನ್ನೆ ಫೇಸ್‌ಬುಕ್‌ನಲ್ಲಿ ಮಂಜುರಕ್ಕಸ (ಮಧುರನಹಳ್ಳಿ) ...ವವರು ಹೀಗೆ ಬರೆದಿದ್ದರು:

...ಬಲಿ ಮಹಾರಾಜನೆ ಮರಳಿ ಬಾರಯ್ಯಾ ಈ ಕತ್ತಲ ...ದ ಜಗಕ್ಕೆ ನೀ ಬೆಳಕ ತೋರಯ್ಯಾ."

... ದೇಶದ ಮೂಲನಿವಾಸಿ ದಾನವ (ದ್ರಾವಿಡ)

...ರ್ಯ ವಿಷ್ಣುವಿನಿಂದ ಅಸುರ ಬಲಿ ಮಹಾರಾಜನ ದಮನ



...ಯಾದಂತಹ, ತನ್ನ ಸಾಮ್ರಾಜ್ಯದಲ್ಲಿ ಸಮಾನತೆಯನ್ನು ... ದೃಷ್ಟಿಯಿಂದ ದಾನಕಾರ್ಯವನ್ನೇ ತನ್ನ ...ಕಾರ್ಯವನ್ನಾಗಿಸಿಕೊಂಡಿದ್ದ, ಸತ್ಯ, ನ್ಯಾಯ, ...ಾಧಾರದ ಮೇಲೆ ರಾಜ್ಯವಾಳುತ್ತಿದ್ದ ತನ್ನ ಸಾಮ್ರಾಜ್ಯದ ...ಗೆ ನೆಮ್ಮದಿಯುತ, ಸಮೃದ್ಧ ಜೀವನ ಕಲ್ಪಿಸಿಕೊಟ್ಟಿದ್ದ ...ಚಕ್ರವರ್ತಿಯನ್ನು' ದೇವತೆಗಳ (ಆರ್ಯರ) ಏಜೆಂಟ್ 'ಮಹಾವಿಷ್ಣುವು' ವೇಷಮರೆಸಿ (ವಾಮನರೂಪ) ...

...ಂದಿನಿಂದ ಸಮಾಜದಲ್ಲಿ ಪ್ರಾರಂಭವಾದ ಮೋಸ, ..., ಅನೀತಿ, ಅಧರ್ಮ, ಅಸಮಾನತೆ ಇತ್ಯಾದಿಗಳು ... ಇಂದಿಗೂ ರಾರಾಜಿಸುತ್ತಿರುವುದನ್ನು ನಾವೆಲ್ಲರೂ ...ಹುದಾಗಿದೆ.

...ಗಾಗಿಯೇ ಈ ದೇಶದ ಮೂಲನಿವಾಸಿ ಜನರು ...ರಾಜನನ್ನು ನೆನೆದು ದೀಪ ಬೆಳಗಿ "ಇಂದು ಎಲ್ಲೆಲ್ಲೂ ...ಸುತ್ತಿರುವ ಕತ್ತಲೆಂಬ ಅನೀತಿ, ಅಧರ್ಮ, ...ರಗಳನ್ನು ಹೋಗಲಾಡಿಸಿ ಬೆಳಕೆಂಬ ನ್ಯಾಯ, ನೀತಿ, ...ವನ್ನು ಮರಳಿ ಕೊಡೆಂದು" ಬಲಿ ಮಹಾರಾಜನ ...ಸುಟ್ಟಿಗೆ ಬೇಡುತ್ತಾ ಪ್ರಾರಂಭಿಸಿದ ಹಬ್ಬವೇ ...ಪಾಡ್ಯಮಿ'..


...ರಂತವೆಂದರೆ ಇವತ್ತು ಇದಾವುದರ ಅರಿವಿಲ್ಲದೆ ...ರಾಜನನ್ನು ನೆನೆದು ದೀಪ ಬೆಳಗುವುದರ ಬದಲಾಗಿ, ...ರಾಜನನ್ನು ಮೋಸದಿಂದ ಕೊಂದುದಕ್ಕೆ ಬಳಿತೋಗಲಿನ ...ಸಂತಾಪ ಆರ್ಯರೊಡಗೂಡಿ ಪಟಾಕಿ ಹೊಡೆದು ...ಸುವ ಈ ದೇಶದ ಮೂಲನಿವಾಸಿ ಜನರಿಗೆ ...ೇಕು ಹೇಳಿ?"

...ತ್ತೀಚೆಗೆ ವಿಜಯದಶಮಿಯ ಹೊತ್ತಿಗೆ ಇದೇ ...ಲ್ಲಿನ ತಮ್ಮ ಅಂಕಣದಲ್ಲಿ ಮಿತ್ರ ಯೋಗೇಶ್ ... ಅವರು ಮಹಿಷಾಸುರನ ಬಗ್ಗೆ ಬರೆದಿದ್ದರು. ಆ ...ದಲ್ಲಿ 'ಅಸುರ ಮಹಿಷಾಸುರ ಒಳ್ಳೆಯವನೂ, ...ತನೂ ಆಗಿದ್ದರಿಂದಲೇ ಆತನ ಹೆಸರನ್ನು ಆತ ...ಗಿದ್ದ ಪ್ರದೇಶಕ್ಕೆ ಇಡಲಾಗಿತ್ತು. ಮಹಿಷಾಸುರನು ...ಜೆಯಲ್ಲಿ ಅಪಾರ ಗೌರವಕ್ಕೆ, ತನ್ನ ದಕ್ಷ ಆಡಳಿತಕ್ಕೆ, ... ಸಡೆನುಡಿಗಳಿಗೆ, ವಿದ್ಯೆಗೆ ಹೆಸರುವಾಸಿಯಾಗಿದ್ದ, ...ವಾನ್ ಬೌದ್ಧ ರಾಜನಾಗಿದ್ದ ಮಹಿಷಾಸುರನು ...ಗೆ ಧಾನ್ಯ ಪೂರೈಸಿಕೊಡಲೇ ಸಾವಿರಾರು ವನಗಳನ್ನು'

ನಿರ್ಮಿಸಿದ್ದ. ಆತನ ಸಾಮ್ರಾಜ್ಯ ಸಾವಿರಾರು ಪ್ರಾಣಿಪಕ್ಷಿಗಳ ನೆಲೆವೀಡಾಗಿತ್ತು. ಯಾವುದೇ ಕಾರಣಕ್ಕೂ ಅಲ್ಲೆಲ್ಲಾ ಯಜ್ಞಗಳನ್ನು ಆರ್ಯರು ನಡೆಸಲು ಸಾಧ್ಯವಿರಲಿಲ್ಲ. ಆತನ ರಾಜ್ಯದಲ್ಲಿ ಅನಾಗರಿಕವಾದ ಯಜ್ಞಯಾಗಾದಿಗಳಿಗೆ ಆಸ್ಪದವಿರಲಿಲ್ಲ. ಮನಬಂದಂತೆ ವೃಕ್ಷಗಳನ್ನು ಕಡಿಯುವುದಿರಲಿ, ಸಾವಿರಾರು ಗೋವುಗಳನ್ನು ಕಡಿದು ಯಜ್ಞಕ್ಕೆ ಹಾಕುವುದಕ್ಕೂ ಆರ್ಯರಿಗೆ ಅವಕಾಶವಿರಲಿಲ್ಲ. ತನ್ನ ರಾಜ್ಯದ ನೈಸರ್ಗಿಕ ಸಂಪತ್ತನ್ನು ಕಾಪಾಡಲೆಂದೇ ಮಹಿಷಾಸುರ ಸೇನಾಪತಿಗಳನ್ನು ನೇಮಿಸಿದ್ದ. ಆರ್ಯರು ನಡೆಸುತ್ತಿದ್ದ ಯಜ್ಞ ಯಾಗಾದಿಗಳನ್ನು ಈ ಸೇನಾಪತಿಗಳು ಸುಟ್ಟು ಬೂದಿ ಮಾಡುತ್ತಿದ್ದರು.

ಆರ್ಯರ ಯಜ್ಞಯಾಗಾದಿಗಳನ್ನು ಮಹಿಷನು ವಿರೋಧಿಸಿದ್ದಕ್ಕೆ ಆತನನ್ನು ದುಷ್ಟನಂತೆ ಪುರಾಣಗಳಲ್ಲಿ ಬಿಂಬಿಸಿದ್ದಾರೆ. ತನ್ನ ರಾಜ್ಯವನ್ನು ಮತ್ತು ಅದರ ಪ್ರಾಕೃತಿಕ ಸಂಪತ್ತನ್ನು ಆರ್ಯರಿಂದ ಕಾಪಾಡಿದ್ದಕ್ಕೆ ಮಹಿಷಾಸುರರನ್ನು ಆರ್ಯರು ಚಾಮುಂಡಿಯ ಕೈಯಿಂದ ಕೊಲ್ಲಿಸಿದರು' ಎಂದು ಯೋಗೇಶ್ ಬರೆದಿದ್ದರು.

ಇದೇ ಅಭಿಪ್ರಾಯವನ್ನು ಅದೇ ಹೊತ್ತಿಗೆ ಪ್ರಕಟಿಸಿದ್ದು ದೆಹಲಿಯಲ್ಲಿರುವ 'ಫಾರ್ವರ್ಡ್ ಪ್ರೆಸ್' ಎಂಬ ಪತ್ರಿಕೆ. ದಲಿತರಿಗೆ ಮತ್ತು ಬಹುಜನರಿಗೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸುವ ಈ ಪತ್ರಿಕೆ ದಸರಾ ಹಬ್ಬದ ಸಂದರ್ಭದಲ್ಲಿ 'ಬಹುಜನರ-ಶ್ರಮಿಕರ ಸಂಪ್ರದಾಯ' ಎಂಬ ವಿಶೇಷ ಸಂಚಿಕೆಯನ್ನು ಹೊರತಂದಿತ್ತು. ಆ ಸಂಚಿಕೆಗೆ



ಮಹಿಷಾಸುರ ಹುತಾತ್ಮನಾದ ದಿನ'ದಂದು ಪಶ್ಚಿಮ ಬಂಗಾಲದಲ್ಲಿ ಪೂಜಿಸಲ್ಪಟ್ಟ ಮಹಿಷಾಸುರನ ಪ್ರತಿಮೆ

ಪ್ರಮುಖ ಲೇಖಕರು ಮತ್ತು ವಿವಿಧ ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳು ದುರ್ಗ ಮತ್ತು ಮಹಿಷಾಸುರನ ನಡುವಿನ ಸಂಬಂಧದ ಬಗ್ಗೆ ಮತ್ತು ಯುದ್ಧದ ಬಗ್ಗೆ ಲೇಖನಗಳನ್ನು ಬರೆದಿದ್ದರು. ಅವುಗಳ ಮೂಲ ಉದ್ದೇಶ ಪುರೋಹಿತಶಾಹಿಗಳು ಕಟ್ಟಿರುವ ಮಿಥ್ಯೆಗಳನ್ನು ಕಣ್ಣುಮುಚ್ಚಿ ನಂಬುವ ಬದಲಾಗಿ ಧಾರ್ಮಿಕ ಸಂಪ್ರದಾಯಗಳನ್ನು ತಲಸ್ಪರ ಪರಂಪರೆ ಮತ್ತು ತರ್ಕಬದ್ಧ ದೃಷ್ಟಿಕೋನದಿಂದ ನೋಡುವುದಾಗಿತ್ತು.


ಈ ವಿಶೇಷ ಸಂಚಿಕೆಯನ್ನು ಹೊರತರುವುದಕ್ಕೂ ಒಂದು ಹಿನ್ನೆಲೆ ಇತ್ತು. ಅದು ಪಶ್ಚಿಮ ಬಂಗಾಳದಲ್ಲಿ ಜನಪ್ರಿಯವಾಗಿರುವ ದುರ್ಗಾ ಪೂಜೆ. 14ನೇ ಶತಮಾನದಲ್ಲಿ ಈ ದುರ್ಗಾ ಪೂಜೆಯನ್ನು ಪ್ರಭಾವಿ ಭೂಮಾಲೀಕರು ಆಚರಿಸಲಾರಂಭಿಸಿದರು. ಆದರೆ ಬರುಬರುತ್ತಾ ಅದು ಒಂದು ರೀತಿಯಲ್ಲಿ ಇಡೀ ಸಮುದಾಯದ ಹಬ್ಬವಾಗಿ ಮಾರ್ಪಾಡುಗೊಂಡಿತು. ಈಗ ಬಂಗಾಳದ ಗಲ್ಲಿಗಲ್ಲಿಯಲ್ಲೂ ದುರ್ಗೆಯ ಪ್ರತಿಮೆಯನ್ನಿಟ್ಟು ಹಬ್ಬವನ್ನು ಆಚರಿಸಲಾಗುತ್ತಿದೆಯಾದರೂ ಅವುಗಳ ಮೇಲೆ ಈಗಲೂ ಬ್ರಾಹ್ಮಣ ಮತ್ತು ಕಯಸ್ತ ಎಂಬ 'ಮೇಲು' ಜಾತಿಗಳ ಹಿಡಿತ ಇದ್ದೇ ಇದೆ. ಮಾತ್ರವಲ್ಲ ದುರ್ಗಾ ಪೂಜೆಯ ಸಾರಾಂಶ 'ದುಷ್ಟ ಮಹಿಷಾಸುರ'ನನ್ನು ಕೊಲ್ಲುವ ಮೂಲಕ

ದುರ್ಗಾ ದೇವಿಯು 'ಪೂಜ್ಯ' ದೇವತೆಗಳಿಗೆ ನೆರವಾದಳು ಎಂಬುದೇ ಆಗಿದೆ.

ಆದರೆ ಇತ್ತೀಚೆಗೆ ಹಲವು ದಲಿತರು ಮತ್ತು ಹಿಂದುಳಿದ ವರ್ಗದವರು ದುರ್ಗಾ ಪೂಜೆಯ ವಿರುದ್ಧ ತಮ್ಮದೇ ಆದ 'ಮಹಿಷಾಸುರ ಹುತಾತ್ಮನಾದ ದಿನ'ವನ್ನು ಆಚರಿಸಲಾರಂಭಿಸಿದ್ದಾರೆ. ಅವರ ಪ್ರಕಾರ ದುರ್ಗಾ ಪೂಜೆಯು ಆದಿವಾಸಿಗಳನ್ನು ದಮನ ಮಾಡಿದ ಆರ್ಯರ ಜಯವನ್ನು ಸಂಭ್ರಮಿಸುವ ಹಬ್ಬ. ಅಸುರನಾಗಿದ್ದ ಮಹಿಷಾಸುರ ಆರ್ಯರ ಯಜ್ಞಯಾಗಾದಿಗಳಿಗೆ ಆಸ್ಪದ ಕೊಡುತ್ತಿರಲಿಲ್ಲವಾದ್ದರಿಂದ ಅವರು ತಂತ್ರವೊಂದನ್ನು ಹೆಣೆದು ಮಹಿಷಾಸುರರನ್ನು ಮೋಸ ಮಾಡಿ ಕೊಲ್ಲಲು ದುರ್ಗೆಯನ್ನು ನಿಯೋಜಿಸಿದರು. ಸುಂದರವಾಗಿದ್ದ ದುರ್ಗೆಯ ನಿಜವಾದ ಉದ್ದೇಶ ಗೊತ್ತಿರದಿದ್ದ ಮಹಿಷಾಸುರ ಆಕೆಯನ್ನು ತನ್ನ ಮನೆಗೆ ಬರಮಾಡಿಕೊಂಡ. ತಲಸ್ಪರ ಸಮುದಾಯಗಳ ಇತಿಹಾಸದ ಪ್ರಕಾರ ದುರ್ಗೆ ಮಹಿಷಾಸುರನನ್ನು ಮೋಡಿ ಮಾಡಿ ಆತನೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿದಳು. ಒಂದು ವಾರ ಕಾಲ ದುರ್ಗಾ ಮಹಿಷಾಸುರನೊಂದಿಗೆ ಇದ್ದಾಗ ದೇವಾನುದೇವತೆಗಳೆಲ್ಲ ಆತನ ಅರಮನೆಯ ಸುತ್ತ ಹೊಂಚುಹಾಕಿ ಕಾಯುತ್ತಿದ್ದರು. ಕೊನೆಗೊಂದು ದಿನ ಕಂಠಮಟ್ಟ ಕುಡಿದ ದುರ್ಗೆ ನಿದ್ರಿಸುತ್ತಿದ್ದ ಮಹಿಷಾಸುರನಿಗೆ ಚೂರಿ ಹಾಕಿ ಆತನನ್ನು ಕೊಂದು ಹಾಕಿದಳು. ದುರ್ಗೆ ಹೀಗೆ ಅನೈತಿಕ ಸಂಬಂಧ ಹೊಂದಿದ್ದರಿಂದಲೇ ಇಂದಿಗೂ ದುರ್ಗೆಯ ಪ್ರತಿಮೆಗಳನ್ನು ತಯಾರಿಸಲು ಮೊದಲ ಹಿಡಿ ಮಣ್ಣನ್ನು ಲೈಂಗಿಕ ಕಾರ್ಯಕರ್ತೆಯರ ಮನೆಯಿಂದ ತರಲಾಗುತ್ತದೆ.

ಮಹಿಷಾಸುರನ ಹೆಣ ಬಿದ್ದಿದ್ದೇ ತಡ ದೇವತೆಗಳೆಲ್ಲ ಆತನ ರಾಜ್ಯದ ಮೇಲೆ ದಾಳಿ ಇಟ್ಟು ಅಸುರರನ್ನು ಕೊಂದು ಹಾಕಿದರು. ಅಡಗಿಕೊಂಡಿದ್ದರಿಂದ ಬದುಕುಳಿದಿದ್ದ ಅಸುರರು ಅಶ್ವಿನಿ ಪೂರ್ಣಿಮೆಯ ರಾತ್ರಿ ಹೊರಬಂದು ಮಡಿದಿದ್ದ ತಮ್ಮ ರಾಜ ಮಹಿಷಾಸುರನಿಗಾಗಿ ಶೋಕಿಸಿದರು. ಇವತ್ತಿಗೂ ಜಾರ್ಖಂಡ್ ರಾಜ್ಯದಲ್ಲಿರುವ ಅಸುರ್ ಎಂಬ ಆದಿವಾಸಿಗಳು ದುರ್ಗಾ ಪೂಜೆಯ ಸಂದರ್ಭದಲ್ಲಿ ಹಗಲ ಹೊತ್ತು ತಮ್ಮ ಮನೆಯಲ್ಲಿ ಇದ್ದು ರಾತ್ರಿ ಮಾತ್ರ ಹೊರಗೆ ಬಂದು ಮಹಿಷಾಸುರನ ಸಾವಿಗೆ ದುಃಖಿಸುತ್ತಾರೆ.

ಅಶ್ವಿನಿ ಪೂರ್ಣಿಮೆಯು ವಿಜಯದಶಮಿ ಮುಗಿದ ಐದು ದಿನಗಳ ನಂತರ ಬರುತ್ತದೆ. ಈ ವರ್ಷ ವಿಜಯ




'ಫಾರ್ವರ್ಡ್ ಪ್ರೆಸ್' ಪತ್ರಿಕೆಯ ವಿಶೇಷ ಸಂಚಿಕೆಯ ಮುಖಪುಟ

ದಶಮಿಯನ್ನು ಅಕ್ಟೋಬರ್ 4ರಂದು ಆಚರಿಸಲಾಯಿತಲ್ಲದೆ ಅಕ್ಟೋಬರ್ 9 ಅಶ್ವಿನಿ ಪೂರ್ಣಿಮೆಯ ದಿನವಾಗಿತ್ತು. ಆ ಕಾರಣಕ್ಕೆ ಅವತ್ತು ಹಲವಾರು ಕಡೆ 'ಮಹಿಷಾಸುರ ಹುತಾತ್ಮನಾದ ದಿನ'ವನ್ನು ಆಚರಿಸಲಾಯಿತು. ಅಂತಹ ಸಮಾರಂಭಗಳಲ್ಲಿ ಮಹಿಷಾಸುರನನ್ನು 'ಶೂರ ಅಸುರ ರಾಜ' ಎಂದು ಪೂಜಿಸಲಾಯಿತು.

ಕಳೆದ ನಾಲ್ಕು ವರ್ಷಗಳಿಂದ ದೆಹಲಿಯಲ್ಲಿರುವ ಪ್ರತಿಷ್ಠಿತ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ದಲಿತ, ಹಿಂದುಳಿದ ಮತ್ತು ಆದಿವಾಸಿ ವಿದ್ಯಾರ್ಥಿಗಳೂ 'ಮಹಿಷಾಸುರ ಹುತಾತ್ಮನಾದ ದಿನ'ವನ್ನು ಆಚರಿಸುತ್ತಾ ಬಂದಿದ್ದಾರೆ. ಈ ವರ್ಷದ ಸಮಾರಂಭಕ್ಕೆ ಪೂರ್ವಭಾವಿಯಾಗಿ ಆ ವಿದ್ಯಾರ್ಥಿಗಳು ಮಹಿಷಾಸುರ ಮತ್ತು ದುರ್ಗೆಯ ಬಗ್ಗೆ ಲೇಖನಗಳಿದ್ದ 'ಫಾರ್ವರ್ಡ್ ಪ್ರೆಸ್' ಪತ್ರಿಕೆಯ ಪ್ರತಿಗಳನ್ನು ವಿಶ್ವವಿದ್ಯಾಲಯದಲ್ಲಿ ಹಂಚಿದ್ದರು.

ಆ ಲೇಖನಗಳನ್ನು ಓದಿದ್ದೇ ತಡ ಪುರೋಹಿತಶಾಹಿ ಚಡ್ಡಿಗಳಿಗೆ ಉರಿಯಲಾರಂಭಿಸಿತು. ಆಗ ಆರೆಸ್ಸೆಸ್‌ನ ಒಂದು ಸಂಘಟನೆಯಾದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಾದ ಇಬ್ಬರು "ನಮ್ಮ ಧಾರ್ಮಿಕ ನಂಬಿಕೆಗಳಿಗೆ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

'ಫಾರ್ವರ್ಡ್ ಪ್ರೆಸ್' ಪತ್ರಿಕೆಯು ಹಾನಿ ಮಾಡಿದೆ. ನಮ್ಮ ದೇವತೆಯನ್ನು ಆ ಪತ್ರಿಕೆ ಅವಹೇಳನ ಮಾಡಿದೆ" ಎಂದು ಪೊಲೀಸರಿಗೆ ದೂರು ನೀಡಿದರು.

ಹೇಗಿದ್ದರೂ ಈಗ ಕೋಮು ಕಿತಾಪತಿ ಬುದ್ಧಿಯ, ಪುರೋಹಿತಶಾಹಿಗಳ ರಕ್ಷಣೆಗೆ ನಿಂತಿರುವ, ಹಿಂದೂತ್ವವಾದಿ ಸಿದ್ಧಾಂತದ ನರೇಂದ್ರ ಮೋದಿಯೇ ಪ್ರಧಾನಿ ಆಗಿರುವುದರಿಂದ ಪೊಲೀಸರು 'ಫಾರ್ವರ್ಡ್ ಪ್ರೆಸ್' ಕಚೇರಿಯ ಮೇಲೆ ದಾಳಿ ಮಾಡಿ ನಾಲ್ವರನ್ನು ಬಂಧಿಸಿದರಲ್ಲದೆ, ಅಲ್ಲಿದ್ದ ವಿಶೇಷ ಸಂಚಿಕೆಯ ಎಲ್ಲಾ ಪ್ರತಿಗಳನ್ನು ಜಪ್ತಿ ಮಾಡಿಕೊಂಡರು. ಅಷ್ಟೇ ಅಲ್ಲ, ಯಾವುದೇ ನ್ಯಾಯಾಲಯ ಪತ್ರಿಕೆಯನ್ನು ಜಪ್ತಿ ಮಾಡಬೇಕೆಂದು ಆದೇಶ ನೀಡಿರದಿದ್ದರೂ ದೆಹಲಿಯ ಎಲ್ಲಾ ಅಂಗಡಿಗಳಲ್ಲಿದ್ದ ಪತ್ರಿಕೆಯ ಪ್ರತಿಗಳನ್ನು ಅಕ್ರಮವಾಗಿ ಹೊತ್ತೊಯ್ದರು.

ಇದಕ್ಕೂ ಮುನ್ನ ದಲಿತ, ಹಿಂದುಳಿದ ಮತ್ತು ಆದಿವಾಸಿ ವಿದ್ಯಾರ್ಥಿಗಳು ಅಕ್ಟೋಬರ್ 9ರಂದು 'ಮಹಿಷಾಸುರ ಹುತಾತ್ಮನಾದ ದಿನ'ವನ್ನು ಆಚರಿಸಕೂಡದೆಂದು ಧಮಕಿ ಹಾಕಲಾರಂಭಿಸಿದರು. ಆದರೆ ವಿದ್ಯಾರ್ಥಿಗಳು ಇದಕ್ಕೆ ಮಣಿಯದೆ ತಮ್ಮ ಕಾರ್ಯಕ್ರಮವನ್ನು ಏರ್ಪಡಿಸಿದರು. ಗೂಂಡಾ ಪ್ರವೃತ್ತಿಯ ಚಡ್ಡಿಗಳು ಕಾರ್ಯಕ್ರಮ ನಡೆಯುತ್ತಿದ್ದ ಜಾಗೆಯ ಮೇಲೆ ದಾಳಿ ಮಾಡಿ ಗಲಭೆ ಎಬ್ಬಿಸಿದರು.

ಇದೆಲ್ಲ ಏನನ್ನು ಸೂಚಿಸುತ್ತದೆ?

ಎಲ್ಲಿಂದಲೋ ಬಂದ ಆರ್ಯರು ದೇವತೆಗಳೆಂದು, ಇಲ್ಲಿನ ಮೂಲನಿವಾಸಿಗಳಾದ ನಮ್ಮ ಪೂರ್ವಿಕರು ರಾಕ್ಷಸರೆಂದು, ಅವರು ಶ್ರೇಷ್ಠರು ಮತ್ತು ಉತ್ತಮರು, ಆದರೆ ನಮ್ಮವರು ದುಷ್ಟರು ಮತ್ತು ನೀಚರು ಎಂದು ಬಿಂಬಿಸುವ ಅವರದೇ ಸೃಷ್ಟಿಯಾದ ಮಿಥ್ಯಗಳನ್ನೆಲ್ಲ ನಾವು ಕಣ್ಣುಮುಚ್ಚಿ ನಂಬಬೇಕು ಎಂಬುದನ್ನಲ್ಲವೇ?


ತಲಸ್ಪರ ಸಂಸ್ಕೃತಿಯನ್ನು ಮತ್ತು ಸಂಪ್ರದಾಯಗಳನ್ನು ನಿರಾಕರಿಸಿದ ಪುರೋಹಿತಶಾಹಿಗಳು ಕಲ್ಪಿಸಿ ಕೊಟ್ಟಿರುವ 'ಐತಿಹಾಸಿಕ ಮಿಥ್ಯಗಳನ್ನು' ಯಾರೂ ಪ್ರಶ್ನಿಸಬಾರದು ಎಂಬ ನೀತಿಯನ್ನಲ್ಲವೇ? ಹಾಗೊಮ್ಮೆ ಅವರ 'ಪೂಜ್ಯ ದೇವತೆ'ಗಳನ್ನು ಪ್ರಶ್ನಿಸಿದರೆ ಸೂಕ್ತ 'ದಮನ'ವನ್ನು ಎದುರಿಸಬೇಕಾಗುತ್ತದೆ ಎಂಬ ಸಿದ್ಧಾಂತವನ್ನಲ್ಲವೇ?


ಕತೆ, ಮಿಥ್ಯೆ, ಪುರಾಣ ಇತ್ಯಾದಿಗಳ ಹಿಂದೆ ಹಲವಾರು ಆಯಾಮಗಳಿರುತ್ತವೆ. ಹೇಗೆ ಬ್ರಿಟಿಷರು ಬರೆದ ನಮ್ಮ ದೇಶದ ಇತಿಹಾಸ ಮಾತ್ರ ಸರಿಯಾದುದ್ದಲ್ಲವೋ, ಹೇಗೆ ಅದಕ್ಕೂ ಹಲವಾರು ಆಯಾಮಗಳಿವೆಯೋ, ಹಾಗೆಯೇ ನಮ್ಮ ಎಲ್ಲಾ ಕತೆ, ಮಿಥ್ಯೆಗಳ ಹಿಂದೆಯೂ ಪುರೋಹಿತಶಾಹಿಗಳ ಕುತಂತ್ರವೂ, ತಲಸ್ಪರ ಆಯಾಮವೂ ಇದ್ದೇ ಇರುತ್ತದೆ.

ಅಂತಹ ಆಯಾಮಗಳನ್ನು ಸಂಶೋಧಿಸುವುದು, ವಿಶ್ಲೇಷಿಸುವುದು, ಅರ್ಥಮಾಡಿಕೊಳ್ಳುವುದು, ಪ್ರಚುರಪಡಿಸುವುದು ಕಾನೂನುಬಾಹಿರವೇನಲ್ಲ. ಈ ದೀಪಾವಳಿಯ ಸಂದರ್ಭದಲ್ಲಿ ಜನಪರ ಅಸುರ ಬಲಿ ಮಹಾರಾಜನನ್ನು ಹೇಗೆ ಆರ್ಯ ಪುರೋಹಿತಶಾಹಿಗಳ ವಿಷ್ಣು ವಂಚಿಸಿದ, ದಮನ ಮಾಡಿದ, ಕೊಂದು ಹಾಕಿದ ಎಂಬುದನ್ನಾದರೂ ಎಲ್ಲರಿಗೆ ತಿಳಿಸೋಣ. ಜಾತಿ ಕ್ರೌರ್ಯ, ಆದಿವಾಸಿಗಳ ದಮನ, ಮಹಿಳೆಯರ ಶೋಷಣೆ ಇದ್ದ ಆರ್ಯ ರಾಮ ರಾಜ್ಯದ ಬದಲಾಗಿ ಎಲ್ಲರಿಗೂ ಲೇಸನ್ನು ಬಯಸಿದ್ದ ಅಸುರ ಬಲಿ ಮಹಾರಾಜನ ರಾಜ್ಯದಲ್ಲಿದ್ದ ನೆಮ್ಮದಿ ಮತ್ತು ಸಮೃದ್ಧಿ ನಮ್ಮ ದೇಶದ ಎಲ್ಲರಿಗೂ ಸಿಗಲಿ ಎಂದು ಆಶಿಸುತ್ತಾ ದೀಪಗಳನ್ನು ಬೆಳಗಿಸೋಣ.

ಧಾರವಾಡ ವಿವಿ ಹಗರಣ

ವಾಲಿ ವರ್ಸಸ್ ವಾಲಾ


ವಾಲೀಕಾರ


ವಜುಬಾಯ್ ವಾ

ಕಡೆಗೂ ರಾಜ್ಯಪಾಲ ವಜೂಭಾಯ್ ವಾಲಾರ ಆಟ ಶುರುವಾಗಿದೆ. ಯಾವ ಉದ್ದೇಶಕ್ಕಾಗಿ ಮೋದಿ ಮತ್ತು ಆರೆಸ್ಸೆಸ್ ಟೀಮು ವಜೂಭಾಯನ್ನು ಗುಜರಾತ್ ರಾಜಕಾರಣದಿಂದ ಕಿತ್ತು ತಂದು ಕರ್ನಾಟಕದಲ್ಲಿ ನೆಟ್ಟಿದ್ದರೋ ಆ ಕೆಲಸವನ್ನು ಧಾರವಾಡದ ಕರ್ನಾಟಕ ಯೂನಿವರ್ಸಿಟಿ ಕ್ಯಾಂಪಸ್‌ನಿಂದ ವಾಲಾ ಆರಂಭಿಸಿದ್ದಾರೆ. ರಾಜಭವನದ ಕೇಸರಿ ರಾಜಕಾರಣಕ್ಕೆ ಮೊದಲು ಪತನವಾಗಿರೋ ವಿಕೆಟ್ಟು ಕುಲಪತಿ ಎಚ್.ಬಿ. ವಾಲೀಕಾರ್‌ದು. ಭ್ರಷ್ಟಾಚಾರ, ಅಕ್ರಮ, ಹಗರಣ ಮತ್ತು ಇವೆಲ್ಲವನ್ನೂ ಸಾಬೀತುಮಾಡುವ ತನಿಖಾ ವರದಿಯ 'ನೆಪವಿಟ್ಟುಕೊಂಡು ವಿವಿ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಹಾಲಿ ಕುಲಪತಿಯೊಬ್ಬರನ್ನು ಜೈಲಿಗಟ್ಟಿರುವ ರಾಜ್ಯಪಾಲರ 'ಸಾಹಸ' ಮೇಲ್ನೋಟಕ್ಕೆ ಕಾಣುವಷ್ಟು ಸಲೀಸಾಗಿಯೂ ಇಲ್ಲ, ನಿಷ್ಪಕ್ಷವಾಗಿಯೂ ಇಲ್ಲ.

ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಕೇಂದ್ರದ ಯುಪಿಎ ಸರ್ಕಾರ ನೇಮಿಸಿದ್ದ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಕೇಸರಿ ಸರ್ಕಾರವನ್ನು ಹೇಗೆಲ್ಲಾ ಕಾಡಿದ್ದರು ಎಂಬುದು ಗೊತ್ತಿರುವಂತದ್ದೇ. ಯಡ್ಡಿಯಂತೂ ಭಾರದ್ವಾಜ್ ಹೆಸರು ಕೇಳಿದರೆ ನಿದ್ರೆಯಲ್ಲೂ ಬೆಚ್ಚಿ ಬೀಳುವಷ್ಟು ಸನ್ನಿಗೆ ಬಂದು ತಲುಪಿದ್ದರು. ಈಗ ಅಧಿಕಾರಕ್ಕೇರಿರುವ ಕಾಂಗ್ರೆಸ್ ರಾಜ್ಯ ಸರ್ಕಾರದ ಇಮೇಜನ್ನು ಹಾಳು ಮಾಡಿ ಬಿಜೆಪಿಗೆ ಬುನಾದಿ ಹಾಕುವ ಸಲುವಾಗೇ ಮೂಲತಃ ಜಗುಟು ಸ್ವಭಾವದ ಚಾಣಾಕ್ಷ ವಜೂಭಾಯನ್ನು ಮೋದಿ ಸರ್ಕಾರ ಇಲ್ಲಿಗೆ ರಾಜ್ಯಪಾಲರನ್ನಾಗಿ ನೇಮಿಸಿದ್ದು. ಆ ಘನಕಾರ್ಯದ ರಿಹರ್ಸಲ್ಲೇ ಈ ಧಾರವಾಡ ಯೂನಿವರ್ಸಿಟಿ ರಗಳೆ!

ಹಾಗೆ ನೋಡಿದರೆ ಕುಲಪತಿ ಎಚ್.ಬಿ. ವಾಲೀಕಾರ್ ಪರಮ ಪ್ರಾಮಾಣಿಕನೇನಲ್ಲ. 2010ರ ಜುಲೈ 25ರಿಂದ ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆ ಅವಧಿಯ ತನಕ ವಿವಿಯಲ್ಲಿ ಸುಮಾರು 110 ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎನ್ನುವುದೇ ವಾಲೀಕಾರ್ ಮೇಲಿರುವ ಪ್ರಮುಖ ಆರೋಪ. ಅದಲ್ಲದೆ ಕಾನೂನು ಉಲ್ಲಂಘನೆ, ಅಧಿಕಾರ ದುರುಪಯೋಗ, ಚುನಾವಣಾ ನೀತಿಸಂಹಿತೆ ಉಲ್ಲಂಘನೆಗಳ ಗೂಬೆಗಳೂ ವಾಲೀಕಾರ್ ನೆತ್ತಿಯ ಮೇಲೆ ಕೂತಿವೆ. ಕ್ಯಾಂಪಸ್ ಮಾಹಿತಿಗಳ ಪ್ರಕಾರ ಈ ಎಲ್ಲಾ ಆರೋಪಗಳು ಸತ್ಯಕ್ಕೆ ಹತ್ತಿರವಾಗಿವೆ ಎನ್ನಲಾಗುತ್ತಿದೆ. ಅಂದರೆ ವಾಲೀಕಾರ್ ವೇದಿಕೆಯ ಮೇಲೆ ಭಾಷಣ ಬಿಗಿಯುವಷ್ಟು ಪ್ರಾಮಾಣಿಕನೇನೂ ಅಲ್ಲ ಎನ್ನುವುದಂತೂ ಸತ್ಯ. ಈ ಒಂದು ಅಸ್ತ್ರವನ್ನೇ ಮುಂದಿಟ್ಟುಕೊಂಡು ಅಕ್ಯಾಡೆಮಿಕ್ ಆರೆಸ್ಸೆಸ್ಸಿಗರು ಹಿಂದುಳಿದ ಕುರುಬ ಸಮುದಾಯದ ವಾಲೀಕಾರ್‌ನನ್ನು ಖೆಡ್ಡಾಗಿ ಕೆಡವಿರುವುದು ಕೂಡಾ ಅಷ್ಟೇ ಸತ್ಯ.

ರಾಜ್ಯಪಾಲರ ಆತುರ

ಇಡೀ ಪ್ರಕರಣದಲ್ಲಿ ರಾಜ್ಯಪಾಲರು ತೋರಿದ ಆತುರದ ಹಿಂದೆ ಅನುಮಾನಗಳು ಮೂಡುತ್ತವೆ. ಸುಶಿಕ್ಷಿತ ಯುವಸಮುದಾಯವನ್ನು ಸೃಷ್ಟಿಸುವ ವಿವಿ ಆವರಣಗಳಲ್ಲಿ ಭ್ರಷ್ಟಾಚಾರದಂತಹ ಅಕ್ರಮಗಳು ನಿಜಕ್ಕೂ ಅಕ್ಷಮ್ಯ. ಈ ಕುರಿತು ವಿವಿಗಳ ಕುಲಪತಿಯಾದ ರಾಜ್ಯಪಾಲರು ಕ್ರಮ ಕೈಗೊಳ್ಳಬೇಕಾದ್ದು ಸ್ವಾಗತಾರ್ಹ. ಆದರೆ ಆ ನಿಟ್ಟನಲ್ಲಿ ನೋಡುವುದಾದರೆ ಧಾರವಾಡ ವಿವಿಗಿಂತ ಅಪಾರ ಹಗರಣ, ಭ್ರಷ್ಟಾಚಾರಗಳ ಕಳಂಕ ಹೊತ್ತಿರುವ ಬೆಳಗಾವಿ ಮತ್ತು ತುಮಕೂರು ವಿವಿಗಳಿಗೆ ರಾಜ್ಯಪಾಲರ ಭ್ರಷ್ಟಾಚಾರ ನಿರ್ಮೂಲನೆ ಬಿಸಿ ಮೊದಲು ತಟ್ಟಬೇಕಿತ್ತು, ಇತ್ತೀಚಿನ ದಿನಗಳಲ್ಲಂತೂ ಹಗರಣ ಮತ್ತು ವಿವಿಯ ಹೆಸರು ಒಟ್ಟೊಟ್ಟಿಗೇ ಕಾಣಿಸಿಕೊಳ್ಳುವಷ್ಟು ಪರಿಸ್ಥಿತಿ ಬಿಗಡಾಯಿಸಿದೆ. ಬೆಂಗಳೂರು ವಿವಿಯಲ್ಲಿ ಡಾ.ಎನ್. ಪ್ರಭುದೇವ್ ವಿಸಿಯಾಗಿದ್ದಾಗ ಅಂದಿನ ಕುಲಸಚಿವ ಪ್ರೊ.ಬಿ.ಸಿ. ಮೈಲಾರಪ್ಪ ಮತ್ತು ಅವರ ನಡುವಿನ ವೈಮನಸ್ಯದಿಂದ ವಿವಿ ಆಡಳಿತ ನಲುಗಿತ್ತು, ಪರೀಕ್ಷಾ ವಿಭಾಗದ ಅಕ್ರಮದ ಹಿನ್ನೆಲೆಯಲ್ಲಿ ಈ ವರ್ಷ ಮಾಜಿ ಸಿಂಡಿಕೇಟ್ ಸದಸ್ಯರೊಬ್ಬರ ಬಂಧನವೂ ಆಗಿದೆ. ಇನ್ನು ರಾಜೀವ್‌ಗಾಂಧಿ ವಿವಿಯಲ್ಲಿ ಉತ್ತರ ಪತ್ರಿಕೆಗಳ ತಿದ್ದುಪಡಿ ಮಾಡಿರುವ ವಿವಾದ ಹೊಗೆಯಾಡುತ್ತಿದೆ. ಕಳೆದ ಬಾರಿ ಮೌಲ್ಯಮಾಪನ ಕುಲಸಚಿವರನ್ನು ಅಮಾನತುಗೊಳಿಸಿದ ಘಟನೆಗೂ ಆರೋಗ್ಯ ವಿವಿ ಸಾಕ್ಷಿಯಾಗಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯಲ್ಲಿ ಸಿಬ್ಬಂದಿ ನೇಮಕ ಹಗರಣದ ಆರೋಪ ಕೇಳಿಬಂದಿದ್ದು, ಯಾವುದೇ ಗಂಭೀರ ಕ್ರಮ ಜಾರಿಯಾಗಿಲ್ಲ.

ಇನ್ನು ಬೆಳಗಾವಿಯ ರಾಣಿ ಚನ್ನಮ್ಮ ವಿವಿಯಲ್ಲಿ ನೇಮಕ ಹಗರಣ ನಡೆದಿರುವ ಬಗ್ಗೆ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಮೈಸೂರಿನ ಮುಕ್ತ ವಿವಿಯ ತಾತ್ಕಾಲಿಕ ಉಪನ್ಯಾಸಕರ ನೇಮಕದಲ್ಲಿ ನಿಯಮ ಉಲ್ಲಂಘನೆಯ ಆರೋಪವಿದೆ. ಮೈಸೂರು ವಿವಿ ವಿಸಿಯಾಗಿ ಪ್ರೊ.ರಂಗಪ್ಪ ಅವರನ್ನು ನೇಮಿಸುವ ಹಂತದಲ್ಲಿ ಅವರ ವಿರುದ್ಧ ಹೈಕೋರ್ಟ್‌ನಲ್ಲಿ ದಾವೆ ಹೂಡಲಾಗಿತ್ತು. ಸಂಸ್ಕೃತ ವಿವಿಯಲ್ಲಿಯೂ ನಿಯಮ ಉಲ್ಲಂಘಿಸಿ ಉಪನ್ಯಾಸಕರ ನೇಮಕ ಮಾಡಲಾದ ಆರೋಪ ಕೇಳಿಬಂದಿದೆ.

ಹೀಗೆ ಪ್ರತಿಯೊಂದು ವಿವಿಯಲ್ಲೂ ಇಷ್ಟೆಲ್ಲಾ ಆರೋಪಗಳಿದ್ದಾಗ್ಯೂ ಧಾರವಾಡ ವಿವಿ ಹಗರಣದ ಬಗ್ಗೆ ಮಾತ್ರವೇ ರಾಜ್ಯಪಾಲ ವಜೂಭಾಯಿ ವಿಶೇಷ ಆಸ್ಥೆ




ವಹಿಸಿದ್ದು ಯಾಕೆ? ಎನ್ನುವ ಪ್ರಶ್ನೆ ಸಹಜವಾಗಿಯೇ ಕಾಡುತ್ತದೆ. ವಜೂಭಾಯಿ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಿದ್ದು ಸೆಪ್ಟೆಂಬರ್ 1 ರಂದು, ಅಲ್ಲಿಂದ ಸರಿಯಾಗಿ ಇಪ್ಪತ್ತೆರಡು ದಿನಗಳಲ್ಲೇ ಸರ್ಕಾರದ ಸಲಹೆಯನ್ನೂ ಪಡೆಯದೆ ಏಕಾಏಕಿ ಸೆಪ್ಟೆಂಬರ್ 23 ರಂದು ವಾಲೀಕಾರ್ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ನ್ಯಾ. ಬಿ. ಪದ್ಮರಾಜ ಏಕಸದಸ್ಯ ತನಿಖಾ ಸಮಿತಿ ರಚನೆ ಮಾಡಿದ್ದರು. ಕೇಳಿಬಂದಿರುವ ಎಲ್ಲಾ ಆರೋಪಗಳು ಮೇಲ್ನೋಟಕ್ಕೆ ಸತ್ಯವಾಗಿರುವಂತವು, ಚುನಾವಣೆ ನೀತಿ ಸಂಹಿತೆಯನ್ನು ಉಲ್ಲಂಘಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ಪದ್ಮರಾಜ ಸಮಿತಿ ವರದಿ ಸಲ್ಲಿಸಿತ್ತು, ಇಂತಹದ್ದೊಂದು ವರದಿ ಕೈ ಸೇರುತ್ತಿದ್ದಂತೆಯೇ ವಾಲೀಕಾರ್ ವಿರುದ್ಧ ಲೋಕಾಯುಕ್ತ ದೂರು ನೀಡುವಂತೆ ರಾಜ್ಯಪಾಲ ವಜುಭಾಯಿ, ವಿವಿಯ ಕುಲಸಚಿವೆ ಡಾ.ಚಂದ್ರಮಾ ಕಣಗಲಿ ಅವರಿಗೆ ನಿರ್ದೇಶನ ನೀಡಿದ್ದರು. ಅದರಂತೆ ಅಕ್ಟೋಬರ್ 2 ರಂದು ಆಕೆ ದೂರನ್ನೂ ನೀಡಿದ್ದರು. ಆ ದೂರಿನ ಮೇರೆಗೇ ಮೊನ್ನೆ ಲೋಕಾಯುಕ್ತ ಪೊಲೀಸರು ಕುಲಪತಿ ಡಾ.ಎಚ್.ಬಿ. ವಾಲೀಕಾರ, ಮೌಲ್ಯಮಾಪನ ಕುಲಸಚಿವ ಡಾ.ಎಚ್.ಟಿ. ಪೋತೆ, ಹಣಕಾಸು ಅಧಿಕಾರಿ ರಾಜಶ್ರೀ ಹಾಗೂ ಕುಲಪತಿಗಳ ಆಪ್ತ ಸಹಾಯಕ ಎಸ್.ಎಲ್.ಬೀಳಗಿ ಅವರನ್ನು ಅರೆಸ್ಟ್ ಮಾಡಿದ್ದಾರೆ.

ಸ್ವಯಂಕೃತ ದುಸ್ಥಿತಿ ಮತ್ತು ಕೇಸರಿ ಕಿತಾಪತಿ

ಹುಂಬತನದ ವಾಲೀಕಾರ್ ತಾನು ಅಧಿಕಾರ ವಹಿಸಿಕೊಂಡ ಮೊದಲ ದಿನದಿಂದಲೂ ಎಡವಟ್ಟುಗಳ ಮೇಲೆ ಎಡವಟ್ಟುಗಳನ್ನು ಮಾಡಿಕೊಳ್ಳುತ್ತಲೇ ಬಂದರು. ಕೊಂಚ ಸರ್ವಾಧಿಕಾರಿ ಧೋರಣೆಯ ವಾಲೀಕಾರ್ ಮತ್ತೊಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವ ಜಾಯಮಾನದವರಲ್ಲ, ಹಾಗಾಗಿಯೇ ತನಗೆ ಚಮಚಾಗಿರಿ ಮಾಡುವಂತವರನ್ನು ಆಯಕಟ್ಟಿನ ಜಾಗೆಯಲ್ಲಿ ಕೂರಿಸಲು ಇನ್ನಿಲ್ಲದ ಕಸರತ್ತು ಆರಂಭಿಸಿದ್ದರು. ಇದು ವಿವಿ ಆವರಣದಲ್ಲಿ ಕೆಟ್ಟ ಪೊಲಿಟಿಕ್ಸ್ ಅನ್ನು ಹುಟ್ಟುಹಾಕಿತ್ತು, ಮೊದಮೊದಲು ಬಲು ಪ್ರಾಮಾಣಿಕನಂತೆ ಪೋಜುಕೊಟ್ಟು ಮತ್ತು ವೇದಿಕೆಗಳ ಮೇಲೆ ವಿವಿಯನ್ನು ಉದ್ಧಾರ ಮಾಡಿಬಿಡುವಂತೆ ಮಾತನಾಡುತ್ತಿದ್ದ ವಾಲೀಕಾರರ ಬಂಡವಾಳ ನಿಧಾನಕ್ಕೆ ಬಯಲಾಗುತ್ತಾ ಬಂತು. ಸಿಬ್ಬಂದಿಗಳಲ್ಲಿ ಗುಂಪುಗಾರಿಕೆಯನ್ನು ಹುಟ್ಟುಹಾಕುವ ಅವರ ಕೀಳು ತಂತ್ರಗಾರಿಕೆಯೂ ವಿವಿ ಆವರಣಕ್ಕೆ ರುಚಿಸಲಿಲ್ಲ.

ಅಸಲಿಗೆ ವಾಲೀಕಾರರು ಧಾರವಾಡ ವಿವಿಯ ಕುಲಪತಿಯಾಗಿ ನೇಮಕವಾಗಿದ್ದೇ ಅಕ್ಯಡಿಮಿಕ್ ಆರೆಸ್ಸೆಸ್ಸಿಗರ ಕಣ್ಣು ಕೆಂಪಗಾಗಿಸಿತ್ತು, ಏಕೆಂದರೆ ಆಗಿನ್ನೂ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತಾದ್ದರಿಂದ ತುಮಕೂರು ವಿವಿ, ಧಾರವಾಡ ವಿವಿ ಮತ್ತು ಬೆಳಗಾವಿ ವಿವಿಗೆ ಚೆಡ್ಡಿ ಹಿನ್ನೆಲೆಯವರನ್ನೇ ವಿಸಿ ಮಾಡಬೇಕೆಂದು ಕೇಸರಿ ಪಡೆ ಕಸರತ್ತು ನಡೆಸಿತ್ತು, ತುಮಕೂರಿಗೆ ಎಸ್.ಸಿ ಶರ್ಮಾರನ್ನು ಮತ್ತು ಬೆಳಗಾವಿಗೆ ಬಿ.ಆರ್. ಅನಂತನ್‌ರನ್ನು ತಂದು ಕೂರಿಸುವಲ್ಲಿ ಅವರು ಯಶಸ್ವಿಯಾದರೂ ಧಾರವಾಡಕ್ಕೆ ಮಾತ್ರ ವಾಲೀಕಾರರನ್ನು ತಪ್ಪಿಸಲು ಸಾಧ್ಯವಾಗಿರಲಿಲ್ಲ, ಯಾಕೆಂದರೆ ವಾಲೀಕಾರ್ ನೇರವಾಗಿ ಹಂಸರಾಜ್ ಭಾರದ್ವಾಜ್‌ರ ಕ್ಯಾಂಡಿಡೇಟಾಗಿದ್ದರು. ಇದೇ ಕೇಸರಿ ಪಡೆಯ ಕಣ್ಣು ಉರಿಯುವಂತೆ ಮಾಡಿತ್ತು.


ಪ್ರಹ್ಲಾದ್ ಜೋಶಿ

ಅಧಿಕಾರ ವಹಿಸಿಕೊಂಡ ವಾಲೀಕರ್, ಮೌಲ್ಯಮಾಪನ ವಿಭಾಗದ ರೆಜಿಸ್ಟ್ರಾರ್ ಆಗಿದ್ದ ಜೆ.ಎಸ್. ಭಟ್ ಎಂಬುವವರನ್ನು ತೆಗೆದುಹಾಕಿ ಅಲ್ಲಿಗೆ ತಮಗೆ ಬೇಕಾದ ಎಸ್.ಎ. ಪಾಟೀಲ್‌ರನ್ನು ತಂದು ಕೂರಿಸಿದ್ದರು (ವಾಲೀಕಾರ್ ಜೈಲು ಸೇರಿದ ನಂತರ ಈಗ ಮತ್ತೆ ಪುನಾಃ ಭಟ್‌ರೇ ರೆಜಿಸ್ಟ್ರಾರ್ ಆಗಿ ಮರು ಆಯ್ಕೆಯಾಗಿದ್ದಾರೆ). ಈ ಜೆ.ಎಸ್. ಭಟ್ ಮೂಲತಃ ಆರೆಸ್ಸೆಸ್ ಹಿನ್ನೆಲೆಯವ. ಮೊದಲೇ ಆಯ್ಕೆ ವಿಚಾರದಲ್ಲಿ ಕುದಿಯುತ್ತಿದ್ದ ಕೇಸರಿ ಬಳಗ ಈಗಂತೂ ವಾಲೀಕಾರ್‌ರನ್ನು ಅಕ್ಷರಶಃ ಟಾರ್ಗೆಟ್ ಮಾಡಿಕೊಂಡಿತ್ತು, ಜಯಂತ್ ಎಂಬ ಆರೆಸ್ಸೆಸ್ ಹಿನ್ನೆಲೆಯ ಸಿಂಡಿಕೇಟ್ ಸದಸ್ಯನನ್ನು ಈ ಕಾರ್ಯಕ್ಕೆಂದೇ ಮೀಸಲಿಟ್ಟಿತ್ತು.

ಇತ್ತ ಕೋಮು ಪೊಲಿಟಿಕ್ಸ್ ತನ್ನನ್ನು ಗುರಿಯಾಗಿಸಿಕೊಂಡು ಖೆಡ್ಡಾಕ್ಕೆ ಕೆಡವಲು ಹೊಣೆಯಾಗಿದ್ದರೂ ವಾಲೀಕಾರ್ ಎಚ್ಚೆತ್ತುಕೊಳ್ಳಲಿಲ್ಲ, ಸ್ವಾರ್ಥದ ಮತ್ತು ಸರ್ವಾಧಿಕಾರಿ ಧೋರಣೆ ಮೂಲಕ ಸಹೋದ್ಯೋಗಿಗಳ ವಿರೋಧವನ್ನೂ ಕಟ್ಟಿಕೊಳ್ಳುತ್ತಾ ಬಂದರು. ಸಣ್ಣಪುಟ್ಟ ಕೆಲಸದಿಂದ ಮೊದಲ್ಗೊಂಡು ಗೌರವ ಡಾಕ್ಟರೇಟ್ ನೀಡುವ ವಿಚಾರದವರೆಗೆ ತನ್ನಿಷ್ಟ ಬಂದಂತೆ ಸರ್ವಾಧಿಕಾರಿಯಾಗಿ ವರ್ತಿಸುತ್ತಿದ್ದ ವಾಲೀಕಾರ್‌ರ ಆಪ್ತವಲಯ ದಿನೇದಿನೇ ಕುಸಿಯುತ್ತಲೇ ಬಂತು. ಈ ನಡುವೆ ರೆಜಿಸ್ಟ್ರಾರ್ ಹುದ್ದೆಗೆ ಪೊಲಿಟಿಕಲ್ ಸೈನ್ಸ್ ವಿಭಾಗದ ನಂದನ್ ಎಂಬ ದ... ಹಿರಿಯ ಪ್ರಾಧ್ಯಾಪಕರೊಬ್ಬರು ಬಂದು ಕೂತಿದ್ದರು. ಆ... ಸಹ ಅಪ್ಪಟ ಆರೆಸ್ಸೆಸ್ ಕೇಡರ್‌ನ ಗಿರಾಕಿ. ಅಸಲಿಗೆ ರೆಜಿಸ್ಟ್ರಾರ್ ಹುದ್ದೆ ಗಿಟ್ಟಿಸಿಕೊಂಡಿದ್ದೇ ಅಧಿಕಾರದಲ್ಲಿದ್ದ ಬಿ... ಸರ್ಕಾರದ ಮರ್ಜಿಯಿಂದ.

ಅಷ್ಟರಲ್ಲಾಗಲೆ ಭ್ರಷ್ಟಾಚಾರದ ಹೊ... ಮೆತ್ತಿಸಿಕೊಂಡಿದ್ದ ವಾಲೀಕಾರ್‌ಗೆ ನಂದನ್‌ನಂತಹ ಮ... ಮುಳ್ಳು ಬೇಕಿರಲಿಲ್ಲ, ಹಾಗಂತ ನಂದನ್‌ನನ್ನು ನೇರ... ತೊಲಗಿಸಲು ಮುಂದಾದರೆ ದಲಿತ ವಿರೋಧಿ ಅಪ... ತುತ್ತಾಗುವ ಭಯವೂ ಇತ್ತು, ಹಾಗಾಗಿ ಚಂದ್ರಮ ಕ... ಎಂಬ ಮತ್ತೊಬ್ಬ ದಲಿತ ಹೆಂಗಸನ್ನು ರೆಜಿಸ್ಟ್ರಾರ್ ... ಸ್ವತಃ ವಾಲೀಕಾರರೆ ಆಮದು ಮಾಡಿಸಿಕೊಂಡಿದ್ದರು. ... ವಿರೋಧಿ ದೋಣ್ಣೆಯಿಂದ ತಪ್ಪಿಸಿಕೊಂಡರೂ ಆ... ಸುಡುಗಣ್ಣು ಮತ್ತಷ್ಟೂ ಪ್ರಖರವಾಗಿ ವಾಲೀಕಾರ್ ... ಬಿದ್ದಿದ್ದವು. ಆಗಲೇ ಶುರುವಾದದ್ದು ಅಸಲಿ ಆಟ. ... ಕಡೆ ಎಬಿವಿಪಿಯನ್ನು ಮುಂದಿಟ್ಟುಕೊಂಡು ಕಿರು... ನೀಡುತ್ತಿದ್ದರೆ ಮತ್ತೊಂದೆಡೆ ಸಿಂಡಿಕೇಟ್ ಸಭೆ... ಜಯಂತ್‌ನ ಮೂಲಕ ವಾಲೀಕಾರರನ್ನು ಹಣಿ... ಯತ್ನಿಸಲಾಗುತ್ತಿತ್ತು, ಕೊನೆಕೊನೆಗೆ ನೇರವಾಗಿ ಬಿಜೆಪಿ ... ಪ್ರಹ್ಲಾದ್ ಜೋಷಿಯೇ ಅಖಾಡಕ್ಕೆ ಇಳಿದಿದ್ದ.

ಆದರೆ ಹುಂಬ ವಾಲೀಕರ್ ಕೊನೇ ಅವಕಾಶ... ಪಾಠ ಕಲಿಯಲಿಲ್ಲ, ಆರೆಸ್ಸೆಸ್ ಕೈಗಳು ಎಲ್ಲೆಲ್ಲಿ ಪ್ರತಿ... ಒಡ್ಡುತ್ತಿದ್ದವೋ ಅಲ್ಲೇ ಹಠಕ್ಕೆ ಬಿದ್ದವರಂತೆ ತಪ್ಪು... ಮಾಡಲು ಶುರು ಮಾಡಿದರು. ದುಬಾರಿ ಮಾರ್ಕ್ಸ್‌ಕಾ... ಖರೀದಿಯಿರಬಹುದು, ತರಾತುರಿಯ ನೇಮ... ಇರಬಹುದು, ಕಾಮಗಾರಿಗಳ ಟೆಂಡರ್ ... ಇರಬಹುದು, ಪ್ರವಾಸದ ಬೋಗಸ್ ಬಿಲ... ಸೃಷ್ಟಿಯಿರಬಹುದು ಇವೆಲ್ಲವೂ ಅಂತಹ... ಅವಾಂತರಗಳು.


ಮತ್ತೊಂದು ಎಡವಟ್ಟು

ಚಂದ್ರಮ ಕಣಗಲಿಯನ್ನು ತಾನೇ ಸ್ವತಃ ರೆಜಿ... ಹುದ್ದೆ ನೇಮಿಸಿಕೊಂಡಿದ್ದರೂ ಕೆಲವೇ ದಿನ... ವಾಲೀಕಾರ್ ಮತ್ತು ಕಣಗಲಿ ನಡುವೆ ಹೊಂ... ಮುರಿದು ಬಿದ್ದಿತ್ತು, ಯಥಾಪ್ರಕಾರ ಇದಕ್ಕೂ ವಾಲಿ... ಸರ್ವಾಧಿಕಾರಿತನವೇ ಕಾರಣವಾಗಿತ್ತು, ತನ್ನ ಅಧಿಕಾ... ಮುಗಿಯುವ ಕೊನೇ ಆರು ತಿಂಗಳಿದ್ದಾಗ ನೇ... ಮಾಡಿಕೊಳ್ಳಲು ವಾಲೀಕಾರ್ ಮುಂದಾದಾಗ ... ಚಂದ್ರಮ ಕಣಗಲಿ ಅದಕ್ಕೆ ಅಡ್ಡಗಾಲು ಹಾಕಿದ್ದರು. ... ವಾಲೀಕಾರ್‌ಗೆ ಇಷ್ಟವಾಗಿರಲಿಲ್ಲ, ಆಕೆಯನ್ನೇ ರೆ... ಹುದ್ದೆಯಿಂದ ಕಿತ್ತೆಸೆಯುವ ಸಲುವಾಗಿ ತಂತ್ರ ಆರಂ... ಹಲವಾರು ಬಾರಿ ಕರ್ತವ್ಯಲೋಪದ ನೋಟಿಸನ್ನೂ ... ಜಾರಿ ಮಾಡಿದ್ದ ಆದರೆ ಕಣಗಲಿ ಗಂಡ ಶಿಂಧೆ, ವಿಧಾ... ಮಟ್ಟದಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದು ನಿವೃತ್ತಿಯ ನಂ... ತನ್ನ ಖದರ್ ಉಳಿಸಿಕೊಂಡಿರುವ ವಿಷಯ ... ತಿಳಿದಿರಲಿಲ್ಲ ಎನಿಸುತ್ತೆ.

ವಾಲೀಕಾರ್‌ನ ಅಪರಾತಪರಾಗಳನ್ನು ಬಲು ಹತ್ತಿ... ಗಮನಿಸಿದ್ದ ಆಕೆ ನೇರವಾಗಿ ರಾಜ್ಯಪಾಲರಿಗೆ ... ನೀಡಿದ್ದಳು. ಅದೇವೇಳೆಗೆ ಸಿಂಡಿಕೇಟ್ ಸದಸ್ಯ ಆ... ಜಯಂತ್ ಕೂಡಾ ಅಕ್ರಮಗಳ ದಾಖಲೆಗಳನ್ನು... ರೆಕಾರ್ಡುಗಳಿಂದ ಹೆಕ್ಕಿ ತೆಗೆದು ಅಣಿ ಮಾಡಿಟ್ಟುಕೊ... ಕೇಂದ್ರದಲ್ಲಿ ಮೋದಿ ಸರ್ಕಾರ ಅಸ್ತಿತ್ವಕ್ಕೆ ಬಂದು ... ಬಿಜೆಪಿಯ ರಾಜ್ಯಪಾಲ ನೇಮಕವಾಗುವುದನ್ನೇ ಕಾ... ಪ್ರಹ್ಲಾದ್ ಜೋಷಿಯ ಟೀಮು ದಾಖಲೆ ... ವಜೂಭಾಯಿಯನ್ನು ಭೇಟಿಯಾಗಿ ವಾಲೀಕಾರ್‌ಗೆ... ಗತಿ ಕಾಣಿಸುವಂತೆ ಕಿವಿ ಕಚ್ಚಿ ಬಂದಿದ್ದರು. ... ವಾಲಾ ಕಾರ್ಯಗತಗೊಳಿಸಿದ್ದಾರೆ.

ಒಟ್ಟಾರೆ, ಚೆಡ್ಡಿಗಳ ಕೋಮುವಾದ ಹಾಗೂ ವಾ... ಭ್ರಷ್ಟಾಚಾರ ಧಾರವಾಡದ ಕರ್ನಾಟಕ ವಿವಿಗೆ ... ಮೆತ್ತಿಸಿವೆ. ಈ ಪ್ರಹಸನ ಮುಂದೆಲ್ಲಿ ಹೋಗಿ ತಲು... ಕಾದು ನೋಡಬೇಕು.

● ಗಿರೀಶ್ ತಾ...



ತನಿಖೆ-ತಡೆಯಾಜ್ಞೆ ನಡುವೆ ಎಡವುತ್ತಿದೆ ರಂಗೀಲಾ ರಾಘು ರೇಪ್‌ಕೇಸ್!

ಹವ್ಯಕ ಬ್ರಾಹ್ಮಣರ ಲೌಕಿಕ ಲಹರಿಯ ಧರ್ಮಗುರು ಸ್ವಾಮಿಯ ರೇಪ್ ಮತ್ತು ಬ್ಲ್ಯಾಕ್‌ಮೇಲ್ ಜೋಡಿ ದಿನಕ್ಕೊಂದು ಅನುಮಾನಾಸ್ಪದ ಆಯಾಮ ...ತ್ತಿದೆ. ಹೆಣ್ಣು-ಹೊನ್ನು-ಮಣ್ಣಿನ ಸಂಗ ಸಹವಾಸದಿಂದ ...ಾವುದ ದೂರವಿರಬೇಕೆಂಬ ಸ್ಥಾಪಿತ ನಿರ್ಬಂಧವನ್ನು ...ಷ್ಟಿಗೆ ಧಿಕ್ಕರಿಸಿ ಸ್ವಜಾತಿ ಹವ್ಯಕ ಸಮೂಹ ಅಸಹ್ಯ-...ಜನ-ಮುಜುಗರದಿಂದ ತಲೆ ಎತ್ತದಂತೆ ಮಾಡಿರುವ ... ರಾಘು ಸ್ವಾಮಿಗೆ ರಿಲೀಫ್ ಮೇಲ್ ರಿಲೀಫ್ ...ಮವುದು ನ್ಯಾಯ ವ್ಯವಸ್ಥೆಯನ್ನೇ ಅನುಮಾನದಿಂದ ...ೋಡುವಂತೆ ಮಾಡಿದೆ. ರಾಘು ಸ್ವಾಮಿಯನ್ನು ...ಳ ಮಾಡಿಕೊಂಡು ಬೇಳೆ ಬೇಯಿಸಿಕೊಳ್ಳುತ್ತಿರುವ ...ಖ್ಯಾತ ಬು(ಲ)ದ್ಧಿ ಜೀವಿ ತಂಡದ ಕಾವಿ ಮತ್ತು ...ಲಾಬಿ ನ್ಯಾಯ ವ್ಯವಸ್ಥೆಯನ್ನೇ ಅಡ್ಡ ದಾರಿಗೆಳಿಸಿ ...ಮೆಂಬ ಚರ್ಚೆ ಈಗ ನಾಡಿನಾದ್ಯಂತ ನಡೆದಿದೆ....

...ತ್ಯಾಚಾರದ ಕೇಸು ಬಿದ್ದ ಕ್ಷಣದಿಂದ ತನಿಖೆ-...ದಿಂದ ತಪ್ಪಿಸಿಕೊಳ್ಳಲು ರಾಘ ಮಾಣಿ ಮಾಡಿದ ...ನ್ನು ಒಂದೇ, ಎರಡೇ? ತಾನೊಬ್ಬ ಪ್ರಶ್ನಾತೀತ ಕಾವಿ ...ಬ ಪೋಸು ಕೊಡುತ್ತ ಕಾನೂನು-ಸಂವಿಧಾನಕ್ಕೆ ... ಎಸೆಯುತ್ತ ಮುಗ್ಧ ಅನುಯಾಯಿಗಳ ದಾದಾಗಿರಿಗೆ ...ಮಿಸಿದ ಈ ರಗಳೆ ರಾಘು ಮತ್ತೊಂದೆಡೆ ಕಾನೂನಿನ ... ತೂತುಗಳಲ್ಲಿ ತೂರಿಕೊಳ್ಳಲು, ನ್ಯಾಯ ವ್ಯವಸ್ಥೆ ...ಬೇಕಾದಂತೆ ಬಗ್ಗಿಸಿಕೊಳ್ಳಲು ರಹಸ್ಯ ಕಾರ್ಯಾಚರಣೆ ...ಹಚ್ಚಿಕೊಂಡು ಬಿಟ್ಟಿದ್ದ! ರಾಘುನ ಚಿಂತಕ ಚೆಲುಮೆ ...ನಿವಾರ ಪ್ರಭಾವದೆದುರು ಸಿಐಡಿ, ಕಾನೂನು ...ಮಕವಾಗಿ ಹೋಯ್ತು!! ಒಂದು ಕಡೆ ಕರ್ತವ್ಯನಿಷ್ಠ ...ತಂಡ, ನ್ಯಾಯವಾದಿಗಳು ಪ್ರಾಮಾಣಿಕ-ನಿಷ್ಠೂರ ... ಮುಂದಾದರೆ ಮತ್ತೊಂದೆಡೆಯಿಂದ ಅವರ ಕೈ-...ಕುವ ಆಜ್ಞೆ-ತಡೆಯಾಜ್ಞೆಗಳು ಅಪ್ಪಳಿಸ ತೊಡಗಿದವು. ...ಮಾನ್ಯ ಆರೋಪಿಯೊಬ್ಬನಿಗೆ ಸಿಗದ ಕಾನೂನಿನ-... ರಿಯಾಯಿತಿ-ರಿಲ್ಯಾಕ್ಸ್‌ಗಳು ಒಂದರ ಹಿಂದೊಂದ ... ಕಾವಿ ಪಾಪಿಗೆ ಸಿಕ್ಕಿದವು. ತನಿಖಾಧಿಕಾರಿಗಳ ...ಸ್ಥೈರ್ಯ ಉಡುಗಿಸುವ ಹಿಕಮತ್ತುಗಳು ವ್ಯವಸ್ಥಿತವಾಗಿ ... ರಾಘು ಮಾಣಿಗೆ ನೆಪಕ್ಕಷ್ಟೇ ತನಿಖೆ ಮಾಡಿ ...ಂತಮ್ ಮಾಡುವಂತೆ ಒತ್ತಡ-ಒತ್ತಾಯ ಬರಲಾ...ತು. ಕಾಮಕಥಾದ ಬಲಿಪಶು ಪ್ರೇಮಲತಾ ಶಾಸ್ತ್ರಿ ...ವಿಸಿ ಬಂದ ಬ್ರಾಹ್ಮಣಿಕೆ ತಂತ್ರಗಾರಿಕೆಯ ಪತ್ರಕರ್ತ ...ಕೇಸು ವಾಪಸ್ ಪಡೆಯುವಂತೆ ಪರಿಪರಿಯಾಗಿ ...ಳ್ಳುತ್ತಿದ್ದಾನೆ. ಅದಕ್ಕೆ ಆಕೆಯ ಕುಟುಂಬ ಒಪ್ಪದಿದ್ದಾಗ ... ಬಳಗದಲ್ಲಿ ಭಿನ್ನಾಭಿಪ್ರಾಯ ಮೂಡಿಸಲು ಕಿತಾಪತಿ ...ನೆ. ಅದ್ಯಾಕೋ ರಾಘು ಸ್ವಾಮಿ ಬಗ್ಗೆ ...ಮ ಸದಭಿಪ್ರಾಯವಿಲ್ಲದ ಚಿಡ್ಡಿ ಪಡೆ ಆತನ ...ದ ಎಳೆದೆಸೆಯದೇ ಬಿಡಬಾರದೆಂಬ ದೃಢ ...ಕ್ಕೆ ಬಂದಿರುವುದು ರಾಘುನ ಲಾಬಿದಾರರ ...ಗಿಸಿಬಿಟ್ಟಿದೆ. ಆಗ ಶುರುವಾಗಿದೆ ನ್ಯಾಯ ...ಲ್ಲೇ ಜನಿವಾರ ಜಾದೂಗಾರಿಕೆ!!

...ಡಿ ಪೊಲೀಸರು ಸಡಿಲ ಕೌಪೀನದ ... ವಿಚಾರಣೆ ಮಾಡಲೇಬಾರದೆಂಬುದು ...ಮರಭಿಮಾನಿ ಬಳಗದ ಹಠ! ಮಠಕ್ಕೆ ...ಭಕ್ತಿಯಿಂದ ಬರುವ ಮುತ್ತೈದೆಯರನ್ನು ... ತಡವಿ ರಾಘು ಮಾತಾಡಿಸುವಾಗ, ...' ಸಂದರ್ಶನಕ್ಕೆ ಕರೆದೊಯ್ಯುವಾಗ, ... ಸ್ಸು ಹಿಡಿಸಿ ಕುಣಿಸಿ 'ಖುಷಿ' ಪಡುವಾಗ ... ಮುಜುಗರ-ಕಿರಿಕಿರಿ ಆತನನ್ನು ಸಿಐಡಿಗಳು ...ಗ-ವೈದ್ಯಕೀಯ ಪರೀಕ್ಷೆಗೆ ಬರುವಂತೆ ನೋಟಿಸ್ ...ಗ ಚಿಂತಕರ ಚಾವಡಿಗೆ ಆಗಿರುವುದು ...ವಾಗಿದೆ. ರೇಪ್ ಆರೋಪಿ ರಾಘುನ ಬಂಧಿಸಲು ...ಲವು ಅವಕಾಶಗಳನ್ನು ಸಿಐಡಿ ಆದ್ಯಾಕೆ ...ಂಡಿಲ್ಲವೋ ಆ ಶ್ರೀರಾಮನಿಗೇ ಗೊತ್ತು, ಆದರೂ ... ರಕ್ಷಣಾ ಪಡೆ ಸಿಐಡಿ ತಮ್ಮ ಗುರುವನ್ನು ... ಕಳಿಸಲು ಕಾತರಿಸುತ್ತಿದೆ ಎಂದು ಬೊಬ್ಬೆ ...ತ್ತಿದೆ. ...ತ್ತೊಂದೆಡೆ ರಾಘುನ ಬಚಾವಿಗಾಗಿ ...ಧ-ದಂಡ-(ಅ)ನ್ಯಾಯ ತಂತ್ರಗಾರಿಕೆ ಮಾಡುತ್ತಿದೆ.


ಇಷ್ಟು ದಿನದ ತನಿಖೆ-ತಡೆಯಾಜ್ಞೆ ರಾಘುನ ರಂಜನೆ ಗಮನಿಸಿದರೆ ಎಲ್ಲೋ ಒಂದು ಕಡೆ ಇಡೀ ನ್ಯಾಯ ವ್ಯವಸ್ಥೆಯೇ ಎಡವಿದಂತೆ ಜನಸಾಮಾನ್ಯರಿಗೆ ಭಾಸವಾಗುತ್ತಿದೆ. ಸಾಮಾನ್ಯ ಆರೋಪಿಗಳಿಗೆ ಸಿಗದ ಆಜ್ಞೆ-ತಡೆಯಾಜ್ಞೆಗಳು ಚಿಟಿಕೆ ಹೊಡೆಯುವುದರಲ್ಲಿ ರಾಘು ಸ್ವಾಮಿಗೆ ಅದ್ವೇಗೆ ಸಿಗುತ್ತಿದೆ ಎಂದು ಜನ ಮಾತಾಡಿಕೊಳ್ಳುತ್ತಿದ್ದಾರೆ. ಸರ್ಕಾರಿ ವಕೀಲರನ್ನು ಕಂಗೆಡಿಸಿ ಪರಿಸ್ಥಿತಿಯ ದುರ್ಲಾಭ ಪಡೆಯಲು ಸ್ಪೆಚ್ 'ರಾಘು ರೆಸ್ಕ್ಯೂ ಫೋರ್ಸ್' ಮಾಡಬಾರದ್ದೆಲ್ಲಾ ಮಾಡುತ್ತಿದೆ. ಜುಜುಬಿ ಬ್ಲ್ಯಾಕ್‌ಮೇಲ್ ಕೇಸ್‌ನಲ್ಲಿ ಪ್ರೇಮಲತಾಗೆ ಹೆಂಗಸೆಂಬ ರಿಯಾಯತಿಯೂ ಸಿಗದೆ ಬರೋಬ್ಬರಿ 25 ದಿನ ಜೈಲಲ್ಲಿಡಲಾಯ್ತು. ಆದರೆ ಅತ್ಯಾಚಾರದಂಥ ಹೇಯ-ಬರ್ಬರ-ಅಮಾನುಷ ಪಾತಕ ಮಾಡಿದ ಆರೋಪಿ ರಾಘುಗೆ ಬರೋಬ್ಬರಿ ಒಂದು ತಿಂಗಳು ಬಂಧನ ಭೀತಿಯಿಲ್ಲದೆ ಹಾಯಾಗಿರುವ 'ಭಾಗ್ಯ' ಸಿಗುತ್ತದೆ.

ರಾಘುನ ಬೇಡಿಕೆಗೆ ನ್ಯಾಯಾಲಯಗಳಲ್ಲಿ ತ್ವರಿತ ಸ್ಪಂದನೆ ಸಿಗುತ್ತದೆ. ಹಾಗಂತ ಇದೇ ನ್ಯಾಯ ನೀತಿಯ ಚಾನ್ಸ್



ಶಾಸ್ತ್ರಿ ಫ್ಯಾಮಿಲಿಗೆ ಸಿಗುವುದೇ ಇಲ್ಲ. ಪ್ರೇಮಲತಾರ ಮಗಳು ತನ್ನ ತಾಯಿ ಮೇಲೆ ರಾಘು ಮಾಣಿ ಅತ್ಯಾಚಾರ ನಿರಂತರ ವಾಗಿ ನಡೆಸಿದ್ದಾನೆಂದು ಕೊಟ್ಟ ಪೊಲೀಸ್ ದೂರಿನಂತೆ ಎಫ್‌ಐಆರ್ ದಾಖಲಾಗಿರುತ್ತದೆ. ಅದನ್ನು ರದ್ದು ಮಾಡು ವಂತೆ ರಾಘು ಸೆಪ್ಟೆಂಬರ್ 8ಕ್ಕೆ ಹೈಕೋರ್ಟ್‌ಗೆ ಅರ್ಜಿ ಹಾಕುತ್ತಾನೆ. ಅದೇ ದಿನ ವಿಚಾರಣೆಯನ್ನು ನ್ಯಾಯಮೂರ್ತಿ ಫಣೀಂದ್ರ ಸಾಹೇಬರು ನಡೆಸುತ್ತಾರೆ. ಅಷ್ಟೇ ಅಲ್ಲ ಮರುದಿನವೇ ರಾಘುನ ಬಂಧಿಸಬಾರದೆಂದು ತೀರ್ಪು ಕೊಡುತ್ತಾರೆ; ಜತೆಗೆ ಮುಂದಿನ ಆದೇಶದ ತನಕ ಸಿಐಡಿ ರಾಘು ಸ್ವಾಮಿಯನ್ನು ಪ್ರಶ್ನಿಸುವುದಕ್ಕೂ ನಿರ್ಬಂಧ ಹಾಕುತ್ತಾರೆ!!

ಈ ವಿಚಾರಣೆ ಬರೋಬ್ಬರಿ ಒಂದು ತಿಂಗಳು ನಡೆ



ಯುತ್ತದೆ. ಅಂದರೆ ಆರೋಪಿ ರಾಘು ಈ ಒಂದು ತಿಂಗಳು ಕೆಕ್ಕಾರ ಮಠದಲ್ಲಿ ತನ್ನ 'ದೈವಿಶಕ್ತಿ'ಯ ಮಹಿಮೆ ಪ್ರದರ್ಶಿಸುತ್ತ ಅಟ್ಟಹಾಸದ ಪ್ರವಚನ ಬಿಗಿಯುತ್ತ ನೆಮ್ಮದಿ ಯಿಂದ ವಿಹಾರ ನಡೆಸುತ್ತಾನೆ. ಒಂದು ತಿಂಗಳ ನಂತರ ರಾಘುನ ಎಫ್‌ಐಆರ್ ರದ್ದತಿ ಕೋರಿಕೆ ಅರ್ಜಿ ಹೈಕೋರ್ಟ್ ವಜಾ ಮಾಡುತ್ತದೆ. ಅಕ್ಟೋಬರ್ 9ರಂದು ಬಂದ ಈ ತೀರ್ಪಿನಲ್ಲಿ ಅಗತ್ಯವಿದ್ದರೆ ಸಿಐಡಿ ಸ್ವಾಮಿಯನ್ನು ಬಂಧಿಸಲೂ ಬಹುದೆಂದು ಹೇಳಲಾಗುತ್ತದೆ. ಅನಂತರದ ನ್ಯಾಯಾಂಗ ಪ್ರಕ್ರಿಯೆ ಮಾತ್ರ ಪವಾಡ ಸದೃಶವಾಗಿ ನಡೆದು ಹೋಗುತ್ತದೆ. ಮುಂಜಾನೆ ಹೈಕೋರ್ಟ್ ರಾಘುನ ಅರ್ಜಿ ವಜಾ ಮಾಡಿದರೆ, ಮಧ್ಯಾಹ್ನದ ಹೊತ್ತಿಗೆ ಆತ ಸೆಷನ್ಸ್ ನ್ಯಾಯಾಲ


ಯಕ್ಕೆ ನಿರೀಕ್ಷಣಾ ಜಾಮೀನು ಕೋರಿ ಮೊರೆ ಹೋಗುತ್ತಾನೆ. ಅಚ್ಚರಿಯ ಸಂಗತಿಯೆಂದರೆ, ಸಂಜೆ ವೇಳೆಗೆ ರಾಘುಗೆ ಬಂಧನದಿಂದ ಪಾರಾಗುವ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರಾಗೇ ಬಿಡುತ್ತದೆ!! ಎಲ್ಲವೂ ಪೂರ್ವ ನಿಯೋಜಿತ ಪ್ರಕ್ರಿಯೆ ಎಂಬಂತೆ ಭಾಸವಾಗು ತ್ತದಲ್ಲವಾ? ಏನಿದರ ಹಿಂದಿನ ಕಾವಿ ಮಹಿಮೆ? ಇಂಥದ್ದೇ ರಿಲ್ಯಾಕ್ಸ್ ಸಾಮಾನ್ಯ ಆರೋಪಿಗೆ ಸಿಗಲು ಈ ನ್ಯಾಯದಾನ ವ್ಯವಸ್ಥೆಯಲ್ಲಿ ಸಾಧ್ಯವಾ? ಸಂಶಯ ಸಹಜ ತಾನೆ?

ಮತ್ತೊಂದು ಮಜಾ ನೋಡಿ. ಪ್ರೇಮಲತಾರ ಪತಿಯ ಸಹೋದರ ಶ್ಯಾಮಶಾಸ್ತ್ರಿ ಆತ್ಮಹತ್ಯೆ ಪ್ರಕರಣದಲ್ಲಿ ರಾಘು ಪ್ರಮುಖ ಆರೋಪಿ. ಆತನಿಗೆ ಜೈಲು ಸೇರುವ ಭಯ ಈ ಕೇಸ್‌ನಲ್ಲಿ ಕಾಡತೊಡಗಿತ್ತು. ಅಕ್ಟೋಬರ್ 13ರಂದು ಸದ್ರಿ

ಕೇಸ್‌ನಲ್ಲಿ ನಿರೀಕ್ಷಣಾ ಜಾಮೀನು ಕೊಡುವಂತೆ ರಾಘು ನ್ಯಾಯಾಲಯಕ್ಕೆ ಹೋಗುತ್ತಾನೆ. ಅಂದೇ ಆತನಿಗೆ ಮಧ್ಯಂತರ ನಿರೀಕ್ಷಣಾ ಜಾಮೀನು ಸ್ಯಾಂಕ್ಷನ್!! ಎಂಥ ತ್ವರಿತ ನ್ಯಾಯದಾನ ಅಲ್ಲವಾ?! ಇದೇ ಅವಕಾಶ ಪ್ರೇಮಲತಾ ಫ್ಯಾಮಿಲಿಗೆ ಅಲ್ಲಿಂದಿಲ್ಲಿಗೂ ಸಿಕ್ಕೇ ಇಲ್ಲ. ಆಕೆ ಬ್ಲಾಕ್‌ಮೇಲ್ ಕೇಸ್‌ನಲ್ಲಿ ಜಾಮೀನು ಕೇಳಿ ಹೊನ್ನಾವರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಆಗಸ್ಟ್ 28ರಂದು ಜಾಮೀನು ದೊರೆತಿದ್ದು ಸೆಪ್ಟೆಂಬರ್ 16ಕ್ಕೆ! ಮೂರು ವಾರಕ್ಕಿಂತ ಹೆಚ್ಚು ದಿನ ಪ್ರೇಮಲತಾಗೆ 'ಗುರು ದಯೆ'ಯಿಂದ ಜೈಲೂಟದ ಭಾಗ್ಯ!!

ಈಗ ರಾಘು ಸ್ವಾಮಿ ಅವಿಭಜಿತ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿಯೂ, ಉತ್ತರಾಖಂಡದ ಸಿಎಂ ಆಗಿದ್ದ ವಯೋವೃದ್ಧ ಪುಢಾರಿ ಎನ್.ಡಿ. ತಿವಾರಿ ತರಹ 'ತರಲೆ' ಶುರು ಹಚ್ಚಿಕೊಂಡಿದ್ದಾನೆ. ತಾನು ವೈದ್ಯಕೀಯ ಪರೀಕ್ಷೆಗೆ ಬರೋದಿಲ್ಲವೆಂದು ಸಿಐಡಿ ಎದುರು ರಚ್ಚೆ ಹಿಡಿದು ಕುಂತಿದ್ದಾನೆ. "ಪೀಠಕ್ಕೆ ಪರಿಪೂರ್ಣನಾದ ವ್ಯಕ್ತಿಯನ್ನೇ ಸ್ವಾಮಿಯಾಗಿ ತರಲಾಗುತ್ತಯೇ ಹೊರತು ಊನ ಇದ್ದವರನ್ನಲ್ಲ..." ಎಂದು ಹುಚ್ಚು ವಾದ ಮಂಡಿಸುತ್ತಿದ್ದಾನೆ. ಈತನ ರಾಮಚಂದ್ರಾಪುರ ಮಠದ ಸೋಗಲಾಡಿ ಸಿದ್ಧಾಂತ ಯಾರಿಗೆ ಬೇಕಾಗಿದೆ? ಬೇಕಾಗಿರುವುದು ಭಾರತ ಗಣತಂತ್ರದ ಸಂವಿಧಾನ. ಅದರ ಪ್ರಕಾರ ರಾಘು ಸ್ವಾಮಿ ವೈದ್ಯಕೀಯ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಲೇಬೇಕು. ಎನ್.ಡಿ. ತಿವಾರಿಯಿಂದ ಈ ಡಿಎನ್‌ಎ ಪರೀಕ್ಷೆ ಕಡೆಗೂ ತಪ್ಪಿಸಿಕೊಳ್ಳ ಲಾಗಲಿಲ್ಲ. ಅಷ್ಟೇ ಅಲ್ಲ ಕೇಸು ಹಾಕಿದವ ತಿವಾರಿ ಸಾಹೇಬರ ಸಂತಾನನೆಂದು ಸಿದ್ಧವಾಗಿತ್ತು! ಇಂಥ ಸರಳ-ಕಾನೂನಾತ್ಮಕ ನಿದರ್ಶನ ಪೆದ್ದು ರಾಘುಗೆ ಆತನ 'ವಿಶ್ವ' ದರ್ಜೆಯ ಸಲಹೆಗಾರರು-ಸಂರಕ್ಷಕ ಪಡೆಯವರು ಏಕೆ ತಿಳಿಸದೆ ಹಾದಿ ತಪ್ಪಿಸುತ್ತಾರೋ ಪಾಪ?!

ಒಂದಂತೂ ಖರೆ. ರಾಘು ಮುಚ್ಚಿಕೊಂಡು ವೈದ್ಯಕೀಯ ಪರೀಕ್ಷೆಗೆ ಹಾಜರಾಗಿದ್ದರೆ ಆತನ ಬಗೆಗಿನ ಅಳಿದುಳಿದ ಅನುಯಾಯಿಗಳಿಗಾದರೂ ಒಂಚೂರು ಸಮಾಧಾನ ಆಗುತ್ತಿತ್ತೇನೋ! ಈಗ ಈ ಅಳಿದುಳಿದ ಭಕ್ತರೂ ರಾಘುನನ್ನು ಸಂಶಯದಿಂದ ನೋಡುವಂತಾಗಿದೆ. "ಎಂತಕೆ ನಂಗ್ಳ ಗುರ್ಗಳು



ಡಾಕ್ಟರ್ ಪರೀಕ್ಷೆ ತಪ್ಪಿಕೊಳ್ಳಕಾಗಿತ್ತು... ಅವರ್‍ಗೆ ಏನೋ ತಪ್ಪು ಇದ್ದಿಕ್ಕು....'' ಎಂದು ಮಾತಾಡಿಕೊಳ್ಳುತ್ತಿದ್ದಾರೆ ರಾಘು ಮಠದ ಶಿಷ್ಯರು.

ಕಳೆದ ಅಕ್ಟೋಬರ್ 21 ರಂದು ವೈದ್ಯಕೀಯ ಪರೀಕ್ಷೆಗೆ ಹಾಜರಾಗುವಂತೆ ಸಿಐಡಿ ರಾಘು ಮಾಣಿಗೆ ತಿಳಿಸಿತ್ತು. ಈ ವೈದ್ಯಕೀಯ ಪರೀಕ್ಷೆಯಾದರೆ ತನ್ನ ರಾಸಲೀಲಾ ರಗಳೆಯ ಸಮಗ್ರ ವೃತ್ತಾಂತ ಸಾಬೀತಾಗುತ್ತದೆಂಬ ಅಳುಕು ರಾಘುನ ನಿದ್ದೆಗೆಡಿಸಿತ್ತು. ಹೀಗಾಗಿ ಆತನ ಲಾಬಿದಾರರು ಸಿಐಡಿ ಮೇಲೆ ಪರೋಕ್ಷವಾಗಿ ತರತರದ ಒತ್ತಡ ತಂದು ವೈದ್ಯಕೀಯ ಪರೀಕ್ಷೆ ತಪ್ಪಿಸಲು ಪ್ರಯತ್ನ ನಡೆಸಿದ್ದರು. ಅದಾಗದಿದ್ದಾಗ ಹತಾಶವಾದ ಈ ದಲ್ಲಾಳಿಗಳು ರಾಘುನಂಥ ಪರಮ ಪೂಜ್ಯವನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವುದು ಪಾಪಕೃತ್ಯವೆಂಬಂತೆ ಹುಯಿಲೆಬ್ಬಿಸಿದರು. ಸಿಐಡಿ ಅಧಿಕಾರಿ ಗಳ ಧೃತಿಗೆಡಿಸಲು ಹವಣಿಸಿದರು. ಕಾವಿಯುಟ್ಟುಕೊಂಡು ಪೀಠದಲ್ಲಿ ಕುಳಿತು ಕಾಮಕಾಂಡ ಮಾಡಿ "ಯತಿಧರ್ಮ"ಕ್ಕೆ ಅಪಚಾರ ಮಾಡಿದಾಗ ತಲೆ ಕೆಡಿಸಿಕೊಳ್ಳದ ಸೋಕಾಲ್ಡ್ ಧರ್ಮ ರಕ್ಷಸರಿಗೆ ರಾಘುನ ವೈದ್ಯಕೀಯ ಪರೀಕ್ಷೆ ಎಂದಾಗ ತನಿಖೆಯಲ್ಲಿ ಕಾಣದ ಕೈವಾಡ ಕಾಣಿಸತೊಡಗಿತ್ತು!

ಮತ್ತದೇ ಫಿಕ್ಸಿಂಗ್ ಪ್ರಹಸನ ರಾಘು ಬಳಗ ಯೋಜನಾಬದ್ಧವಾಗಿ ಹೆಣೆದು ವೈದ್ಯಕೀಯ ಪರೀಕ್ಷೆಯಿಂದ ತಪ್ಪಿಸಿಕೊಳ್ಳಲು ಶತಪ್ರಯತ್ನ ನಡೆಸಿದೆ. 21 ರಂದು ವೈದ್ಯಕೀಯ ಪರೀಕ್ಷೆಗೆಂದು ರಾಘು ವಿಕ್ಟೋರಿಯಾ ಆಸ್ಪತ್ರೆಗೆ ಹಾಜರಾಗಬೇಕಿತ್ತು. ಆದರೆ ಆತ 20 ರಂದೇ ಹೈಕೋರ್ಟಿಗೆ ಮೊರೆಹೋಗಿ ವೈದ್ಯಕೀಯ ಪರೀಕ್ಷೆಗೆ ತಡೆ ತಂದಿದ್ದಾನೆ. ಇಲ್ಲೂ ರಾಘನ ಯೋಗಾಯೋಗವೇ ವಿಜೃಂಭಿಸಿದೆ. ಅರ್ಜಿ ಹಾಕಿದ ದಿನವೇ ಆತನಿಗೆ ತಡೆ ಸಿಕ್ಕಿದೆ. "ನ್ಯಾಯ" ರಾಘುಗೆ ನಿರಾಯಾಸವಾಗಿ ಸದ್ಯಕ್ಕಂತೂ ಸಿಗುತ್ತಿದೆ. ಗಮನಿಸಬೇಕಾದ ಪ್ರಮುಖ ಲಾ ಪಾಯಿಂಟ್ ಅಂದರೆ, ರಾಘುಗೆ ನಾಲ್ಕು ಸಲ ತಾತ್ಕಾಲಿಕ ತಡೆಯಾಜ್ಞೆ ಸಿಗುವಾಗಲು ಎದುರುದಾರರ ವಕೀಲರ ಸಮ್ಮುಖದಲ್ಲಿ ಅರ್ಜಿ ವಿಚಾರಣೆ ಆಗಿಲ್ಲ. ಏಕಪಕ್ಷೀಯ ನ್ಯಾಯ ಪಡೆಯುವ ಕಲೆ 'ಗುರು'ಗೆ ಕರತಲಾ ಮಲಕವಾಗಿ ಹೋಗಿದೆ. ಜನಿವಾರ ಲಾಬಿಯ ತಾಕತ್ತೇ ಅಂಥದ್ದು; ಶೂದ್ರ ಸಿಎಂ ಸಿದ್ದುಗೂ ಅರ್ಥವಾಗುದಂಥದ್ದು!!

ಏಕಪಕ್ಷೀಯ "ಆಟ"ಗಳನ್ನು ಆಡಿ ಎದುರಾಳಿಗಳನ್ನು ಹೈರಾಣಾಗಿಸುವ ರಾಘುನ ಕಾವಿ-ಕಾಂಚಾಣ ಬಳಗದ ಹೇಡಿತನ ಈಗ ಜಗಜ್ಜಾಹೀರಾಗಿ ಹೋಗಿದೆ! ಪ್ರೇಮಲತಾ ಶಾಸ್ತ್ರಿ ಮತ್ತಾಕೆಯ ಪತಿ, ಪತಿಯ ತಮ್ಮ ಮಾಧ್ಯಮಗಳಿಗೆ "ರಾಘು ಲೀಲೆ"ಗಳ ಬಗ್ಗೆ ಹೇಳಿಕೆ ನೀಡಬಾರದೆಂದು "ನಿರ್ಬಂಧ ಆಜ್ಞೆ" ಮಠದ ಮುತ್ಸದ್ಧಿಗಳು ಹೊನ್ನಾವರ ನ್ಯಾಯಾಲಯದಿಂದ ತಂದಿದ್ದಾರೆ. ಹಾಗೆಯೇ ಸುಮಾ 30 ಅಕ್ಷರ ಮತ್ತು ದೃಶ್ಯಮಾಧ್ಯಮದವರೂ ರಾಘು ರಾಸಲೀಲಾ ವಿನೋದದ ಕುರಿತು ವರದಿ ಮಾಡುವಂತಿಲ್ಲ ಎಂಬ ತಡೆಯೂ ತಂದಿದ್ದಾರೆ. ಆದರೆ ಈ ಮಠದ ಮಹಾಮಹಿ ಮರು ತಾವು ಮಾತ್ರ ಪ್ರೇಮಲತಾ ಮತ್ತಾಕೆಯ ಕುಟುಂಬದ ವಿರುದ್ಧ ಬಾಯಿಗೆಬಂದಂತೆ ಮಾತಾಡುತ್ತಿದ್ದಾರೆ. ಆಕೆಯ ನಡತೆಯೇ ಸರಿ ಇಲ್ಲ ಎಂಬಂತೆ ಹೊಸ "ಕಾಮಕಥಾ" ಕಲಾಕೋವಿದರಿಂದ ಪ್ರೆಸ್ ಕಾನ್ಫರೆನ್ಸ್ ನಡೆಸಿ "ಒಕ್ಕೈ" ನಾಟಕ ನಡೆಸುತ್ತಿದೆ. ಈ ಪಾಪದ ಕಲಾವಿದರಿಗೆ ಗುರುಗಳ "ಮಹಿಮೆ"ಯ ಗಂಧಗಾಳಿಯೇ ಇಲ್ಲ ಎನ್ನಲಿಕ್ಕಾಗದು. ಪೀಠ-ಸಂಭಾವನೆ-ಅವಕಾಶಗಳು ಒತ್ತಡ ಈ ಕಲಾವಿದರ ಮೇಲೆ ಪ್ರಯೋಗವಾದ ವದಂತಿಗಳು ಹಬ್ಬಿದೆ.

ಇಲ್ಲಿರುವುದು ಎರಡು ನೈತಿಕತೆ ಪ್ರಶ್ನೆ. ಒಂದು ಸ್ವಾಮಿ ಯಾದವನು ಹೆಣ್ಣಿನ ಸಂಗಕ್ಕೆ ಬಿದ್ದು ರೋಡ್‌ರೋಮಿಯೋನಂತೆ ಕಾಮವಿಕಾರದಿಂದ ಕುಣಿದಾಡಬಹುದಾ ಎಂಬುದು ಮುಖ್ಯ ಪ್ರಶ್ನೆ. ಪ್ರೇಮಲತಾ-ಆಕೆಯ ಮಕ್ಕಳು ಫ್ಯಾಮಿಲಿಯ ಚಾರಿತ್ರ್ಯಹನನದಿಂದ ಮಠದ "ಪಾವಿತ್ರ್ಯ" ಕಾಪಾಡಲಾಗದು; ಹಾಗೆಯೇ ತನಿಖೆ- ತಡೆಯಾಜ್ಞೆಗಳ ನಡುವೆ ರಾಘು ರೇಪ್ ಕೇಸ್ ಸಿಕ್ಕಿಹಾಕಿಸಿ ನೈಸರ್ಗಿಕ ಸಾವು ಕಾಣುವಂತೆ ಮಾಡುವ ಹಿಕಮತ್ತೊಂದು ವ್ಯವಸ್ಥಿತವಾಗಿ ನಡೆಯುತ್ತಿರುವ ಗುಮಾನಿಗಳಿವೆ. ಸಿಐಡಿ ಅಧಿಕಾರಿಗಳು ಮತ್ತು ಸರ್ಕಾರಿ ಅಭಿಯೋಜಕರು ಪಡೆದ ಸಂಬಳ-ತೊಡುವ ಯೂನಿಫಾರ್ಮಿಗೆ ನಿಷ್ಠರಾಗಿ ಬದ್ಧತೆಯಿಂದ ಕರ್ತವ್ಯ ಮಾಡಬೇಕಿದೆ. ಪಾಪಿಗಳಿಗೆ ಕಾನೂನಿನ ಕಠಿಣ ಪಾಠ ಕಲಿಸಲೇಬೇಕಾದ ಅನಿವಾರ್ಯತೆಯಿದೆ.

● ಶುದ್ಧೋದನ

ನಮ್ಮ ಅದ್ಭುತ ಇಂಜಿನಿಯರ್‌ಗಳು!

ನಮ್ಮ ಶಿಕ್ಷಕರು ಮತ್ತು ಇಂಜಿನಿಯರ್‌ಗಳಿಗೆ ಐದು ವರ್ಷಕ್ಕೊಮ್ಮೆ ಪರೀಕ್ಷೆ ನಡೆಸಬೇಕೆಂದು ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ಹೇಳಿದ್ದಾರೆ. ನೇರವಾಗಿಯೇ ರಾಜಕಾರಣ ಮತ್ತು ಕೃಷಿ ಕೆಲಸ ಮಾಡುತ್ತ ಸಮಯ ಸಿಕ್ಕರೆ ಸ್ಕೂಲಿಗೂ ಹೋಗಿ ಬರುತ್ತಿರುವ ಶಿಕ್ಷಕರು ಕೆಲಸಕ್ಕೆ ಸೇರಿದಾಗ ಯಾವ ಬೌದ್ಧಿಕ ಮಟ್ಟದಲ್ಲಿದ್ದರೂ ಅದೇ ಜ್ಞಾನಭಂಡಾರ ಹೊತ್ತು ನಿವೃತ್ತರಾಗುತ್ತಿರುವುದು ಹಳೆ ಸಂಗತಿ. ಆದರೆ ನಮ್ಮ ಇಂಜಿನಿಯರ್‌ಗಳಂತೂ ತುಂಬ ಭಯ ಹುಟ್ಟಿಸಿರುವುದಂತೂ ನಿಜ. ಇವರ ಬಗ್ಗೆ ಕೆಲವೊಂದು ದುಷ್ಟಾಂತವನ್ನು ಕೊಡುವುದಾದರೆ ಈ ಮಹಾಶಯರು ಈಚೆಗೆ ಕಟ್ಟಿರುವ ಕಟ್ಟಡಗಳನ್ನು ನೋಡಿದರೆ ಸಾಕು ಯಾವ ಸಾಕ್ಷಿಗಳೂ ಬೇಡ.

ಕೆಲವರ್ಷಗಳ ಹಿಂದೆ ಶಿವಮೊಗ್ಗದ ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿ ಹಾಲೇಶ್ ಎಂಬ ಇಂಜಿನಿಯರ್ ಮೋರಿ ಮಾಡಿಸುತ್ತ ನಿಂತಿದ್ದ. ಸದರಿ ಮೋರಿ ಪೂರ್ವ ದಿಕ್ಕಿಗೆ ನಿರ್ಮಾಣಗೊಂಡರೆ ಕೇವಲ ಒಂದಡಿ ಆಳ ಸಾಕು, ನೀರು ಸರಾಗವಾಗಿ ಹೊರಟುಹೋಗುತ್ತಿತ್ತು. ಆದರೆ ಈ ಇಂಜಿನಿಯರ್ ಮಹಾಶಯ ದಕ್ಷಿಣ ದಿಕ್ಕಿಗೆ ಸುಮಾರು ಮೂರು ಅಡಿ ಆಳದ ಕಾಲುವೆ ತೋಡಿಸಿ ಚರಂಡಿ ಮಾಡಿಸತೊಡಗಿದ. ನಮ್ಮಂತ ಸಾಮಾನ್ಯರ ಮಾತು ಅವನ ಕಿವಿಗೆ ಹೋಗಲಿಲ್ಲ. ಏಕೆಂದರೆ ಕುಡಿದು ಬರುವ ಜನ ಆಕಸ್ಮಾತ್ ಈ ಮೂರು ಅಡಿ ಆಳದ ಕಾಲುವೆಗೆ ಬಿದ್ದರೆ ಎದ್ದು ಬರಲು ಬಹಳ ದೂರ ನಡೆಯಬೇಕಿತ್ತು. ಇದನ್ನೆಲ್ಲಾ ಹೇಳಿದರೂ ಕೇಳದ ಇಂಜಿನಿಯರ್ ಬೃಹತ್ ಕಾಲುವೆ ಮಾಡಿಯೇ ಬಿಟ್ಟ. ಏಕೆಂದರೆ ಒಂದಡಿ ಕಾಲುವೆಯ ದೂರದ ಮೂರು ಪಟ್ಟು, ಮೂರಡಿ ಕಾಲುವೆ ಇದ್ದ ಕಾರಣಕ್ಕೆ ಕೈತುಂಬ ಕಮಿಷನ್ ಸಿಗುತ್ತಿತ್ತು. ಎಲ್ಲಾ ಮುಗಿದ ನಂತರ ಆತನಿಗೆ ವರ್ಗವಾಯ್ತು. "ನಿಮಗೊಂದು ಸನ್ಮಾನ ಮಾಡಬೇಕಲ್ಲಾ ಸಾರ್" ಎಂದೆ. "ಏಕೆ?" ಎಂದ. "ಅದೇ ಒಳ್ಳೆ ಚಾನಲ್ ತರದ ಕಾಲುವೆ ಮಾಡಿಕೊಟ್ಟಿರಲ್ಲ ಅದಕ್ಕೆ" ಎಂದೆ. ಆ ಮೂರ್ಖನಿಗೆ ನನ್ನ ಅವಮಾನಕರ ಹಾಸ್ಯವೇ ಅರ್ಥವಾಗದೆ "ಇರ್ಲಿ ಬಿಡಿ ಸಾರ್. ಅದೇನು ದೊಡ್ಡ ಕೆಲಸ" ಎಂದು ನಕ್ಕ!

ಈ ಇಂಜಿನಿಯರ್‌ಗಳ ದಡ್ಡತನ ಅರಿವಾದದ್ದು ಶಿವಮೊಗ್ಗದ ಕುವೆಂಪು ರಂಗಮಂದಿರ ನೋಡಿದ ನಂತರ. ಜಾಮದಾರ್ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ನಿರ್ಮಾಣಗೊಂಡ ಕುವೆಂಪು ರಂಗಮಂದಿರ ಬಹು ವರ್ಷಗಳ ನಂತರ ಪೂರ್ಣಗೊಂಡಿತು. ಕೊನೆಗೂ ಪೂರ್ಣಗೊಂಡಿತಲ್ಲ



ಎಂದು ಸಮಾಧಾನದಿಂದ ಹೋಗಿ ನೋಡಿದರೆ, ಮೂತ್ರ ವಿಸರ್ಜನೆಗೆ ಹೋಗಿ ಬರುವವನು ರಂಗಮಂದಿರದ ಅರ್ಧ ಜನಕ್ಕೆ ಕಾಣುವಂತಹ ವ್ಯವಸ್ಥೆ ಕಲ್ಪಿಸಿದ್ದರು. ಅಂದರೆ ಸ್ಟೇಜಿಗೆ ಸಮೀಪವಿರುವ ಬಾಗಿಲು ತೆರೆದುಕೊಂಡು ಹೋದ ಆಸಾಮಿ ಮೂತ್ರ ಮಾಡಿಕೊಂಡು, ಪ್ಯಾಂಟಿನ ಮೇಲೆ ಬಿದ್ದ ಹನಿಯನ್ನು ನೋಡುತ್ತ ಜಿಪ್ ಎಳೆದುಕೊಂಡು ತನ್ನ ಪಾಡಿಗೆ ತಾನು ಬರುವುದೂ ಕೂಡ ನಾಟಕ ನೋಡುವ ಜನರಿಗೆ ಮನರಂಜನೆಯೊದಗಿಸತೊಡಗಿತು. ಈಗೊಂದು ಅಡ್ಡಗೋಡೆಯಿದ್ದರೂ ಗೌಪ್ಯವಾಗಿ ಮೂತ್ರ ವಿಸರ್ಜಿಸುವುದು ಕಷ್ಟವಾಗಿದೆ.

ಇನ್ನು ಶಿವಮೊಗ್ಗದ ಸರ್ಕಿಟ್ ಹೌಸ್ ಪಕ್ಕದಲ್ಲಿ ಕಟ್ಟಿರುವ ಹೊಸ ಸರ್ಕಿಟ್ ಹೌಸ್‌ನ ಕತೆ ಮಜವಾಗಿದೆ. ಇಲ್ಲಿನ ರೂಮು ಎಷ್ಟು ಅಗಲವಾಗಿದೆಯೆಂದರೆ, ಇಲ್ಲಿ ಬಂದು ಉಳಿಯುವ ಗಣ್ಯ ಅತಿಥಿ ಟಾಯ್ಲೆಟ್‌ನಿಂದ ಕಾಟನವರೆಗೆ ಬರಬೇಕಾದರೆ, ಸುಮಾರು ಹೊತ್ತು ನಡೆಯಬೇಕು. ಅರ್ಜೆಂಟಿನ ಸಿಹಿಮೂತ್ರಿಗಳಾದರೆ ಹೋಗುತ್ತಲೇ ಉಯ್ದುಕೊಂಡು ಹೋಗುತ್ತ, ಖಾಲಿ ಮಾಡಿಕೊಂಡು ವಾಪಸು ಬರಬಹುದು! ಇನ್ನ ಸ್ನಾನದ ರೂಮಂತೂ ಹತ್ತು ಜನ ಸಾಮೂಹಿಕವಾಗಿ ಮಾಡಬಹುದು. ಇಲ್ಲಿ ಹಾಕಿರುವ ಎರಡು ಕಾಟಿನ ಅಂತರವಂತೂ ಜೊತೆಯಲ್ಲಿ ಮಲಗಿದವರು ಜೋರಾಗಿ ಮಾತನಾಡಿದರೆ ಮಾತ್ರ ಕೇಳುತ್ತದೆ. ಇಲ್ಲಿನ ವರಾಂಡದಲ್ಲಿ ಹಾಕಿರುವ ದೈತ್ಯ ಸೋಫಾ ಮತ್ತು ಇನ್ನಿತರ ಆಕಾರವನ್ನು ನೋಡಿದರೆ ಇದೊಂದು ವಿಕಾರವಾದ ಪ್ರವಾಸಿಮಂದಿರ ಎಂಬುದು ಸ್ಪಷ್ಟವಾಗುತ್ತದೆ.


ಇದರ ಮುಂದಿರುವ ಕಂಬಗಳ ಎತ್ತರವೂ ಅನವಶ್ಯಕವಾಗಿದ್ದು ಪ್ರವಾಸಿ ಮಂದಿರದ ಸೌಂದರ್ಯವನ್ನು ಕೆಡಿಸಿದೆ. ಇಂತಹ ಕಟ್ಟಡ ಕಟ್ಟಲು ಶ್ರಮಿಸಿದ ಇಂಜಿನಿಯರ್‌ಗಳ ಒಂದು ಪಡೆಯ ಹೆಸರು ಶಿಲಾನ್ಯಾಸದಲ್ಲಿ ದಾಖಲುಗೊಂಡು ನಗೆಯುಕ್ಕಿಸುತ್ತವೆ. ಏನು ಮಾಡಿದರೂ ಹಳೆಯ ಸರ್ಕಿಟ್ ಹೌಸಿನ ಭವ್ಯತೆ ಈ ಕಟ್ಟಡಕ್ಕೆ ಬಂದಿಲ್ಲ. ಇದೇ ಪ್ರವಾಸಿ ಮಂದಿರದ ಎದುರಿಗೆ ಕಂಗೊಳಿಸುವ ಹೊಗೆ ಸೊಪ್ಪಿನ ಪರಿಷ್ಕರಣದ ಗೂಡಿನಂತೆ ಕಾಣುವ ಸುವರ್ಣ ಸಂಸ್ಕೃತಿ ಭವನದ ಕತೆ ಇದಕ್ಕಿಂತಲೂ ಮಜವಾಗಿದೆ. ಈ ಭವ್ಯ ಸೌಧವನ್ನು ಕಟ್ಟಿದ ಇಂಜಿನಿಯರ್ ಮಹಾಶಯರು ಮಲ್ಟಿಪ್ಲೆಕ್ಸ್‌ನ ರಂಗಮಂದಿರವೂ ನಾಚುವಂತೆ ಕಟ್ಟಿದ್ದಾರೆ. ಆದರೆ ಸ್ಟೇಜಿನ ಮೇಲೆ ನಡೆಯುವ ನಾಟಕ ಅಥವಾ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ಸ್ಟೇಜಿನ ಎಡಬಲದ ನಾಲ್ಕು ಸೀಟುಗಳಿಗೆ ಕಾಣುವುದಿಲ್ಲ. ಈ ಕಾರ್ಯಕ್ರಮದ ಗೊಡವೆಯೇ ಬೇಡವೆಂದವರು ಮತ್ತು ನಿದ್ರಾಪ್ರಿಯರು ಮಾತ್ರ ಇಂತಲ್ಲಿ ಕೂರಬಹುದು. ನಿರ್ಜನ ಪ್ರದೇಶದಲ್ಲಿರುವ ಈ ರಂಗಮಂದಿರ ಇದುವರೆಗೆ ತುಂಬಿದ್ದಿಲ್ಲ. ಸಂಸ್ಕೃತಿಹೀ… ಇಂಜಿನಿಯರ್‌ಗಳ ಕೈಗೆ ಸಿಕ್ಕ ಭವ್ಯ ಕಟ್ಟಡ ಊನಗೊಂಡ… ನಿಂತಿದೆ.

ಯಾವುದೇ ಸಾಂಸ್ಕೃತಿಕ ಭವನವನ್ನು ಕಟ್ಟುವಾಗ … ಇಂಜಿನಿಯರ್‌ಗಳು ರಂಗಕರ್ಮಿಗಳು ಮತ್ತು ಕಲಾತ್ಮಕವಾ… ಮನೆ ಕಟ್ಟಿಕೊಡುವ ಮೇಸ್ತ್ರಿಗಳನ್ನು ಕರೆಸಿ ಮಾತುಕ… ನಡೆಸಬಹುದು. ಆದರೇನು, ಯೂನಿವರ್ಸಿಟಿಗಳಲ್ಲಿ ಇಂಜಿ… ಯರ್ ಡಿಗ್ರಿ ಪಡೆದು ಸರ್ಟಿಫಿಕೇಟನ್ನು ತಂದಿರುವ ಇವರಿ… ಯಾರ ಸಲಹೆಗಳೂ ಬೇಡ. ಇಂತಹ ಇಂಜಿನಿಯ… ಸರ್ಟಿಫಿಕೇಟ್‌ಗಳೂ ಮಾರಾಟಕ್ಕಿವೆ ಎಂಬುದು ಈಚೆ… ಕುವೆಂಪು ವಿ.ವಿ.ಯಲ್ಲೇ ಪತ್ತೆಯಾಗಿರುವಾ… ಇಂಜಿನಿಯರ್‌ಗಳ ಬಗ್ಗೆ ಇನ್ನೂ ಹೆದರಿಕೆಯಾಗತೊಡಗಿ…

ಸಾರ್ವಜನಿಕರಿಗೆ ಗೊತ್ತಿರುವಂತೆ ಶಿವಮೊಗ್ಗ ಮ… ಹರಿಹರದ ಸೇತುವೆಗಳು ಬ್ರಿಟಿಷ್ ಕಾಲದ… ರಚನೆಗೊಂಡಿವೆ. ಇವಿನ್ನೂ ಸುಭದ್ರವಾಗಿವೆ. ಆದರೆ ನವ… ಕಣ್ಣ ಮುಂದೆ ರಚನೆಗೊಂಡ ಸೇತುವೆಗಳಾಗಲೇ ಸೋರು… ಆರಳಿಗಿಡ ಬೆಳೆಸಿಕೊಂಡು ಅದುರುತ್ತಿವೆ. ಭದ್ರಾವತಿಯ… ವಿಶ್ವೇಶ್ವರಯ್ಯನವರು ಕಟ್ಟಿದ ಸೇತುವೆಗೆ ನದಿ ನೀರು ಎ… ಉಕ್ಕಿ ಬಂದರೂ ತಾಗುವುದಿಲ್ಲ. ಆದರೆ ನಮ್ಮ ಶಿಲ್ಪಿಗ… ಕಟ್ಟಿರುವ ಬಸ್ಟಾಂಡ್ ಸಮೀಪದ ಸೇತುವೆಯ ಮೇ… ನೀರು ಹರಿಯುತ್ತದೆ. ಡ್ಯಾಂ ಗೇಟು ತೆಗೆದರೆ ಸಾ… ಸೇತುವೆ ಮೇಲೆ ಉರುಳಿಹೋಗುವ ನೀರನ್ನು ನೋಡು… ಜನ ರೋಮಾಂಚನಗೊಳ್ಳುತ್ತಾರೆ. ನೀರು ಕಡಿಮೆಯಾ… ನಂತರ ನದಿ ಕೊಂಡುಹೋಗುತ್ತಿದ್ದ ಕಸಕಡ್ಡಿ ಮತ್ತು ಪ್ಲಾಸ್ಟಿ… ಚೀಲಗಳೆಲ್ಲಾ ಸೇತುವೆ ಕಿಂಡಿಗೆ ಸಿಕ್ಕಿಕೊಂಡಿರುತ್ತವೆ. ಇ… ಕೂಡ ನಮ್ಮವರಿಗೆ ಏನೂ ಅನ್ನಿಸುವುದಿಲ್ಲ.

ತಮ್ಮ ಮನೆಗಳನ್ನ ಅದ್ಭುತ ಕಲಾಕೃತಿಯಂತೆ ಕಟ್ಟಿಕೊ… ತ್ತಿರುವ ಇಂಜಿನಿಯರ್‌ಗಳು ಸರಕಾರಿ ಕಟ್ಟಡದ ಕಲಾತ… ರಚನೆಯ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳುವುದಿ… ಈಚೆಗೆ ತೀರ್ಥಹಳ್ಳಿಯಲ್ಲಿ ಕುವೆಂಪು ಮತ್ತು ಅನ… ಮೂರ್ತಿಯವರು ಓದಿದ ಶಾಲೆಯ ಪಕ್ಕದಲ್ಲೇ ಗ್ರಂಥಾಲ… ಕಟ್ಟಡವೊಂದು ನಿರ್ಮಾಣವಾಯ್ತು. ಕುವೆಂಪು ಓದಿ… ಶಾಲೆ ಮೈಸೂರು ಪರಂಪರೆ ನೆನಪಿಸುವಂತೆ ಕಲಾತ್ಮಕವಾ… ಆಕಾರದಲ್ಲಿದ್ದರೆ, ಅದಕ್ಕೆ ಅಂಟಿಕೊಂಡಂತಿರುವ ಗ್ರಂಥಾಲ…

ಮೀಸಲಾತಿ ಪರ ಆರೆಸ್ಸೆಸ್! ಏನಿದರ ಮರ್ಮ?



'ಮೀಸಲಾತಿ ಪರ ಆರೆಸ್ಸೆಸ್! ಏನಿದರ ಮರ್ಮ?' ಎಂಬ ಹೆಸರಿನ ವಿಚಾರಸಂಕಿರಣ ರಾಜ್ಯಾದ್ಯಂತ ಬಹುಜನ ವಿದ್ಯಾರ್ಥಿ ಸಂಘ (ಬಿವಿಎಸ್) ವತಿಯಿಂದ ನಡೆಯುತ್ತಿದೆ. ಕಳೆದ ಸೆಪ್ಟೆಂಬರ್ 24ರಿಂದ ಪ್ರಾರಂಭವಾದ ಈ ವಿಚಾರ ಸಂಕಿರಣ ಈ ತಿಂಗಳ 26ರಂದು ಬೆಂಗಳೂರಿನಲ್ಲಿ ಸಮಾರೋಪಗೊಳ್ಳುವುದರೊಂದಿಗೆ ಮುಗಿಯಲಿದೆ. ಒಟ್ಟಾರೆ ರಾಜ್ಯದ ಬಹುತೇಕ ಕಡೆಗಳಲ್ಲಿ ಈ ವಿಚಾರಸಂಕಿರಣ ಆಶ್ಚರ್ಯಕರವಾಗಿ ಸಂಘಟಕರ ನಿರೀಕ್ಷೆಯನ್ನೂ ಮೀರಿ ಯಶಸ್ಸು ಕಾಣುತ್ತಾ ಬಂದಿದೆ. ಮೀಸಲಾತಿ ಪರ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್‌ರ ಹೇಳಿಕೆಯ ಮರ್ಮದ ಕುರಿತು ಈ ವಿಚಾರ ಸಂಕಿರಣ ಬೆಳಕು ಚೆಲ್ಲುವ ಮುಖ್ಯ ಉದ್ದೇಶ ಹೊಂದಿದೆಯಾದರೂ ಒಟ್ಟಾರೆ ಮೀಸಲಾತಿಯ ಆಗುಹೋಗುಗಳನ್ನು ಮಂಡಿಸುವ ಉದ್ದೇಶವನ್ನು ಈ ಸರಣಿ ವಿಚಾರಸಂಕಿರಣ ಹೊಂದಿದೆ.

ಸರಿ, ಮೀಸಲಾತಿ ಪರ ಅದರಲ್ಲೂ ಜಾತಿ ಆಧಾರಿತ ಮೀಸಲಾತಿ ಪರ ಅಂದರೆ "ಎಲ್ಲಿಯವರೆಗೆ ಜಾತಿತಾರತಮ್ಯ ಇರುತ್ತದೆಯೋ ಅಲ್ಲಿಯವರೆಗೆ ಮೀಸಲಾತಿ ಇರಬೇಕು" ಇದು ಸಂದರ್ಶನವೊಂದರಲ್ಲಿ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ನೀಡಿದ ಹೇಳಿಕೆ. ಭಾಗವತ್‌ರ ಆ ಹೇಳಿಕೆಯ ಒಟ್ಟಾರೆ ಉದ್ದೇಶ ಏನೇ ಇದ್ದರೂ ಅವರ ಬಾಯಿಯಿಂದ ಇಂತಹ ಹೇಳಿಕೆ ಹೊರಬಿದ್ದದ್ದು ಸಹಜವೆಂಬಂತೆ ಅದರಲ್ಲೂ ವಿಶೇಷವಾಗಿ ದಲಿತರಲ್ಲಿ ಅಂತಹ ಹೇಳಿಕೆ ಕುತೂಹಲದ ಜೊತೆಗೆ ಅನುಮಾನವನ್ನೂ ಹುಟ್ಟುಹಾಕಿದೆ. ಯಾಕೆಂದರೆ ಹೇಳಿಕೇಳಿ ಆರೆಸ್ಸೆಸ್ ಮತ್ತು ಇತರ ಬಲಪಂಥೀಯ ಸಂಘಟನೆಗಳು ಓಬಿಸಿ/ಎಸ್ಸಿ/ಎಸ್ಟಿಗಳ ಮೀಸಲಾತಿಯ ಪ್ರಬಲ ವಿರೋಧಿ ಪ್ರತಿಪಾದಕರು. ಯಾವ ಪರಿ ಎಂದರೆ ವೈಯಕ್ತಿಕವಾಗಿ ನಾನೇ ಹಲ ವರ್ಷಗಳ ಹಿಂದೆ ಆರೆಸ್ಸೆಸ್ ಕ್ಯಾಂಪ್‌ವೊಂದನ್ನು ಅಟೆಂಡ್ ಮಾಡಿದ್ದಾಗ ಮೀಸಲಾತಿ ಬೇಡ ಎಂಬುದರ ಬಗ್ಗೆ ಸ್ವತಃ ದಲಿತರಾದ ನನ್ನ ಮತ್ತು ಇತರ ಕೆಲವು ಸ್ನೇಹಿತರ ಬ್ರೈನ್‌ವಾಶ್ ಮಾಡುವ ಕೆಲಸವನ್ನು ಚರ್ಚೆಯಲ್ಲಿ ಅಂದಿನ ಶಿಬಿರದಲ್ಲಿ ಆರೆಸ್ಸೆಸ್ ಕಾರ್ಯಕರ್ತರು ಮಾಡಿದ್ದರು. ಹಾಗೆಯೇ ಆ ಸಂದರ್ಭದಲ್ಲಿ ಅವರ ಹಿನ್ನೆಲೆ, ಇತಿಹಾಸ, ಹುನ್ನಾರ ತಿಳಿದಿದ್ದ ನಾನು ವೈಯಕ್ತಿಕವಾಗಿ ಅದರ ಬಗ್ಗೆ (ಮೀಸಲಾತಿ ಬಗ್ಗೆ) ಅವರ ಜತೆ ಅಷ್ಟಾಗಿ ಚರ್ಚೆಗೆ ಹೋಗಿರಲಿಲ್ಲ. ಅವರು ಹೇಳಿದ್ದಕ್ಕೆಲ್ಲ ಸುಮ್ಮನೆ ಹೂಂಗುಟ್ಟಿದ್ದೆ! ಆದರೆ ಈಗ ಸ್ವತಃ ಅದರ ಮುಖ್ಯಸ್ಥರೇ ಇಂತಹದ್ದೊಂದು ಹೇಳಿಕೆ ನೀಡಿದಾಗ ಸುಮ್ಮನೆ ಅದಕ್ಕೆ ಹೂಂಗುಡಲು ಸಾಧ್ಯವೆ? ಹೌದು ಸ್ವಾಮಿ ಎನ್ನಲು ಸಾಧ್ಯವೆ?

ಇರಲಿ, ಯಾಕೆ ಆರೆಸ್ಸೆಸ್ ಮುಖ್ಯಸ್ಥರು ಈ ಮಾತು ಹೇಳಿದರು ಎಂಬ ಹಿನ್ನೆಲೆಯ ಬಗ್ಗೆ ಮಾತನಾಡುವುದಾದರೆ ಕಳೆದ ಲೋಕಸಭೆಯಲ್ಲಿ ಬಿಜೆಪಿ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿತು. ಅದರಲ್ಲೂ ಮೋದಿ ಪ್ರಧಾನಿ ಆದರು ಕೂಡ. ಆಗ ಚರ್ಚೆಗೆ (ಗುಸುಗುಸು) ಬಂದ ಒಂದು ಪ್ರಮುಖ ಅಂಶವೆಂದರೆ "ಇನ್ನೇನು ದಲಿತರ ಕಥೆ ಮುಗಿಯಿತು, ಅವರ ಮೀಸಲಾತಿ ಕಥೆ ಮುಗಿಯಿತು" ಎಂಬುದು! ಈ ನಿಟ್ಟಿನಲ್ಲಿ ಎಲ್ಲರೂ ಕೂಡ ಹಾಗೆ ಅಂದುಕೊಂಡವರೆ! ಅಂತೆಯೇ ದಲಿತರು ಕೂಡ ಆತಂಕ ಪಟ್ಟುಕೊಂಡವರೆ! (ಒಂದು ಅಂಶವನ್ನಿಲ್ಲಿ ದಾಖಲಿಸಬೇಕು. ಅದೆಂದರೆ ಇರೋ ಶೇ.50ರಷ್ಟು ಮೀಸಲಾತಿಯಲ್ಲಿ ದಲಿತರು ಅಂದರೆ ಎಸ್ಸಿಗಳು ಪಡೆಯುತ್ತಿರುವುದು ಕೇವಲ 15% ಅಷ್ಟೆ! ಇನ್ನುಳಿದ 35% ಪಡೆಯುತ್ತಿರುವವರು ಓಬಿಸಿಗಳು ಮತ್ತು ಪರಿಶಿಷ್ಟ ಪಂಗಡದವರು! ದುರಂತವೆಂದರೆ ಇವರ್‍ಯಾರೂ ಮೀಸಲಾತಿ ವಿಷಯ ಬಂದಾಗ ತಾವೂ ಕೂಡ ಅದನ್ನು ಪಡೆಯುತ್ತಿದ್ದೇವೆ ಅದರ ಪರ ತಾವೂ ಕೂಡ ಮಾತನಾಡಬೇಕು ಎಂಬ ಪರಿಜ್ಞಾನ ಇಟ್ಟುಕೊಳ್ಳುವುದೇ ಇಲ್ಲ! ಬದಲಿಗೆ 'ಮೀಸಲಾತಿ? ಹೋಗಲಿ ಬಿಡಿ, ಎಸ್ಸಿಗಳು ಹೆಚ್ಚಿಕೊಂಡವರೆ. ಅವರ ಕಥೆ ಮುಗೀಬೇಕು' ಎಂದು ಹಿಂದೆಮುಂದೆ ಯೋಚಿಸದೆ ಮಾತನಾಡುವವರೆ!) ಒಟ್ಟಾರೆ ದಲಿತರ ಇಂತಹ ಸಹಜ ಆತಂಕದ ನಡುವೆ ಆರೆಸ್ಸೆಸ್ ಮುಖ್ಯಸ್ಥರ ಮೀಸಲಾತಿ ಬೆಂಬಲಿಸುವ ಇಂತಹ ವಿಚಿತ್ರ ಹೇಳಿಕೆ ಕೂಡ ಹೊರಬಿದ್ದಿತು! ಹಾಗಿದ್ದರೆ ಇದರ ಮರ್ಮ ಏನಿರಬಹುದು?

ಹೌದು, ಮೀಸಲಾತಿ ಇಂದು ಖಾಲಿ ಕೊಡ. ಅದರಲ್ಲಿ ನೀರಿರಲಿ, ನೀರಿತ್ತೆಂಬುದಕ್ಕೆ ಸಾಕ್ಷಿ ಕೂಡ ಇಲ್ಲ! ಅರ್ಥಾತ್ ಮೀಸಲಾತಿ, ಅದರಲ್ಲೂ ಸರ್ಕಾರಿ ಉದ್ಯೋಗದ ಮೀಸಲಾತಿ ನೀತಿ ಇಂದು ಕೆಲಸಕ್ಕೆ ಬಾರದ ಸರಕು. ಯಾಕೆಂದರೆ ಉದ್ಯೋಗ, ಈಗ ಅದು ಸೃಷ್ಟಿಯಾಗುತ್ತಿರುವುದು ಎಲ್ಲಿ? ಖಾಸಗಿ ಸಂಸ್ಥೆಗಳಲ್ಲಿ, ಖಾಸಗಿ ಕಂಪನಿಗಳಲ್ಲಿ, ಸಹಜವಾಗಿ ಖಾಸಗಿ ಉದ್ಯೋಗದ ಕೊಡ ಇಂದು ತುಂಬಿ ತುಳುಕುತ್ತಿದೆ. ಇದು ಹೇಗೆಂದರೆ ಸರ್ಕಾರದ ಕೆಲಸಗಳನ್ನೂ, ಕರ್ತವ್ಯಗಳನ್ನೂ ಕೂಡ ಹೊರಗುತ್ತಿಗೆ ನೀತಿ ಮೂಲಕ ಖಾಸಗಿ ಕಂಪನಿಗಳಿಗೆ ನೀಡಿ ಆ ಮೂಲಕ ಆ ಕೊಡವನ್ನು ಇನ್ನಷ್ಟು ತುಂಬಿಸಲಾಗುತ್ತಿದೆಯೆಂದರೆ... ಸರ್ಕಾರಿ ಉದ್ಯೋಗದ ಕೊಡದ ಕಥೆಯನ್ನು, ಪರಿಸ್ಥಿತಿಯನ್ನು ಎಂತಹವರಾದರೂ ಊಹಿಸಬಹುದು! ಖಂಡಿತ, ಹೀಗೆ ಸರ್ಕಾರಿ ಉದ್ಯೋಗದ ಕೊಡವನ್ನು ಖಾಲಿ ಮಾಡುವ ಕೆಲಸಕ್ಕೆ 24 ವರ್ಷಗಳ ಹಿಂದೆಯೇ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (ಎಲ್‌ಪಿಜಿ) ಜಾರಿ ಮೂಲಕ ಮಹೂರ್ತ ಇಟ್ಟಿದ್ದು ಅಂದಿನ ಕೇಂದ್ರದ ಕಾಂಗ್ರೆಸ್ ನೇತೃತ್ವದ ಪಿ.ವಿ.ನರಸಿಂಹರಾವ್ ಮತ್ತು ಡಾ.ಮನಮೋಹನ್ ಸಿಂಗ್ ಜೋಡಿ (1991). ಹಾಗೆಯೇ ಅಂತಹ ಕೊಡ ಬರಿದು ಮಾಡುವ ಕೆಲಸವನ್ನು ಮತ್ತಷ್ಟು ಯಶಸ್ವಿಯಾಗಿ ಮಾಡಲೆಂದೇ ಯಾವುದೇ ರಾಜಕೀಯ ಹಿನ್ನೆಲೆಯೂ ಇಲ್ಲದ, ಲಾಭವೂ ಅಲ್ಲದ ಡಾ.ಮನಮೋಹನ್ ಸಿಂಗ್‌ರನ್ನು ಕಾಂಗ್ರೆಸ್ ಪಕ್ಷ ಸತತ ಹತ್ತು ವರ್ಷಗಳ ಕಾಲ ಪ್ರಧಾನಿ ಹುದ್ದೆಯಲ್ಲಿ ಕೂರಿಸಿತ್ತೆಂದರೆ ಅಂತಹ ಸರ್ಕಾರಿ ಉದ್ಯೋಗ ಕ್ಷೇತ್ರದ ಉದ್ಯೋಗಗಳನ್ನು ಕಡಿತಗೊಳಿಸುವ ಬೃಹತ್ ಹುನ್ನಾರ, ಸಂಚನ್ನು ಎಂತಹವರಾದರೂ ಅರ್ಥಮಾಡಿಕೊಳ್ಳಬಹುದು. ಈ ಕಾರಣಕ್ಕೆ ಈ ಇಪ್ಪತ್ಮೂರು, ಇಪ್ಪತ್ನಾಲ್ಕು ವರ್ಷಗಳಲ್ಲಿ ಅತಿಯಾಗಿ 'ನೊಂದುಕೊಂಡ' ಅನುಚ್ಛೇದಗಳೆಂದರೆ ಎಸ್ಸಿ/ಎಸ್ಟಿಗಳಿಗೆ ಉದ್ಯೋಗ ನೀಡುವ ಆರ್ಟಿಕಲ್ 16(4) ಮತ್ತು ಓಬಿಸಿಗಳಿಗೆ ಉದ್ಯೋಗ ನೀಡುವ ಆರ್ಟಿಕಲ್ 340. ಈ ದಿಸೆಯಲ್ಲಿ (ಸರ್ಕಾರಗಳು ಯಾವುದೇ ಇರಲಿ) ಒಟ್ಟಾರೆ ಹುನ್ನಾರ ಸರ್ಕಾರಿ ಹುದ್ದೆಗಳನ್ನು -6ಕ್ಕೆ ಇಳಿಸುವುದು, ಹಾಗೆಯೇ ಖಾಸಗಿ ಹುದ್ದೆಗಳನ್ನು 5ಕ್ಕೆ ಏರಿಸುವುದು! ಇಲ್ಲಿ (-) ಮೈನಸ್ ಚಿಹ್ನೆ ಅರ್ಥ ಗಣಿತ ಬಲ್ಲವರಿಗೆ ಚೆನ್ನಾಗಿಯೇ ತಿಳಿದಿರುತ್ತದೆ. ಅದೆಂದರೆ 'ಕಡಿಮೆಯಾಗುವುದು', ಅರ್ಥಾತ್ ಸರ್ಕಾರಿ ಹುದ್ದೆಗ… ಕಡಿಮೆಯಾಗುವುದು ಇಲ್ಲಾ ರದ್ದುಗೊಳ್ಳುವುದು ಎಂ… ಅರ್ಥ! ಹೀಗಿರುವಾಗ ಇಂತಹ ನೀರಿಲ್ಲದ ಕೊಡದಿ… ನೀರು ಕೊಡುತ್ತೇನೆ ಎಂದರೆ ಅಥವಾ ಉದ್ಯೋಗವಿಲ್ಲ… ಕ್ಷೇತ್ರದಲ್ಲಿ ಪಾಲು ಕೊಡುತ್ತೇನೆ ಎಂದರೆ? ಅರ್ಥಾ… ಜಾತಿ ಆಧಾರಿತ ಮೀಸಲಾತಿ ನೀಡುತ್ತೇನೆ ಎಂದರೆ? ಆರೆ… ಮುಖ್ಯಸ್ಥರ ಢೋಂಗಿತನ, ವಂಚನೆಯ ಮುಖ ಬಯ… ಬರುವುದೇ ಇಲ್ಲಿ!

ಹೇಗಿದ್ದರೂ ಸರ್ಕಾರಿ ಹುದ್ದೆಗಳನ್ನು ಭರ್ತಿಮಾಡು… ಇರುವ ಹುದ್ದೆಗಳನ್ನು ಹೊರಗುತ್ತಿಗೆಗೆ ನೀಡಲಾಗು… ಇಂತಹ ಸಂದರ್ಭದಲ್ಲಿ ಮೀಸಲಾತಿ ನೀಡುತ್ತೇನೆ ಎಂ… ಆರೆಸ್ಸೆಸ್ ಮುಖ್ಯಸ್ಥರು ಕಳೆದುಕೊಳ್ಳುವುದೇನಿದೆ? ಅಂದ… ನಿಜಕ್ಕೂ, ಕಾಳಜಿಯಿದ್ದರೆ ಆರೆಸ್ಸೆಸ್ ಮುಖ್ಯ… ಪರ್ಯಾಯವಾಗಿ ಏನು ಹೇಳಬಹುದಿತ್ತು? "ಖಾ… ಕ್ಷೇತ್ರದಲ್ಲಿ ಓಬಿಸಿ/ಎಸ್ಸಿ/ಎಸ್ಟಿಗಳಿಗೆ ಮೀಸಲಾತಿ ನೀಡುತ್ತೇ… ಎನ್ನಬಹುದಿತ್ತು, ಹಾಗೆಯೇ ಹಾಲಿ ಶೀತಲಸ್ಥಿತಿಯಲ್ಲಿರ… ದಲಿತರ ಬಡ್ತಿ ಮೀಸಲು ಮಸೂದೆಯನ್ನು ಸಂಸತ್ತಿ… ಪಾಸ್ ಮಾಡಿಸುತ್ತೇವೆ ಎನ್ನಬಹುದಿತ್ತು, ಯಾಕೆಂದರೆ ಖಾ… ಕ್ಷೇತ್ರದಲ್ಲಿ ಉದ್ಯೋಗ ವಿಪರೀತವಾಗಿ ಹೆಚ್ಚುತ್ತಿದೆ. ಇಂ… ಕಡೆ ಮೀಸಲಾತಿ ನೀಡುತ್ತೇವೆ ಎಂದು ಭಾಗವತರು ಹೇಳಿ… ಅರ್ಥವಿರುತ್ತಿತ್ತು. ಹಾಗೆಯೇ ಅವರು … ಬದಲಾವಣೆಯಾಗಿದ್ದಾರೆ ಎನ್ನಬಹುದಿತ್ತು. ಜೊತೆಗೆ … ಮೀಸಲು ಜಾರಿಗೊಳಿಸುತ್ತೇವೆ ಎಂದಿದ್ದರೂ ಒಂದ… ದಲಿತ ನೌಕರರಿಗೆ ಅಧಿಕಾರಿಗಳಾಗುವ ಅವಕಾಶ ಸಿಗು… ಆದರೆ ವ್ಯಂಗ್ಯವೆಂದರೆ ಆರೆಸ್ಸೆಸ್ ಮುಖ್ಯಸ್ಥರು "ಇ… ಮೀಸಲಾತಿಯನ್ನು", "ಖಾಲಿ ಕೊಡದ ನೀರ… ಹಂಚುತ್ತೇವೆ ಎನ್ನುತ್ತಿದ್ದಾರೆ!

ಇನ್ನು, ಒಂದು ವೇಳೆ ಮೀಸಲಾತಿಯನ್ನು ಕೇ… ಸರ್ಕಾರ ರದ್ದುಗೊಳಿಸಿಯೇ ಬಿಟ್ಟರೆ ಏನಾಗುತ್ತದೆ … ಅಂಶವನ್ನೂ ಚರ್ಚೆಗೆ ತೆಗೆದುಕೊಳ್ಳುವುದಾದರೆ, … ಆಗುವುದಿಲ್ಲ! "ಹಿಂದೂ ಧರ್ಮದ ಭದ್ರಕೋಟೆ… ಗೇಟುಗಳನ್ನು ತೆರೆದಂತೆ ಆಗುತ್ತದೆ"! ಆಶ್ಚರ್ಯವೆ… ತ್ತಿದೆಯೇ? ಆಶ್ಚರ್ಯ ಬೇಡ. ಇದು ಸತ್ಯ. ಯಾಕೆ… ಇಂದು ಶೇ.90ರಷ್ಟು ದಲಿತರಿಗೆ ಬೇರೆ ವ್ಯವಸ್ಥೆಗೆ ಜಿಗಿ… ಮನಸ್ಸಿದೆ. ಅಂತಹ ವ್ಯವಸ್ಥೆ ಬೌದ್ಧ ಕ್ರೈಸ್ತ ಪಾರ್ಸಿ, … ಯಾವುದಾದರೂ ಇರಬಹುದು. ಅದರಲ್ಲೂ ಶೇ.80… ಜನ ಬುದ್ಧನೆಡೆಗೆ ತಮ್ಮ ಒಲವಿಟ್ಟುಕೊಂಡಿದ್ದಾರೆ. …

ಗೋಡೆ, ಅದರ ಮೇಲೆ ಆರ್‌ಸಿಸಿ ಹಾಗು ಬಾಗಿಲು ಅಗತ್ಯವಿದ್ದುದರಿಂದ ಅವನ್ನು ಹೊಂದಿದೆ. ಇದರ ...ಟನೆಗೆ ಬಂದ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ...ಗ "ಇಂತಹ ಕಟ್ಟಡ ಕಟ್ಟಲು ಇಂಜಿನಿಯರ್‌ಗಳೇ ... ಸಾರ್?" ಎಂದೆ. ಅವರೂ ಮಾರ್ಮಿಕವಾಗಿ ನಕ್ಕರು.

...ಮ್ಮ ಪರಂಪರೆಯಲ್ಲಿ ಸಂಬಳದಲ್ಲೇ ಬದುಕಿ-ಪಿಂಚಣಿ ...ಂ ಕಾಲವಾದ ವಿಶ್ವೇಶ್ವರಯ್ಯನವರನ್ನು ಆದರ್ಶವಾಗಿ ...ಂಡ ಇಂಜಿನಿಯರ್‌ಗಳು ಕಟ್ಟಿದ ಎಲ್ಲವೂ ಜೀವಂತ ...ಹಂಗೊಳಿಸುತ್ತಿವೆ. ಆದರೆ ಈಚಿನ ಇಂಜಿನಿಯರ್‌ಗಳ ...ಗುಷ್ಠೆ ಆಟ ಸಾರ್ವಜನಿಕರಿಗೆ ಭಯ ಹುಟ್ಟಿಸ ...ಗಿದೆ. ಏಕೆಂದರೆ ಇವರು ಕಟ್ಟುವ ಸರಕಾರಿ ಶಾಲಾ ...ಗಳು ಆ ಮಟ್ಟದಲ್ಲಿವೆ.

...ಮ್ಮ ಇಂಜಿನಿಯರುಗಳು ಎಂತಹ ಅಪರೂಪದ ...ಎಂಬುದಕ್ಕೆ ಕಳೆದವಾರ ಹಾವೇರಿಯಲ್ಲಿ ಉದ್ಘಾಟನೆ ...ತ ಜಿಲ್ಲಾ ಗ್ರಂಥಾಲಯದ ಕಟ್ಟಡ ನೋಡಿದರೆ ...ಗುತ್ತದೆ. ಉದಾಸಿಯವರು ಉದಾರವಾಗಿ ಕೊಟ್ಟ ...ನಾಲ್ಕು ಕೋಟಿ ಹಣವನ್ನು ಧಾರಾಳವಾಗಿ ಖರ್ಚು ...ರುವ ನಮ್ಮ ಸರ್ಕಾರಿ ಎಂಜಿನಿಯರುಗಳು, ...ಹಡಿಯಲ್ಲೇ ಒಂದು ಸಭಾಂಗಣ ಮಾಡಿದ್ದಾರೆ. ...ಸಭಾಂಗಣದಲ್ಲಿ ತೊಂಬತ್ತೊಂದು ಆಸನಗಳನ್ನ ...ದ್ದಾರೆ. "ಇಷ್ಟೇ ಆಸನ ಏಕೆ? ಹಾವೇರಿ ಜಿಲ್ಲೆಯಲ್ಲಿ ...ಮ ಚಿಲ್ಲರೆ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳಿವೆ. ...ಬ್ಬಂದಿಗಳೆಲ್ಲಾ ಸೆಮಿನಾರು ಅಥವಾ ತರಬೇತಿಗೆಂದು ...ಗ ಈ ಆಸನಗಳು ಸಾಲುವುದಿಲ್ಲ ಅಲ್ಲವೆ? ಇಂತಹ ...ಏಕೆ ಮಾಡಿದಿರಿ?" ಎಂದು ಇಂಜಿನಿಯರ್‌ನನ್ನು ...ಾಗ ಆತನಿಗೆ ಇದೊಂದು ಅಸಂಬದ್ಧ ಪ್ರಶ್ನೆಯಾಗಿ ...ಮ್ಮ ಮತ್ತದೇ ಟಾಯ್ಲೆಟ್‌ಗಳನ್ನು ತುಂಬಾ ವಿಶಾಲವಾಗಿ ...ದ್ದಾರೆ. ಸಭಾಂಗಣದಷ್ಟೇ ವೇದಿಕೆಯೂ ದೊಡ್ಡದಿದೆ. ...ನ ಕೊಠಡಿಗಳೂ ವಿಶಾಲವಾಗಿವೆ. ಆಸನಗಳು ಮಾತ್ರ ...ತ್ತೊಂದು. ಕಾರ್ಯಕ್ರಮಕ್ಕೆ ಎಲ್ಲಾ ಸಿಬ್ಬಂದಿ ಬಂದರೆ ... ಇರಬೇಕು. ಬಹುಶಃ ಈ ಗ್ರಂಥಾಲಯ ಕಟ್ಟಡ ... ಶಿಕ್ಷಣ ಸಚಿವರು ನಮ್ಮ ಇಂಜಿನಿಯರುಗಳಿಗೆ ಆಗಾಗ್ಗೆ ...ತಿ ಕೊಡಬೇಕಾಗುತ್ತದೆ ಎಂದಿರಬೇಕು. ಇವರ ...ತಿ ಸಮಯದಲ್ಲಿ ಗಾರೆ ಹುಡುಗರು ಮತ್ತು ಮನೆ ಮೇಸ್ತ್ರಿಗಳಿಂದ ತರಬೇತಿ ಕೊಡಿಸುವುದು ಕಟ್ಟಡಗಳ ...ತೆ ಮತ್ತು ಕಲಾತ್ಮಕತೆ ದೃಷ್ಟಿಯಿಂದ ಒಳ್ಳೆಯದು!!

● ಬಿ. ಚಂದ್ರೇಗೌಡ

...ವೇನು ಗೊತ್ತೇ? ಅವರ್‍ಯಾರು "ಎಲ್ಲಿ ಮೀಸಲಾತಿ ...ಹುತ್ತದೆಯೋ" ಎಂಬ ಕಾರಣಕ್ಕೆ ಬೌದ್ಧ ಧರ್ಮದ ...ಕ್ಕೆ ಹೋಗಲು ತಯಾರಿಲ್ಲ. ನಿಜ, ಹಾಲಿ ಕಾನೂನಿನ ...ಪ್ರ ದಲಿತರು ಬೌದ್ಧ ಧರ್ಮಕ್ಕೆ ಮತಾಂತರಗೊಂಡರೆ ...ಾತಿಗೆ ಧಕ್ಕೆಯಾಗುವುದಿಲ್ಲ. ದಲಿತರು ಸಿಖ್ ಅಥವಾ ...ಇವೆರಡು ಧರ್ಮಕ್ಕೆ ಮತಾಂತರಗೊಂಡರೆ ಸದ್ಯದ ...ನಿನ ಪ್ರಕಾರ ಅವರ ಸರ್ಕಾರಿ ಉದ್ಯೋಗದ ...ಾತಿ ಅನುಕೂಲ ಹಾಗೆಯೇ ಉಳಿಯುತ್ತದೆ. ಅವರಿಗೆ ... ಆಗುವುದಿಲ್ಲ. ಆದರೆ ನಂಬಿಕೆ? ಕಾನೂನಿಗಿಂತ ... ಪ್ರಬಲವಾಗಿ ಬೇರುಬಿಟ್ಟಿರುವ "ಮತಾಂತರ ...ರೆ ಮೀಸಲಾತಿ ಹೋಗುತ್ತದೆಂಬ ನಂಬಿಕೆ?" ...ಿ, ಬಹುತೇಕ ದಲಿತರು ಮತಾಂತರವಾಗದೇ ...ೂ ಹಾಗೆಯೇ ಧರ್ಮದ ಕಾಲಂನಲ್ಲಿ ಹಿಂದೂ ... ಬರೆಸಿಕೊಳ್ಳುತ್ತಿರುವುದು ಅಂತಹ ನಂಬಿಕೆಯ ...ೆ. ಹೀಗಿರುವಾಗ ಇಂತಹ ಸಮಯದಲ್ಲಿ ಮೀಸಲಾತಿ ...? ಮೀಸಲಾತಿ ಎಂಬ (ಹಿಂದೂ ಧರ್ಮದ) ಕೋಟೆ ... ತೆರೆದರೆ? ದಲಿತರು ಧಡಧಡ ಎಂದು ಬೇರೆ ...ಗಳೆಡೆಗೆ ವಿಶೇಷವಾಗಿ ಬೌದ್ಧ ಧರ್ಮದ ಕಡೆ ...ತ್ತಾರೆ. ಆಗ ಹಿಂದೂ ಧರ್ಮದ ಜನಸಂಖ್ಯೆ ಕಥೆ ...ತ್ತದೆ? ಅಕ್ಷರಶಃ ಕಡಿಮೆಯಾಗುತ್ತದೆ. ಅಂದಹಾಗೆ ... ಸತ್ಯ ಮತ್ತು ಆತಂಕದ ವಿಷಯ ಆರೆಸ್ಸೆಸ್ ...ರಿಗೆ ಚೆನ್ನಾಗಿ ತಿಳಿದಿದೆ! ಈ ಕಾರಣಕ್ಕೇನೆ ಅವರು ...ಆಧರಿತ ಮೀಸಲಾತಿ ಪರ" ಮಾತನಾಡುತ್ತಿರುವುದು!

...ಮಿಸಿ, ಆರೆಸ್ಸೆಸ್ ಮೀಸಲಾತಿ ಪರ ಹುನ್ನಾರದ ...ದಕ್ಕಿಂತಲೂ ಜಾಸ್ತಿ ಹೇಳಲು ಸಾಧ್ಯವಿಲ್ಲ. ಅದರ ...ೂ ಇಲ್ಲ. ಆದರೂ ಒಂದು ಹೇಳಿಕೆಯನ್ನು ಮತ್ತೆ ... ಉಚ್ಚರಿಸುತ್ತೇವೆ. ಅದೆಂದರೆ, "ಮೋಹನ್ ...ಶ್‌ರವರೇ, ನಿಮಗೆ ಶೋಷಿತ ಸಮುದಾಯಗಳ ...ಜಕ್ಕೂ ಕಾಳಜಿ ಇದ್ದರೆ ಮೊದಲು ಖಾಸಗಿ ಕ್ಷೇತ್ರದಲ್ಲಿ ... ತರುವುದರ ಬಗ್ಗೆ ಮಾತನಾಡಿ". ಹಾಗೆಯೇ ...ರ ಓಬಿಸಿ/ಎಸ್ಸಿ/ಎಸ್ಟಿಗಳ ಬ್ಯಾಕ್‌ಲಾಗ್ ಹುದ್ದೆಗಳನ್ನು ...ಮಾಡುವುದರ ಕುರಿತು ಮಾತನಾಡಿ. ಹಾಲಿ ನಿಮ್ಮದೇ ...ದ ಮೇಲೆ ಒತ್ತಡ ತನ್ನಿ. ಹಾಗೆಯೇ ದಲಿತರ ...ಗಳು ಮಸೂದೆ ಅಂಗೀಕರಿಸುವಂತೆಯೂ ಸ್ವಾಮ್ಯ ...ಗಳಿಗೆ ನಿಮ್ಮ ಅಮೂಲ್ಯ ಸಲಹೆ ನೀಡಿ. ಆಗ ...ಮೀಸಲು ಪರ ಹೇಳಿಕೆಗೆ ಅರ್ಥಬರುತ್ತದೆ. ಇಲ್ಲದಿದ್ದರೆ ...ಗ ಇಲ್ಲದ ಅಂತಹ ಮೀಸಲಾತಿಯ ಖಾಲಿ ಕೊಡ ...ತ್ತಾ ಎಷ್ಟು ದಿನ ಓಬಿಸಿ/ಎಸ್ಸಿ/ಎಸ್ಟಿಗಳು ಹಾಗೆ ...ರೆ? ಜರೂರದಿಂದ ಅನ್ಯ ಧರ್ಮಗಳೆಡೆ ಚಲಿಸಲು ...ಸುತ್ತಾರಷ್ಟೇ.

...ರುಷೋತ್ತಮ ಹೊ.ಬ, ಮೈಸೂರು

ಬಾಲಿವುಡ್ ನಟ ಮತ್ತು ಸಿನಿಮಾ ನಿರ್ಮಾಪಕರಾಗಿರುವ ಸೈಫ್ ಅಲಿ ಖಾನ್ ಅವರು ಇತ್ತೀಚಿಗೆ 'ಲವ್ ಜಿಹಾದ್' ಬಗ್ಗೆ ಪ್ರತಿಕ್ರಿಯಿಸುತ್ತಾ ಭಾರತದ ವೈವಿಧ್ಯತೆ ಬಗ್ಗೆ ಮತ್ತು ಅಂತರ್ಧರ್ಮೀಯ ವಿವಾಹಗಳ ಬಗ್ಗೆ ಒಂದು ಲೇಖನವನ್ನು ಬರೆದಿದ್ದಾರೆ. ನಮ್ಮ ಓದುಗರಿಗೆ ಆ ಲೇಖನದ ಅನುವಾದ ಇಲ್ಲಿದೆ.


ಅಂತರ್ಧರ್ಮೀಯ ಮದುವೆಗಳೇ ಭಾರತ

ನಾನು ಓರ್ವ ಕ್ರೀಡಾಪಟುವಿನ ಮಗ. ಇಂಗ್ಲೆಂಡ್, ಭೋಪಾಲ್, ಪಟೌಡಿ, ದೆಹಲಿ ಮತ್ತು ಮುಂಬೈಗಳಲ್ಲಿ ಬೆಳೆದ ನಾನು ಇತರೆ ಹಿಂದೂ ಮತ್ತು ಮುಸಲ್ಮಾನರಿಗಿಂತ ಹೆಚ್ಚು ಭಾರತೀಯ ಮಾತ್ರವಲ್ಲ, ಅವೆರಡೂ ಧರ್ಮಗಳಿಗೆ ಸೇರಿದವನಾಗಿದ್ದೇನೆ. ಇವತ್ತು ಭಾರತ ಮತ್ತು ಅದರ ಹಳ್ಳಿಗಳಲ್ಲಿ ಹಬ್ಬುತ್ತಿರುವ ಕೋಮುವಾದವನ್ನು ಕುರಿತು ನಾನು ಈ ಲೇಖನದ ಮೂಲಕ ಪ್ರತಿಕ್ರಿಯಿಸುತ್ತಿಲ್ಲ, ಬದಲಾಗಿ ಇದು ನನ್ನ ಗೆಳೆಯರು ಮತ್ತು ಅವರ ಕುಟುಂಬಗಳಿಗೆ ಸಂಬಂಧಿಸಿದ ಸಂಗತಿಯಾದ್ದರಿಂದ ಪ್ರತಿಕ್ರಿಯಿಸುತ್ತಿದ್ದೇನೆ.

ನನ್ನ ತಂದೆ ಮತ್ತು ತಾಯಿ ಮದುವೆಯಾಗಲು ನಿರ್ಧರಿಸಿದ ಆರಂಭದಲ್ಲಿ ಯಾರೂ ಅದನ್ನು ತಾಳ್ಮೆಯಿಂದ ಸ್ವೀಕರಿಸಲಿಲ್ಲ. ರಾಜವಂಶದವರಿಗೆ ಸಮಸ್ಯೆಗಳಿದ್ದಂತೆ ಬ್ರಾಹ್ಮಣರಿಗೂ ತಮ್ಮದೇ ಆದ ಸಮಸ್ಯೆಗಳಿದ್ದವು. ನಿಸ್ಸಂದೇಹವಾಗಿ ನೆಲೆಯ ಭರವಸೆಯನ್ನು ನೀಡಲಾಗಿತ್ತು, ಆದರೆ ಆ ಜಾಗದಲ್ಲಿ ಮೊದಲೇ ಜನರು ವಾಸಿಸುತ್ತಿದ್ದರು. ಆ ಸಮಸ್ಯೆ ಇವತ್ತಿಗೂ ಜ್ವಲಂತವಾಗಿದೆ. ದೇವರ ಹೆಸರಿನಲ್ಲಿ ನಡೆದಿರುವ ಪಾಶವೀಯತೆಗಳಿಗೆ ಲೆಕ್ಕವಿಲ್ಲ.

ತಮ್ಮ ಹೆಣ್ಣು ಮಕ್ಕಳು ಮುಸಲ್ಮಾನರನ್ನು ಮದುವೆಯಾಗುವುದರ ಬಗ್ಗೆ ಹೆತ್ತವರಿಗೆ ಆತಂಕವಿರುವುದು ನನಗೆ ಗೊತ್ತು. ಮತಾಂತರ, ಕ್ಷಿಪ್ರ ವಿಚ್ಛೇದನೆ, ಬಹು ಪತ್ನಿತ್ವದ ಬಗ್ಗೆ ಹೆತ್ತವರಲ್ಲಿ ಸಹಜವಾಗಿಯೇ ಆತಂಕಗಳಿರುತ್ತವೆ. ಆದರೆ ಇವೆಲ್ಲ ಹಳತಾದ ಸಂಗತಿಗಳು. ಇಸ್ಲಾಮ್ ಕೂಡ ಪ್ರಸ್ತುತವಾಗಿರಲು ಆಧುನಿಕಗೊಳ್ಳಬೇಕಿದೆ ಮತ್ತು ಪುನರುಜ್ಜೀವನಗೊಳ್ಳಬೇಕಿದೆ. ಇದರ ಜೊತೆಗೆ ಕೆಟ್ಟದ್ದನ್ನು ಒಳ್ಳೆಯದರಿಂದ ಪ್ರತ್ಯೇಕಿಸಬಲ್ಲ ದೊಡ್ಡದಾದ ಮಧ್ಯಸ್ಥ ದನಿಯೊಂದರ ಅಗತ್ಯವಿದೆ. ಹಿಂದೆಂದಿಗಿಂತಲೂ ಇವತ್ತು ಇಸ್ಲಾಮ್ ಜನಾನುರಾಗವಿಲ್ಲದ ಧರ್ಮವಾಗಿದೆ. ಇಸ್ಲಾಮ್ ಅಂತರ್ಧರ್ಮೀಯ ಮದುವೆಗಳ ಮೂಲಕ ಮಾತ್ರವೇ ಸಾಧ್ಯ. ಅಂತಹ ಒಂದು ಅಂತರ್ಧರ್ಮೀಯ ಮದುವೆಯ ಉತ್ಪತ್ತಿಯಾದ ನನ್ನ ಬದುಕಿನಲ್ಲಿ ಈದ್, ಹೋಳಿ, ದೀಪಾವಳಿಗಳು ತುಂಬಿತುಳುಕುತ್ತಿವೆ. ಆದಾಬ್ ಮತ್ತು ನಮಸ್ತೆ ಎರಡನ್ನೂ ಶ್ರದ್ಧೆಯಿಂದ ಸಲ್ಲಿಸುವ ಪರಿಪಾಠವು ನಮಗೆ ಅಂತರ್ಗತವಾಗಿದೆ.

ಮಾನವೀಯತೆ ಮತ್ತು ಪ್ರೀತಿಗಿಂತಲೂ ಧರ್ಮಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗುತ್ತಿರುವುದು ದುಃಖದ ಸಂಗತಿಯಾಗಿದೆ. ನನ್ನ ಮಕ್ಕಳು ಮುಸಲ್ಮಾನರಾಗಿ ಹುಟ್ಟಿದ್ದರೂ ಅವರು ಹಿಂದೂಗಳಂತೆ ಬೆಳೆಯುತ್ತಿದ್ದಾರೆ (ಅವರ ಮನೆಯಲ್ಲಿ ಪೂಜಾ ಕೊಠಡಿಯೂ ಇದೆ). ಆಕಸ್ಮಾತ್ ಅವರು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳಲು ಬಯಸಿದರೆ ಅದಕ್ಕೂ ನನ್ನ ಆಶೀರ್ವಾದ ಇದ್ದೇ ಇರುತ್ತದೆ. ನಾವು ಬೆಳೆದದ್ದೇ ಹೀಗೆ.


ಶರ್ಮಿಳಾ-ಪಟೌಡಿ


ಸೈಫ್-ಕರೀನಾ

ಎರಡೂ ಕಡೆಯ ಧಾರ್ಮಿಕ ಮೂಲಭೂತವಾದಿಗಳು ಜೀವ ಬೆದರಿಕೆಗಳನ್ನು ಒಡ್ಡಿದರು. ಆದರೂ ನನ್ನ ಅಪ್ಪ ಮತ್ತು ಅಮ್ಮ ಮದುವೆಯಾದರು. ಅವರಿಬ್ಬರಿಗೂ ಮುನ್ನ ನನ್ನ ಅಜ್ಜಿ ತನ್ನ ಕುಟುಂಬದಷ್ಟು ಶ್ರೀಮಂತನಲ್ಲದ, ಆದ್ದರಿಂದ ಸೂಕ್ತನಲ್ಲದ ಪಟೌಡಿಯ ನವಾಬನನ್ನು ಹಠ ಹಿಡಿದು ಮದುವೆಯಾಗಿದ್ದು ನನ್ನ ಹೆತ್ತವರ ಹಾದಿಯನ್ನು ಸುಗಮಗೊಳಿಸಿದ್ದಿರಬಹುದು. ಸಂಪ್ರದಾಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಪ್ರೀತಿಗಾಗಿ ಮದುವೆಯಾದ ನಮ್ಮ ಪೂರ್ವಿಕರ ಪ್ರೇಮಕತೆಗಳನ್ನು ಕೇಳುತ್ತಾ ಬೆಳೆದವರು ನಾವು. ಜೊತೆಗೆ ದೇವರು ಒಬ್ಬ, ಆದರೆ ಆತನಿಗೆ ಹಲವಾರು ಹೆಸರುಗಳಿವೆ ಎಂಬ ನಂಬಿಕೆಯಲ್ಲಿ ಬೆಳೆದವರು ನಾವು.

ಕರೀನಾ ಮತ್ತು ನಾನು ಮದುವೆಯಾದಾಗಲೂ ಜೀವ ಬೆದರಿಕೆಗಳು ಬಂದಿದ್ದವಲ್ಲದೆ ಅಂತರಜಾಲದಲ್ಲಿ ಕೆಲವರು 'ಲವ್ ಜಿಹಾದ್' ಎಂದೆಲ್ಲ ಹುಚ್ಚುಹುಚ್ಚಾಗಿ ಪ್ರತಿಕ್ರಿಯಿಸಿದ್ದರು. ನಾವಿಬ್ಬರೂ ಯಾವ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ರಿಯೆಯಲ್ಲಿ ನಂಬಿಕೆ ಇಟ್ಟಿರುವೆವೋ ಅವುಗಳ ಪ್ರಕಾರ ನಡೆದುಕೊಳ್ಳುತ್ತೇವೆ. ನಮ್ಮ ನಂಬಿಕೆಗಳ ಬಗ್ಗೆ ನಾವಿಬ್ಬರೂ ಚರ್ಚಿಸುತ್ತೇವೆ ಮತ್ತು ಪರಸ್ಪರರ ನಂಬಿಕೆಗಳ ಬಗ್ಗೆ ಗೌರವವನ್ನು ಹೊಂದಿದ್ದೇವೆ. ನಮ್ಮ ಮಕ್ಕಳೂ ಇದನ್ನೇ ಪಾಲಿಸುತ್ತಾರೆ ಎಂಬ ಆಶಯವನ್ನು ಹೊಂದಿದ್ದೇವೆ.

ಕರೀನಾಳ ಜೊತೆ ನಾನು ಚರ್ಚ್‌ಗಳಲ್ಲಿ ಪ್ರಾರ್ಥಿಸಿದ್ದೇನೆ ಮತ್ತು ದಿವ್ಯಾರಾಧನೆಗಳಲ್ಲಿ ಭಾಗವಹಿಸಿದ್ದೇನೆ. ಆಕೆ ಕೂಡ ದರ್ಗಾಗಳಲ್ಲಿ ತಲೆ ಬಾಗಿಸಿದ್ದಾಳೆ ಮತ್ತು ಮಸೀದಿಗಳಲ್ಲಿ ಪ್ರಾರ್ಥನೆಗಳನ್ನು ಸಲ್ಲಿಸಿದ್ದಾಳೆ. ನಾವು ನಮ್ಮ ಹೊಸ ಮನೆಯನ್ನು ಪ್ರವೇಶಿಸಿದಾಗ ಹವನವನ್ನೂ, ಕುರಾನ್ ಪಠಣವನ್ನೂ ಆಚರಿಸಿದೆವು - ಎಲ್ಲಾ ತರಹದ ಆಕಸ್ಮಿಕಗಳಿಂದ ಪಾರಾಗಲು!

ಧರ್ಮ ಎಂದರೇನು? ಶ್ರದ್ಧೆ ಎಂದರೇನು? ಇವೆರಡಕ್ಕೂ ಕರಾರುವಾಕ್ಕಾದ ನಿರೂಪಣೆಗಳಿವೆಯೇ? ನನಗೆ ಗೊತ್ತಿಲ್ಲ. ಆದರೆ ಶಂಕೆಯ ಬಗ್ಗೆ ನನಗೆ ಗೊತ್ತು. ಈ ಶಂಕೆಯ ರಾಜಕೀಯ ನನ್ನನ್ನು ಕುತೂಹಲಿಯನ್ನಾಗಿಸುತ್ತದೆ. ಶಂಕೆಯೇ ನಮ್ಮಲ್ಲಿ ನಂಬಿಕೆಯನ್ನು ಹುಟ್ಟಿಸುತ್ತದೆ. ಶಂಕೆಯೇ ನಮ್ಮಲ್ಲಿ ಪ್ರಶ್ನೆಗಳನ್ನು ಹುಟ್ಟಿಸಿ ನಾವು ಜೀವಂತವಾಗಿರುವಂತೆ ನೋಡಿಕೊಳ್ಳುತ್ತವೆ. ಆದರೆ ಯಾವಾಗ ಈ ಶಂಕೆಯೆಂಬುದು ನಿರ್ನಾಮವಾಗುತ್ತದೋ ಆಗ ನಮ್ಮಲ್ಲಿ ಮೂಲಭೂತವಾದಿಯೊಬ್ಬ ಜನಿಸುವ ಅಪಾಯ ಎದುರಾಗುತ್ತದೆ.

ಹಲವಾರು ವಿಷಯಗಳಿಂದ ಧರ್ಮವನ್ನು ಪ್ರತ್ಯೇಕಿಸಬೇಕಿದೆ. ನಮ್ಮ ಧರ್ಮಗಳ ಆಧಾರವೇ ಭೀತಿ. ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ನಂಬಿಕಸ್ಥರಿಗೆ ಸುಖದ ಎಂದರೆ ಚಂದಿರ, ಮರುಭೂಮಿ, ಸುಂದರ ಲಿಪಿ, ಹಾರುವ ರತ್ನಗಂಬಳಿ ಮತ್ತು 'ಸಾವಿರದ ಒಂದು ರಾತ್ರಿ'ಗಳು ಎಂದು ನಂಬಿದ್ದ ನನಗೆ ಈ ಬೆಳವಣಿಗೆಯಿಂದ ತುಂಬಾ ನಾಚಿಕೆಯಾಗಿದೆ. ನಾನು ಇಸ್ಲಾಮ್ ಎಂದರೆ ಶಾಂತಿ ಮತ್ತು ಅಧೀನನನ್ನಾಗಿಸುವ ಧರ್ಮ ಎಂದು ನಂಬಿದ್ದೆ. ಆದರೆ ನಾನು ಬೆಳೆದಂತೆ ಧರ್ಮವನ್ನು ಹಲವರು ತಿರುಚುತ್ತಿದ್ದನ್ನು ನೋಡಿ ನಾನು ಎಲ್ಲ ಮಾನವ ನಿರ್ಮಿತ ಧರ್ಮಗಳಿಂದ ದೂರವಾದೆ. ನಾನು ನನಗೆ ಸಾಧ್ಯವಾದಷ್ಟು ಆಧ್ಯಾತ್ಮಿಕನಾಗಿರಲು ನಿರ್ಧರಿಸಿದೆ.

ವಿಷಯಾಂತರವಾಗುತ್ತಿದೆ ಎನಿಸುತ್ತಿದೆ. ಒಳ್ಳೆಯ ಸುದ್ದಿ ಯಾವುದೆಂದರೆ ಯಾರೂ ಮದುವೆ ಆಗುವ ಉದ್ದೇಶದಿಂದ ಮತಾಂತರವಾಗುವ ಅವಶ್ಯಕತೆ ಇಲ್ಲ ಎಂಬುದು. ವಿಶೇಷ ವಿವಾಹ ಕಾನೂನು ಈ ದೇಶದ ಪ್ರಮುಖ ಕಾನೂನುಗಳಲ್ಲಿ ಒಂದು. ಈ ಕಾನೂನಿನಡಿ ಮದುವೆಯಾದರೆ ಇದು ಎಲ್ಲಾ ಧಾರ್ಮಿಕ ಕಾನೂನುಗಳಿಗಿಂತ ಮುಖ್ಯವಾಗುತ್ತದೆ. ನಿಜವಾಗಿಯೂ ಇದೊಂದು ಜಾತ್ಯತೀತ ಕಾನೂನು.

ಭಾರತ ಹಲವಾರು - ಇಂಗ್ಲಿಷ್, ಮುಸ್ಲಿಮ್, ಹಿಂದೂ ಮತ್ತು ಇತರೆ ಹಲವಾರು - ಧಾರೆಗಳ ಸಮ್ಮಿಳನದಿಂದ ರೂಪಗೊಂಡ ದೇಶವಾಗಿದೆ. ಆದರೆ ಪ್ರಸ್ತುತ ಭಾರತದ ಒಂದು ಸಮಸ್ಯೆ ಯಾವುದೆಂದರೆ ನಮ್ಮ ಇತಿಹಾಸವನ್ನೇ ಅಳಿಸಿಹಾಕುವುದು. ಭಾರತದಲ್ಲಿ ಮುಸಲ್ಮಾನರಿಗೆ ಪಾತ್ರವೇ ಇಲ್ಲ ಎನ್ನುವುದು ಆ ಸಮುದಾಯದ ಪ್ರಾಮುಖ್ಯತೆ ಮತ್ತು ಕೊಡುಗೆಯನ್ನು ನಿರಾಕರಿಸುವಂತಹದ್ದಾಗಿದೆ. ಒಂದು ರೀತಿಯಲ್ಲಿ ಇದು ಭಾರತದಲ್ಲಿ ಮಹಿಳೆಯರಿಗೆ ಪಾತ್ರವೇ ಇಲ್ಲ ಎನ್ನುವ ಮಟ್ಟದ್ದಾಗಿದೆ. ಇಸ್ಲಾಮನ್ನು ಅಲ್ಲಗಳೆಯುವ ಅಗತ್ಯತೆ ನಮಗೇನಿದೆ? ನಾವಿರುವುದೇ ಹೀಗೆ. ನಾವೊಂದು ಮಿಶ್ರಣ. ಇದನ್ನು ನಿರಾಕರಿಸುವುದೆಂದರೆ ನಾವು ಪಿತ್ರಾರ್ಜಿತವಾಗಿ ಪಡೆದಿರುವುದನ್ನು ನಿರಾಕರಿಸುವುದಕ್ಕೆ ಸಮಾನ. 'ಲವ್ ಜಿಹಾದ್' ಎಂದರೆ ಏನೆಂದು ನನಗೆ ಗೊತ್ತಿಲ್ಲ. ಇದು ಭಾರತದಲ್ಲಿ ಸೃಷ್ಟಿಸಲಾಗಿರುವ ಒಂದು ಸಮಸ್ಯೆ. ಅಂತರಧರ್ಮೀಯ ಮದುವೆಗಳು ಜರಗುತ್ತವೆ ಎಂಬುದು ನನಗೆ ಗೊತ್ತು. ನಾನು ಅಂತಹ ಒಂದು ದಂಪತಿಗಳಿಗೆ ಜನಿಸಿದವ ಮತ್ತು ನನ್ನಂತೆಯೇ ನನ್ನ ಮಕ್ಕಳು ಕೂಡ ಅಂತರ್ಧರ್ಮೀಯ ದಂಪತಿಗಳಿಗೆ ಜನಿಸಿದವರು. ಅಂತರ್ಧರ್ಮೀಯ ಮದುವೆಗಳು 'ಜಿಹಾದ್' ಅಲ್ಲ. ಬದಲಾಗಿ ಅಂತರ್ಧರ್ಮೀಯ ಮದುವೆಗಳೇ ಭಾರತ. ಭಾರತ ಎಂಬುದೇ ಒಂದು ಮಿಶ್ರಣ. ಅಂಬೇಡ್ಕರ್ ಅವರೇ ಜಾತಿವಿನಾಶಕ್ಕೆ ಅಂತರ್ಧರ್ಮೀಯ ಮದುವೆಗಳೇ ಪರಿಹಾರ ಎಂದಿದ್ದರು. ಈ ದೇಶ ಎದುರಿಸುತ್ತಿರುವ ಸಮಸ್ಯೆಗಳನ್ನು ನಿಭಾಯಿಸಲು ನಿಜವಾದ ನಾಳಿನ ಭಾರತೀಯರ ಸೃಷ್ಟಿ.

ನಮ್ಮ ಈ ಉದಾತ್ತ ದೇಶದಲ್ಲಿ ನಾವೆಲ್ಲರೂ ಸಮ್ಮಿಶ್ರರು. ನಮ್ಮ ನಡುವಿನ ವ್ಯತ್ಯಾಸಗಳೇ ನಾವು ಯಾರು ಎಂಬುವನ್ನು ತೋರಿಸುತ್ತಿರುವುದು. ನಾವು ಸಹನೀಯತೆಯನ್ನು ದಾಟಿ ಮುಂದೆ ಸಾಗಬೇಕಿದೆ. ನಾವು ಎಲ್ಲವನ್ನು ಒಪ್ಪಿಕೊಂಡು, ಗೌರವಿಸುತ್ತಾ ಪ್ರೀತಿಸುವುದನ್ನು ಕಲಿಯಬೇಕಿದೆ.

ಖಂಡಿತವಾಗಿಯೂ ನಮ್ಮದು ಜಾತ್ಯತೀತ ದೇಶವಲ್ಲ, ಆದರೆ ನಮ್ಮ ಉದ್ದೇಶ ಒಂದು ಜಾತ್ಯತೀತ ದೇಶವಾಗಲು ಬಯಸಿತ್ತು ಮತ್ತು ಆ ನಿಟ್ಟಿನಲ್ಲಿ ನಮ್ಮ ಸಂವಿಧಾನ ಸೂಕ್ತ ಚೌಕಟ್ಟನ್ನು ಒದಗಿಸಿದೆ. ಆದರೆ ಆರು ದಶಕಗಳಿಗಿಂತಲೂ ಹೆಚ್ಚು ಕಾಲ ಕಳೆದಿದ್ದರೂ ನಾವು ಕಾನೂನು ಮತ್ತು ಧರ್ಮವನ್ನು ಪ್ರತ್ಯೇಕಿಸುವಲ್ಲಿ ವಿಫಲವಾಗಿದ್ದೇವೆ. ಅದು ಸಾಲದೆಂಬಂತೆ ವಿವಿಧ ಸಮುದಾಯಗಳಿಗೆ ಅನ್ವಯಿಸುವ ಕಾಯಿದೆಗಳಿದ್ದು ನಾವೆಲ್ಲರೂ ಒಂದು ಎಂದು ಯೋಚಿಸುವುದೇ ಕಷ್ಟಕರವಾಗಿದೆ. ಹಿಂದೂಗಳಿಗೆ ಮತ್ತು ಮುಸಲ್ಮಾನರಿಗೆ ಪ್ರತ್ಯೇಕ ಕಾನೂನುಗಳಿರುವುದು ಹೆಚ್ಚಿನ ಸಮಸ್ಯೆಗಳಿಗೆ ಕಾರಣವಾಗಿದೆ.

ಎಲ್ಲಾ ಭಾರತೀಯರಿಗೆ ಒಂದೇ ಕಾನೂನು ಜಾರಿಯಲ್ಲಿದ್ದು ನಾವೆಲ್ಲ ಒಂದೇ ರಾಷ್ಟ್ರದವರು ಎಂಬ ಭಾವನೆಗೆ ಒತ್ತು ಕೊಡಬೇಕೆಂಬುದು ನನ್ನ ಅಭಿಪ್ರಾಯ. ಅಷ್ಟೇ ಮುಖ್ಯವಾಗಿ ಎಲ್ಲಾ ಧರ್ಮಗಳು ಪ್ರಾಸಂಗಿಕವಾಗಿರಬೇಕು. ನಮ್ಮ ಮಕ್ಕಳಿಗೆ ದೇವರಿಗಿರುವ ಸಾವಿರ ಹೆಸರುಗಳನ್ನು ಹೇಳಿಕೊಡಬೇಕು. ಆದರೆ ಅದಕ್ಕಿಂತ ಮೊದಲು ಇತರೆರನ್ನು ಗೌರವಿಸುವ, ಪ್ರೀತಿಸುವ ಪಾಠವನ್ನು ನಮ್ಮ ಮಕ್ಕಳಿಗೆ ಕಲಿಸೋಣ. ಅದು ಎಲ್ಲಕ್ಕಿಂತ ಮುಖ್ಯವಾದದ್ದು.

ನಾನು ಮೊದಲು ದಂತ ಯಕ್ಷಿಣಿಯ ಬಗ್ಗೆ, ಆನಂತರ ಸಾಂತಾ ಕ್ಲಾಸ್ ಬಗ್ಗೆ ನಂಬಿಕೆಯನ್ನು ಕಳೆದುಕೊಂಡೆ. ಆಮೇಲೆ ವೈಯಕ್ತಿಕ ದೇವರ ಬಗ್ಗೆಯೂ ಏನೆಂದು ಯೋಚಿಸಬೇಕೆಂದು ಗೊತ್ತಿಲ್ಲದವನಾದೆ. ಆದರೆ ಪ್ರೀತಿಯ ಬಗ್ಗೆ ಮತ್ತು ಜಗತ್ತಿಗೆ ಒಳ್ಳೆಯದನ್ನು ಮಾಡುವ ಬಗ್ಗೆ ನನಗೆ ಈಗಲೂ ಅಪಾರ ನಂಬಿಕೆ ಇದೆ. ಆ ನಿಟ್ಟಿನಲ್ಲಿ ನಾನು ಸದಾ ಯಶಸ್ವಿಯಾಗುವುದಿಲ್ಲ ಎಂಬುದರ ಬಗ್ಗೆ ನನಗೆ ಖಿನ್ನತೆ ಇದೆ. ನನ್ನ ದೇವರು ನನ್ನ ಮನಸ್ಸಾಕ್ಷಿ. ನನ್ನ ತಂದೆಯ ಸಮಾಧಿಯ ಹತ್ತಿರವಿರುವ ಮರವೊಂದು ಎಲ್ಲಾ ದೇವಸ್ಥಾನಗಳು ಮತ್ತು ಮಸೀದಿಗಳಿಗಿಂತಲೂ ದೇವರಿಗೆ ಹತ್ತಿರವಾಗಿದೆ ಎಂದು ನನ್ನ ಮನಸ್ಸಾಕ್ಷಿ ಹೇಳುತ್ತದೆ.

● ಸೈಫ್ ಅಲಿ ಖಾನ್
ನಟ ಮತ್ತು ಸಿನಿಮಾ ನಿರ್ಮಾಪಕ



'ಬಹದ್ದೂರ್' ಧ್ರುವ ಎಂಬ ಧೂಮಕೇತು!

ಗಾಂಧಿನಗರದ ಬಾಕ್ಸ್ ಆಫೀಸ್ ಮಟ್ಟಿಗೆ ಹುಟ್ಟಿಕೊಂಡ ಕಾಲ್ಪನಿಕ ಕೂಟವೊಂದರ ಹೆಸರು ಟೆನ್ ಕ್ರೋರ್ ಕ್ಲಬ್?

ಅಂದರೆ ಹತ್ತು ಕೋಟಿಯ ಕ್ಲಬ್ಬು. ಹೇಗೆ ಬಾಲಿವುಡ್‌ನಲ್ಲಿ 100 ಕ್ರೋರ್ ಕ್ಲಬ್ ಎಂಬ ಬಾಕ್ಸ್ ಆಫೀಸ್ ಮಾನದಂಡವೊಂದು ಚಾಲ್ತಿಗೆ ಬಂದಿದೆಯೋ ಅದೇ ರೀತಿ ಕನ್ನಡ ಸಿನಿಮಾ ಗಲ್ಲಾಪೆಟ್ಟಿಗೆಯ ಮಟ್ಟಿಗೆ ಹೊಸದಾಗಿ ಚಾಲ್ತಿಗೆ ಬಂದದ್ದು ಹತ್ತು ಕೋಟಿಯ ಕ್ಲಬ್ಬು. ತೀರ ಇತ್ತೀಚೆಗೆ ಅಂದರೆ ಪುನೀತ್‌ನ 'ಪವರ್' ಚಿತ್ರ ತೆರೆಕಂಡ ಮೊದಲ ವಾರದಲ್ಲೇ ಹತ್ತು ಕೋಟಿಯ ಕಲೆಕ್ಷನ್ ಮಾಡಿದ್ದೇ ಕೊನೆ. ಅದಕ್ಕೂ ಮುನ್ನ ಸುದೀಪ್‌ನ 'ಮಾಣಿಕ್ಯ' ಕೂಡ ತೆರೆಕಂಡ ಮೊದಲ ವಾರದಲ್ಲೇ ಹತ್ತು ಕೋಟಿ ಟಿಕೆಟ್ ಆದಾಯ ಕಂಡಿತ್ತಂತೆ. ಯಶ್‌ನ 'ರಾಜಾಹುಲಿ', ದರ್ಶನ್‌ನ 'ಬೃಂದಾವನ', 'ಬುಲ್‌ಬುಲ್', 'ಚಿಂಗಾರಿ', 'ಸಾರಥಿ' ಇತ್ಯಾದಿ ಸಿನಿಮಾಗಳೇ ಈ ಹತ್ತು ಕೋಟಿ ಕ್ಲಬ್ಬಿನ ಕಾರಣೀಭೂತಚಿತ್ರಗಳಂತೆ.

ಈ ಪಟ್ಟಿಗೆ ಧೂಮಕೇತುವಿನಂತೆ ಕಾಲಿಟ್ಟಿದ್ದಾನೆ ಧ್ರುವ ಸರ್ಜಾ. 'ಬಹದ್ದೂರ್' ಗಾಂಧಿನಗರದ ಪಂಡಿತರ ಲೆಕ್ಕಾಚಾರಗಳೆಲ್ಲವನ್ನೂ ಬುಡಮೇಲುಗೊಳಿಸಿದೆ. ರಾಜ್ಯಾದ್ಯಂತ 256 ಚಿತ್ರಮಂದಿರಗಳಲ್ಲಿ ತೆರೆಕಂಡ ಶಿವಣ್ಣನ 'ಶಿವ' ಚಿತ್ರ ಮೊದಲ ವಾರಕ್ಕೆ ಗಳಿಸಲಸಾಧ್ಯ ಗಲ್ಲಾಪೆಟ್ಟಿಗೆಯನ್ನು ಕೇವಲ 150 ಥೇಟರುಗಳಿಂದಲೇ 'ಬಹದ್ದೂರ್' ಗಳಿಸಿಬಿಟ್ಟಿದೆ. ಪುನೀತ್‌ನ 'ಪವರ್' ಹೆಚ್ಚೂಕಮ್ಮಿ 200 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿ ಗಳಿಸಿದ ಹತ್ತು ಕೋಟಿ ಮೊತ್ತವನ್ನು 'ಬಹದ್ದೂರ್' ತಲುಪಿದ್ದು ಕೇವಲ 150 ಚಿತ್ರಮಂದಿರಗಳಿಂದ!

ಸುದೀಪ್‌ನ 'ಮಾಣಿಕ್ಯ', ದರ್ಶನ್‌ನ 'ಬೃಂದಾವನ', 'ಬುಲ್‌ಬುಲ್' ಮತ್ತು ಶಿವಣ್ಣನ 'ಭಜರಂಗಿ'ಗೆ ಹೋಲಿಸಿದರೆ 'ಬಹದ್ದೂರ್' ಕೇವಲ ನೂರೈವತ್ತು ಥೇಟರುಗಳಿಂದ ಸಂಪಾದಿಸಿದ್ದನ್ನು ಬೇರೆಲ್ಲವು ಇನ್ನೂರು ಚಿತ್ರಮಂದಿರಗಳಿಂದ ಸಂಪಾದಿಸಬೇಕಾಗಿತ್ತು.

ಧೂಮಕೇತು


ಧ್ರುವ ಸರ್ಜಾ ಮತ್ತು 'ಬಹದ್ದೂರ್'ನ ವೈಶಿಷ್ಟ್ಯ ಇರುವುದೇ ಇಲ್ಲಿ. ಧ್ರುವನ ಪಾಲಿಗೆ ಇದು ಎರಡನೇ ಚಿತ್ರ. ಮೊದಲ ಚಿತ್ರ 'ಅದ್ದೂರಿ' ಮೊದಮೊದಲು ಪ್ರೇಕ್ಷಕರನ್ನು ಸೆಳೆದಿರಲಿಲ್ಲ. ಏಕೆಂದರೆ ಧ್ರುವ ಆ ಹೊತ್ತಿಗೆ ಅಜ್ಞಾತನಾಗಿದ್ದ. ಅರ್ಜುನ್ ಸರ್ಜಾರ ಸಂಬಂಧಿ ಎಂಬುದನ್ನು ಬಿಟ್ಟರೆ ಆತನ ನಟನೆ, ಇಮೇಜ್ ಏನೊಂದೂ ಕಂಡರಿಯದ ಪ್ರೇಕ್ಷಕ ಸಮೂಹ ಟಾಕೀಸಿನತ್ತ ತಲೆ ಹಾಕತೊಡಗಿದ್ದು ಮೂರನೇ ವಾರಕ್ಕೆ. ಅದಕ್ಕೆ ಕಾರಣ 'ಅದ್ದೂರಿ'ಯ ಎಲ್ಲಾ ಹಾಡುಗಳೂ ಹಿಟ್ಟಾಗಿದ್ದು, ಡೈರೆಕ್ಟರ್ ಅರ್ಜುನ್ ಬಗೆಗಿದ್ದ ನಿರೀಕ್ಷೆ ಮತ್ತು ಚಂದದ ಗೊಂಬೆ ರಾಧಿಕಾ ಪಂಡಿತ್!

ಆದರೆ ಮಿಂಚಿದ್ದು ಧ್ರುವ. ಆತನ ಡ್ಯಾನ್ಸ್, ಫೈಟಿಂಗ್, ಡೈಲಾಂಗ್ ಡೆಲಿವರಿ, ಮ್ಯಾನರಿಸಂ, ಕಾಸ್ಟೂಮ್, ಬಾಡಿ ಲಾಂಗ್ವೇಜ್- ಎಲ್ಲವೂ ತಾಜಾತನದಿಂದ ಕೂಡಿತ್ತು. ರಾತ್ರಿ ಕಳೆಯುವ ಮುನ್ನವೇ ಧ್ರುವ ಸ್ಟಾರ್ ಪಟ್ಟಕ್ಕೇರಿಬಿಟ್ಟ. ಹಾಗಂತ ಕೇಳಿದವರಿಗೆಲ್ಲ ಧ್ರುವ ಕಾಲ್‌ಶೀಟ್ ನೀಡಲಿಲ್ಲ.


ಹರಿಕೃಷ್ಣ


ಕನಕಪುರ ಶ್ರೀನಿವಾಸ್


ನಿರ್ಮಾಪಕ ಶ್ರೀಕಾಂತ್


ಪುನೀತ್


ಅರ್ಜುನ್ ಸರ್ಜಾ

ಅಂಥಾದ್ದೊಂದು ನಿರ್ಧಾರದ ಹಿಂದಿದ್ದದ್ದು ಆತನ ಅಂಕಲ್ ಅರ್ಜುನ್ ಸರ್ಜಾ. ದುಡ್ಡು, ಬ್ಯಾನರ್, ತಾರಾಗಣ ಎಲ್ಲಕ್ಕಿಂತಲೂ ಕತೆ ಮುಖ್ಯ. ಕತೆ ಕೇಳದೆ ಸಿಕ್ಕಸಿಕ್ಕವರಿಗೆಲ್ಲ ಕಾಲ್‌ಶೀಟ್ ಕೊಡುತ್ತಾ ಹೋದರೆ ಇಮೇಜ್ ಕೆಡುತ್ತದೆ ಮತ್ತು ಅಂಥ ಹೀರೋನ ಬಾಳಿಕೆಯೂ ಕುಸಿಯುತ್ತದೆ. ಇದು ಅರ್ಜುನ್ ಸರ್ಜಾರ ಸುದೀರ್ಘ ಅನುಭವದಿಂದ ಕಂಡುಕೊಂಡ ವಾಸ್ತವವಾಗಿತ್ತು.

ಇದನ್ನೇ ಸರ್ಜಾ ತನ್ನ ತಂಗಿಯ ಮಗನಿಗೂ ಅಳವಡಿಸಿದ್ದರು. ಪ್ರತಿಫಲವಾಗಿ ಆಯ್ಕೆಯಾಗಿದ್ದು 'ಬಹದ್ದೂರ್' ಕತೆ. ಬರೋಬ್ಬರಿ ಎರಡು ವರ್ಷಗಳ ಗ್ಯಾಪ್‌ನಲ್ಲಿ ಬಹದ್ದೂರ್ ನಿರ್ಮಾಣಗೊಳ್ಳುವುದಕ್ಕೂ ಕಾರಣವಿತ್ತು. ಪ್ರಾರಂಭದಲ್ಲಿ ನಿರ್ಮಾಪಕರಾಗಿದ್ದವರಿಗೆ ದಿನಕಳೆದಂತೆ ನಿರ್ಮಾಣ ವೆಚ್ಚವೇ ದುಬಾರಿಯೆನಿಸಿ ಒಂದಷ್ಟು ದಿನಗಳ ಕಾಲ ಶೂಟಿಂಗ್ ನಿಂತೇ ಹೋಗಿತ್ತು. ಆ ಹಂತದಲ್ಲಿ 'ಬಹದ್ದೂರ್' ನೆರವಿಗೆ ಬಂದದ್ದು ಕನ್ನಡದ ಮತ್ತೊಬ್ಬ ಯಶಸ್ವೀ ನಿರ್ಮಾಪಕ ಶ್ರೀಕಾಂತ್. ಅವರ ಮೂಲಕವೇ ಕನಕಪುರ ಶ್ರೀನಿವಾಸ್ 'ಬಹದ್ದೂರ್' ನಿರ್ಮಾಣವನ್ನು ಕೈಗೆತ್ತಿಕೊಂಡರು. ಆನಂತರದ್ದೇನಿದ್ದರೂ ಅದು ಯಶೋಗಾಥೆಯೆ.

ಸೆಪ್ಟೆಂಬರ್ 28ರಂದು ತೆರೆಕಂಡ 'ಬಹದ್ದೂರ್'ಗೂ ಹತ್ತು ಕೋಟಿ ದಾಟಿದ್ದ ಪುನೀತ್‌ನ 'ಪವರ್' ಮತ್ತು ಯಶ್‌ನ 'ಗಜಕೇಸರಿ'ಗೂ ಪರಿಸ್ಥಿತಿ ಮತ್ತು ಅನುಕೂಲದಲ್ಲಿ ವಿಪರೀತ ವ್ಯತ್ಯಾಸವಿತ್ತು. 'ಗಜಕೇಸರಿ' ಬಿಡುಗಡೆಯಾಗುವ ಹೊತ್ತಿಗೆ ಅದಕ್ಕೆ ಪೈಪೋಟಿ ಕೊಡುವಂಥ ಯಾವುದೇ ದೊಡ್ಡ ಹೀರೋಗಳ ಚಿತ್ರಗಳಿರಲಿಲ್ಲ. ಹಾಗೇ 'ಪವರ್'ಗೂ ಥೇಟರುಗಳ ವಿಷಯದಲ್ಲಿ ಮತ್ತು ಪೈಪೋಟಿ ಎನ್ನುವಂತಹ ಚಿತ್ರಗಳಿರಲಿಲ್ಲ. ಆದರೆ 'ಬಹದ್ದೂರ್'ಗೆ ಇಂಥ ಅನುಕೂಲಗಳಿರಲಿಲ್ಲ!

ಅಸಾಧ್ಯ ಪೈಪೋಟಿ

ಮೊದಮೊದಲು ಥೇಟರುಗಳೇ ಇರಲಿಲ್ಲ. ಜೊತೆಗೆ ಹಿಂದಿ, ತಮಿಳು, ತೆಲುಗು ಚಿತ್ರರಂಗಗಳ ಘಟಾನುಘಟಿಗಳ ಚಿತ್ರಗಳೆಲ್ಲ ಒಂದರ ಮೇಲೊಂದಾಗಿ ಕರ್ನಾಟಕದ ಮಾರುಕಟ್ಟೆಗೆ ಲಗ್ಗೆಯಿಟ್ಟವು. ಬಾಲಿವುಡ್‌ನ ಬಲಾಢ್ಯ ಬ್ಯಾನರ್ ಮಾತ್ರವಲ್ಲದೆ ಹೃತಿಕ್-ಕತ್ರೀನಾ ಜೋಡಿಯಿದ್ದ 'ಬ್ಯಾಂಗ್ ಬ್ಯಾಂಗ್' ಬರೋಬ್ಬರಿ 200 ಕೋಟಿ ರೂಪಾಯಿಗಳ ವೆಚ್ಚದಲ್ಲಿ ತಯಾರಾದ ಚಿತ್ರ. ಹುಬ್ಬಳ್ಳಿ, ಬೆಳಗಾವಿ, ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಐವತ್ತಕ್ಕೂ ಅಧಿಕ ಥೇಟರುಗಳಲ್ಲಿ ತೆರೆಕಂಡಿತ್ತು. ಇದಕ್ಕೆ ಸರಿಯಾಗಿ ಪೈಪೋಟಿ ಕೊಟ್ಟಿದ್ದು ವಿಶಾಲ ಭಾರದ್ವಾಜ್‌ನ 'ಹೈದರ್'. ಇವೆರಡೂ ಬಾಲಿವುಡ್ ಚಿತ್ರಗಳಾದರೆ ಇದಕ್ಕೆ ಸರಿಸಾಟಿಯಾಗಿ ಕರ್ನಾಟಕಕ್ಕೆ ಲಗ್ಗೆಯಿಟ್ಟಿದ್ದು ತೆಲುಗಿನ ಚಿರಂಜೀವಿ ಪುತ್ರನ ಚಿತ್ರ 'ಗೋವಿಂದುಡು ಅಂದರಿ ವಾಡುಲೇ...!'

10 ಕೋಟಿ


60 ಕೋಟಿ ವೆಚ್ಚದಲ್ಲಿ ತಯಾರಾದ ಚಿರಂಜೀವಿ ಪುತ್ರನ ಚಿತ್ರ, ತಮಿಳಿನ 50 ಕೋಟಿಯ ಯಾನ್ ಇತ್ಯಾದಿಗಳಲ್ಲದೆ ದುನಿಯಾ ವಿಜಯ 'ಸಿಂಹಾದ್ರಿ' ಬೇರೆ. ಒಂದಕ್ಕಿಂತ ಒಂದು ಬಿಗ್ ಬಜೆಟ್, ಬಿಗ್‌ಬ್ಯಾನರ್‌ಗಳ ಘಟಾನುಘಟಿ ಹೀರೋ, ಹೀರೋಯಿನ್ನುಗಳಿದ್ದ ಇಂಥ ಚಿತ್ರಗಳ ಮುಂದೆ 'ಬಹದ್ದೂರ್' ಯಾವ ಲೆಕ್ಕ?

ಆದರೆ ಅಕ್ಟೋಬರ್ 1ರ ಹೊತ್ತಿಗೆ ಕರ್ನಾಟಕದ ಬಾಕ್ಸ್‌ಆಫೀಸ್ ಲೆಕ್ಕಾಚಾರಗಳೇ ತಲೆಕೆಳಗಾಗಿದ್ದವು. ಮೆಜೆಸ್ಟಿಕ್‌ನ ನರ್ತಕಿ, ಮಾಗಡಿ ರೋಡ್‌ನ ವೀರೇಶ್, ಮೈಸೂರಿನ ಸಂಗಂ, ಮಂಡ್ಯದ ಸಂಜಯ್, ದಾವಣಗೆರೆಯ ಅಶೋಕಾ ಇತ್ಯಾದಿ ಪ್ರತಿಷ್ಠಿತ ಥೇಟರುಗಳಲ್ಲಿ ತೆರೆಕಂಡಿದ್ದ ಬಹದ್ದೂರ್ ಬೆಂಗಳೂರು ಐಷಾರಾಮೀ ಮಲ್ಟಿಪ್ಲೆಕ್ಸ್‌ಗಳಲ್ಲಿ ದಿನಕ್ಕೆ ಕೇವಲ ಎರಡು ಶೋಗಳಿಗಷ್ಟೆ ಸೀಮಿತಗೊಂಡಿತ್ತು. ಹೃತಿಕ್, ಕತ್ರೀನಾ, ಚಿರಂಜೀವಿ ಮಗ, ಹೈದರ್ ಥರದ ಚಿತ್ರಗಳೆದುರು ತೀರ ಅವಮಾನಕರವೆಂಬಂತೆ ಸ್ಥಾನಗಿಟ್ಟಿಸಿದ್ದ 'ಬಹದ್ದೂರ್'ನ ರಭಸ ಎರಡನೇ ದಿನದ ಲೆಕ್ಕಾಚಾರದಲ್ಲೇ ಬೇರೆಯಾಗಿತ್ತು. ಮೊದಲ ದಿನ ಕೇವಲ ಎರಡು ಶೋಗಳಿದ್ದದ್ದು ಎರಡನೇ ದಿನದ ಹೊತ್ತಿಗದು ನಾಲ್ಕು ಶೋಗಳಿಗೆ ಏರಿತ್ತು.

ರಾಜಾಜಿನಗರದ ಓರಿಯನ್ ಮಾಲ್, ಮಲ್ಲೇಶ್ವರದ ಮಂತ್ರಿಮಾಲ್ ಮಾತ್ರವಲ್ಲದೆ ಮೈಸೂರಿನ ಮಲ್ಟಿಪ್ಲೆಕ್ಸ್, ಗೋಲ್ಡ್‌ಕ್ಲಾಸ್‌ಗಳೆಲ್ಲ ಹೌಸ್‌ಫುಲ್ ಬೋರ್ಡಿನ ಸಮೇತ ಕಿಕ್ಕಿರಿದವು. ಹಾಗೆ ನೋಡಿದರೆ 60 ಕೋಟಿ, 1... ಕೋಟಿ, 200 ಕೋಟಿಯ 'ಬ್ಯಾಂಗ್ ಬ್ಯಾಂಗ್', 'ಹೈದರ್', 'ಗೋವಿಂದುಡು'ಗಳಂಥ ಭರ್ಜರಿ ಚಿತ್ರಗಳೆಲ್ಲ 'ಬಹದ್ದೂರ್'ನ ಆರ್ಭಟಕ್ಕೆ ಸೊರಗಿ ಹೋದವು. ತಮಿಳಿನ 'ಯಾನ್' ಮೊದಲ ವಾರಕ್ಕೆ ಕೇವಲ ಶೇ. 44ರಷ್ಟು ಪ್ರೇಕ್ಷಕರನ್ನು ಸೆಳೆದರೆ 'ಬ್ಯಾಂಗ್ ಬ್ಯಾಂಗ್' ಶೇ. 62ರಷ್ಟಿತ್ತು. ತೆಲುಗಿನ 'ಗೋವಿಂದುಡು' ಶೇ. 77ರಷ್ಟಿತ್ತು. ಇದ್ದುದರಲ್ಲಿ ಅಷ್ಟಿಷ್ಟು ಪೈಪೋಟಿ ಕೊಟ್ಟಿದ್ದು ಹಿಂದಿಯ 'ಹೈದರ್'. ಅದು ಶೇ.81ರಷ್ಟು ಪ್ರೇಕ್ಷಕರನ್ನು ಸೆಳೆದಿತ್ತು. ಆದರೆ 'ಬಹದ್ದೂರ್' ಶೇ. 98ರಷ್ಟು ಅಂದರೆ ಭಾಗಶಃ ಹೌಸ್‌ಫುಲ್ಲಾಗಿತ್ತು.

ಕುದುರೆಯಿಂದ ಬಿದ್ದವನು ಸತ್ತೇ ಹೋದೆ ಎಂದುಕೊಂಡಿದ್ದೆ


ಕುದುರೆಯೇರಿದ ಬಹದ್ದೂರ್


ಚಿರಂಜೀವಿ ಸರ್ಜಾ

ಯಾರು ಹೇಳಿದ್ದು ನಾವು ನಾರ್ತ್ ಇಂಡಿಯನ್ಸು ಅಂತ. ಸರ್ಜಾ ಅನ್ನೋ ಪದ ಇರೋದರಿಂದ ನಾವು ಹಿಂದಿ ಮೂಲದವರು ಅಂತ ಅನೇಕರು ಭಾವಿಸಿದ್ರೆ ಅದು ತಪ್ಪು... ನಾವು ಪಕ್ಕಾ ಗೌಡ್ರು. ಮೈಸೂರು ಪಕ್ಕದ ಜಕ್ಕೇನಹಳ್ಳಿ ನಮ್ಮ ಮೂಲ ಊರು. ಸರಾಪುರಿ ವಂಶದ ಜಕ್ಕೇನಹಳ್ಳಿ ಎಂಬುದನ್ನೇ ಪುಟ್ಟದಾಗಿ ಸರ್ಜಾ ಅಂತ ಇಟ್ಟುಕೊಂಡಿದ್ದೇವೆ. ನಮ್ಮ ತಂದೆ ಒಬ್ಬ ಸಾಮಾನ್ಯ ಮೆಕಾನಿಕ್. ಇವತ್ತಿಗೂ ಬಿಎಂಟಿಸಿ 13ನೇ ಡಿಪೋದಲ್ಲಿ ಮೆಕಾನಿಕ್ ಆಗಿ ಕೆಲಸ ಮಾಡುತ್ತಿದ್ದಾರೆ. ಚಿರಂಜೀವಿ ಸರ್ಜಾ ನನಗೆ ಸ್ವಂತ ಅಣ್ಣನಾಗಬೇಕು. ನಾನು ಓದಿದ್ದು ರಿಚ್ಮಂಡ್ ಸರ್ಕಲ್ ಸಮೀಪದ ಬಾಲ್ಡ್‌ವಿನ್ ಮೆಥಾಡಿಸ್ಟ್ ಕಾಲೇಜಿನಲ್ಲಿ, ನಾನು ಬಿಬಿಎಂ ಗ್ರಾಜ್ಯುಯೇಷನ್ ಮುಗಿಸಿಕೊಂಡ ನಂತರ ಕೆಲಸಕ್ಕೆ ಸೇರೋಣ ಅಂದುಕೊಂಡಿದ್ದೆ. ಆದರೆ ಮಾಮನ (ಅರ್ಜುನ್ ಸರ್ಜಾ) ಲೆಕ್ಕಾಚಾರವೇ ಬೇರೆಯಿತ್ತೇನೋ. ಅದಕ್ಕೇ ಆಕ್ಟರ್ ಆಗಿದ್ದೀನಿ...!

ಎಲ್ಲಾ ಕೇಳೋದು ಒಂದೇ ಮಾತು. ಅದ್ದೂರಿ ಮುಗಿದ ಮೇಲೆ ಅಷ್ಟೆಲ್ಲಾ ಅವಕಾಶಗಳು ಹುಡುಕಿಕೊಂಡು ಬಂದರೂ ಏಕೆ ಎರಡು ವರ್ಷಗಳ ಕಾಲ ಬೇರೆ ಚಿತ್ರಗಳನ್ನು ಒಪ್ಪಿಕೊಳ್ಳಲಿಲ್ಲ ಅಂತ. ದುಡ್ಡೇ ಮುಖ್ಯವಾಗಿದ್ರೆ ನಾನು ಈ ಹೊತ್ತಿಗೆ ಐದಾರು ಚಿತ್ರಗಳನ್ನು ಒಪ್ಪಿಕೊಂಡಿರುತ್ತಿದ್ದೆ. ಅಂಕಲ್ (ಅರ್ಜುನ್) ನನಗೆ ಹೇಳಿಕೊಟ್ಟ ಪಾಠವೇ ಬೇರೆ. ನನಗೆ ಕತೆ ಮುಖ್ಯ. ನಾನು ಮಾಡೋ ಚಿತ್ರದಲ್ಲಿ ಕತೆಯೇ ಹೀರೋ ಆಗಿರಬೇಕೇ ಹೊರತು ನಾನು ಹೀರೋ ಆಗಿದ್ದೀನಿ ಅಂತ ಕತೆ ಇರಬಾರದು. ಇದು ನನ್ನ ಪಾಲಿಸಿ. ಒಂದು ವರ್ಷ ಕಾಲ ಯಾವುದೇ ಕತೆ ಸೆಟ್ ಆಗಲಿಲ್ಲವಾದ್ದರಿಂದ ನಾನು ಬಹದ್ದೂರ್‌ಗೇ ಸೀಮಿತವಾಗಿ ಇದ್ದುಬಿಟ್ಟೆ.

ಈಗ ನಾನು ರಿಲೀಫಾಗಿದ್ದೀನಿ. 'ಬಹದ್ದೂರ್' ಪ್ರಾಜೆಕ್ಟ್ ಮುಗಿದಿದೆಯಾದ್ದರಿಂದ ಹೊಸ ಕತೆ ಹುಡುಕ್ತಾ ಇದ್ದೀನಿ. ದಿನ ಬೆಳಗ್ಗೆಯಾದರೆ ಕತೆ ಕೇಳೋದೇ ಕೆಲಸವಾಗಿಬಿಟ್ಟಿದೆ. ನೋಡ್ಬೇಕು, ಯಾವ ಕತೆ ಸೆಟ್ಟಾಗುತ್ತೋ ಅವರಿಗೆ ಕಾಲ್‌ಶೀಟ್ ಪಕ್ಕಾ. ಹಾಗಂತ ನನ್ನ ಸಂಭಾವನೆ ಎಷ್ಟು ಅಂತ ಕೇಳ್ಬೇಡಿ. ಅದನ್ನೆಲ್ಲ ಮಾಮಾನೇ ನೋಡ್ಕೊಳ್ತಾರೆ. ಕತೆನೂ ಅವರೇ ಆಯ್ಕೆ ಮಾಡಿಕೊಳ್ಳೋದು!

'ಬಹದ್ದೂರ್'ಗೆ ಸಂಬಂಧಪಟ್ಟಂತೆ ಹೇಳ್ಬೇಕು ಅಂದ್ರೆ ಅದರ ಯಶಸ್ಸು ಆ ಚಿತ್ರದ ತಂತ್ರಜ್ಞರು ಮತ್ತು ಬೆಂಬಲಿಸಿದ ಪ್ರೇಕ್ಷಕರಿಗೆ ಸಲ್ಲಬೇಕು. ಆ ಯಶಸ್ಸಿನಲ್ಲಿ ನನ್ನದೇನೂ ಪಾತ್ರವಿಲ್ಲ. ನಾನಿನ್ನೂ ಚಿಕ್ಕ ಹುಡುಗ, ಸುಮ್ಮನೆ ದೊಡ್ಡ ಮಾತಾಡಿ ಪ್ರಯೋಜನವಿಲ್ಲ. ಆದರೆ 'ಬಹದ್ದೂರ್' ಶೂಟಿಂಗ್ ವೇಳೆ ನಡೆದ ಆಕ್ಸಿಡೆಂಟ್ ಇದೆಯಲ್ಲ, ಅದನ್ನು ಮಾತ್ರ ಮರೆಯುವಂತಿಲ್ಲ. ನಾನು ಬದುಕಿ ಉಳಿದದ್ದೇ ಹೆಚ್ಚು. ಹಾಡಿನ ದೃಶ್ಯವೊಂದರಲ್ಲಿ ನಾನು ಕುದುರೆ ಮೇಲೆ ಕೂತು ಎರಡೂ ಕೈ ಬಿಟ್ಟುಕೊಂಡು ಕುದುರೆ ಓಡಿಸಬೇಕಿತ್ತು. ಅದೇನಾಯಿತೋ ಕುದುರೆ ಮೇಲಿಂದಲೇ ಜಾರಿ ನೆಲಕ್ಕೆ ಬಿದ್ದುಬಿಟ್ಟೆ. ಇನ್ನೇನು ಕುದುರೆ ನನ್ನನ್ನು ತುಳಿದುಕೊಂಡೇ ಓಡಬೇಕು. ನಾನು ಸತ್ತೇ ಎಂದೇ ಭಾವಿಸಿದ್ದೆ. ಅಚಾನಕ್ಕಾಗಿ ಬದುಕುಳಿದುಬಿಟ್ಟೆ...!

ಪುಟ್ಟ ಬಾಲಕನಂತೆ ಧ್ರುವ ಹೇಳುವ ಮಾತುಗಳಿವು.

ಈ ಐಮಾರಾಮೀ ಮಲ್ಟಿಪ್ಲೆಕ್ಸ್‌ಗಳ ಪ್ರೇಕ್ಷಕ ಧಾರಣೆಯಾದರೆ ಟರುಗಳ ಲೆಕ್ಕಾಚಾರವೇ ಬೇರೆಯಿತ್ತು, ಬಿಕೆಟಿ- ಅಂದರೆ ರು, ಕೋಲಾರ, ತುಮಕೂರು- ವಲಯದಿಂದ ಮೊದಲ 'ಬಹದ್ದೂರ್' ಬರೋಬ್ಬರಿ ನಾಲ್ಕು ಕೋಟಿ ಯಗಳನ್ನು ಕಲೆ ಹಾಕಿತ್ತು, ಪುನೀತ್, ದರ್ಶನ್, ಸುದೀಪ್, ಚಿತ್ರಗಳಿಗೆ ಹೋಲಿಸಿದರೆ ಇದು ಸಾಧಾರಣ ಮಟ್ಟದ ನಾಗಿರಲಿಲ್ಲ. ಮೈಸೂರು, ಮಂಡ್ಯ, ಕೊಡಗು, ಹಾಸನ ನೊಂದೇ 1.10 ಕೋಟಿ ಸಂಗ್ರಹಿಸಿತ್ತು. ಹುಬ್ಬಳ್ಳಿ ಬಂದಲೂ ಹೆಚ್ಚೂಕಮ್ಮಿ ಇಷ್ಟೇ ಮೊತ್ತದ ಕಲೆಕ್ಷನ್ನಾಗಿತ್ತು. ಪ್ರದೇಶದಲ್ಲಿ ಸಂಗ್ರಹವಾಗಿದ್ದ 65 ಲಕ್ಷ, ಶಿವಮೊಗ್ಗ, ಕನ್ನಡ ಪ್ರದೇಶದಿಂದ ಬಂದ 50 ಲಕ್ಷ ಮತ್ತು ಬದ್-ಕರ್ನಾಟಕ ವಲಯದಿಂದ ಕಲೆ ಹಾಕಿದ್ದ 30 ಹೋಲಿಸಿದರೆ 'ಬಹದ್ದೂರ್' ಕನ್ನಡದ ದೊಡ್ಡ ಸ್ಟಾರ್‌ಗಳೆಲ್ಲರ ನಿಂತಾಗಿತ್ತು.



ವಿಶಿಷ್ಟ ಕತೆ

ತ್‌ನ 'ಪವರ್' 190 ಥೇಟರುಗಳಿಂದ ಸಂಗ್ರಹಿಸಿದ್ದನ್ನು ರ್' ಕೇವಲ 150 ಥೇಟರುಗಳಿಂದ ಕಲೆ ಹಾಕಿತ್ತು. ಎರಡನೇ ವಾರಕ್ಕೆ ಕಾಲಿಡುತ್ತಿದ್ದಂತೆಯೇ ಅದು ವಾಗಿ 10 ಕೋಟಿ ಕಲೆ ಹಾಕಿತ್ತು. ಒಂದು ಮೂಲದ ಬಹದ್ದೂರ್'ನ ನಿರ್ಮಾಣ ವೆಚ್ಚ ಹೆಚ್ಚೆಂದರೆ 8 ಕೋಟಿ. ವಿಶೇಷವೆಂದರೆ ಮುಹೂರ್ತದ ದಿನವೇ ಅದರ ಟೀವಿ ರೈಟ್ಸ್‌ನ್ನು ಸುವರ್ಣ ಟೀವಿಯವರು ರೆ ಕೋಟಿ ಕೊಟ್ಟು ಖರೀದಿಸಿದ್ದರು. ಅಂದರೆ ಮೊದಲ ವಾರದ ಮಾಡಿದ ಖರ್ಚೆಲ್ಲವೂ ಬಂದಾಗಿತ್ತು. ಎರಡನೇ ವಾರದ ಹೊತ್ತಿಗೆ ಲೆಕ್ಷನ್ ಶೇ. 60ಕ್ಕಿಂತ ಕಮ್ಮಿಯಾಗಲೇ ಇಲ್ಲ. ಮೂರನೇ ವಾರಕ್ಕದು ಕ್ಕಿಂತಲೂ ಕೆಳಗಿಳಿದಿರಲಿಲ್ಲ. ಬದಲಿಗೆ ಹಳೆಯ ಥೇಟರುಗಳಲ್ಲದೆ 25 ಥೇಟರುಗಳಲ್ಲಿ ಹೆಚ್ಚುವರಿಯಾಗಿ ಆವರಿಸಿತ್ತು.

ಕುಟುಂಬದ ಪುನೀತ್, ಬಲಾಢ್ಯ ಸುದೀಪ್ ಮತ್ತು ದರ್ಶನ್‌ರ ಕೇವಲ ಎರಡನೇ ಚಿತ್ರಕ್ಕೆ ಧ್ರುವ ಬಂದು ನಿಂತಿದ್ದ!

ಂತ 'ಬಹದ್ದೂರ್'ನಲ್ಲಿ ಅಂಥಾದ್ದೇನಿದೆ ಎಂದು ರಟರೆ ಕತೆಯಲ್ಲಾಗಲಿ, ವಿಷಯದಲ್ಲಾಗಲಿ ಯಾವುದೇ ಲಿಲ್ಲ. ಈ ಹಿಂದೆ 'ಅದ್ದೂರಿ' ನಿರ್ಮಿಸಿದ್ದ ನಿರ್ದೇಶಕ ಗೆ ಕ್ಲಾಪ್‌ಬಾಯ್ ಆಗಿದ್ದ ಚೇತನ್‌ಕುಮಾರ್ ಎಂಬ ಹುಡುಗನೊಬ್ಬನ ಕತೆಯಿದು. ಈತನೇ ರ್'ನ ನಿರ್ದೇಶಕ ಕೂಡ. ಕತೆ ಸಿಂಪಲ್ಲಾಗಿತ್ತು. ಮವಾಗಿದ್ದಾಗಲೇ ತನ್ನ ತಾಯಿಯನ್ನು ಕಳಕೊಂಡು ಆರೈಕೆಯಲ್ಲೇ ಬೆಳೆದ ಇಬ್ಬರು ಹುಡುಗಿಯರ ಯೇ ಇದರ ಹೀರೋಯಿನ್. ಪ್ರಾಯಕ್ಕೆ ಬಂದ ರೋ ಹುಡುಗನನ್ನು ಪ್ರೀತಿಸಿ ಮದುವೆಯಾಗಿ ಂಕಷ್ಟಕ್ಕೆ ಸಿಲುಕಿ ದುರಂತ ಅಂತ್ಯ ಕಾಣುತ್ತಾಳೆ. ರೋಯಿನ್ ತಂದೆಗೆ 'ತಾನೆಂದೂ ಪ್ರೀತಿಸಿ ಯಾಗುವುದಿಲ್ಲ, ನೀನು ಹೇಳಿದ ಹುಡುಗನನ್ನೇ ಯಾಗುತ್ತೇನೆ' ಎಂದು ಮಾತು ಕೊಡುತ್ತಾಳೆ.



ನಿರ್ದೇಶಕ ಚೇತನ್‌ಕುಮಾರ್

ಯಾರನ್ನೂ ಪ್ರೀತಿಸುವುದಿಲ್ಲ ಎಂದು ತಂದೆ ಮಾತು ಕೊಟ್ಟು ಸಿಕ್ಕೊಂದು ಮೈಸೂರಿಗೆ ಬರುವ ಈ ಉತ್ತರ ಕರ್ನಾಟಕ ಮೂಲದ ಬ್ಬ ರೋಮಿಯೋ ಗಂಟು ಬೀಳುತ್ತಾನೆ. ಆತನದ್ದು ಇವಳಿಗಿಂತ ಹಿನ್ನೆಲೆ. ಈಕೆ ಪ್ರೇಮವಿವಾಹದ ದ್ವೇಷಿಯಾದರೆ ಆತ ಅರೇಂಜ್ಡ್ ರ ವಿರೋಧಿ. ತಂದೆ-ತಾಯಿ, ಹಿರಿಯರೆಲ್ಲ ನಿಂತು ಮದುವೆ ಮಾಡಿದ ಅಣ್ಣನಿಗೆ ಅದೇ ಶಾಪವಾಗುತ್ತದೆ. ಕೈಹಿಡಿದ ಪತ್ನಿಯೇ ವರದಕ್ಷಿಣೆ ಕಿರುಕುಳದ ದೂರು ಕೊಟ್ಟು ಅಣ್ಣನನ್ನು ಜೈಲಿಗೆ ಹಾಕಿಸಿದ್ದನ್ನು ಕಂಡ ಈ ಹೀರೋ ತಾನೆಂದಿಗೂ ಅರೇಂಜ್ ಥರದ ಮದುವೆಯಾಗದೆ ಪ್ರೀತಿಸಿಯೇ ಮದುವೆಯಾಗುತ್ತೇನೆಂದು ಶಪಥ ಮಾಡುತ್ತಾನೆ.

ಪುನೀತ್ ನೆರಳಲ್ಲಿ

ಈತನಿಗೆ ಪ್ರೀತಿಸಿ ಮದುವೆಯಾಗಲೇಬೇಕಾದ ಅನಿವಾರ್ಯವಾದರೆ ಆಕೆಗೆ ತಂದೆಗೆ ಕೊಟ್ಟ ಮಾತು ಉಳಿಸಿಕೊಳ್ಳಲೇಬೇಕಾದ ದರ್ದು. ಇಂಥಾದ್ದರಲ್ಲಿ ಪರಸ್ಪರ ಮುಖಾಮುಖಿಯಾಗುವ ಹೀರೋ ಮತ್ತು ಹೀರೋಯಿನ್ ನಡುವೆ ವಿಚಿತ್ರ ಸಂಬಂಧವೊಂದು ಸೃಷ್ಟಿಯಾಗುತ್ತದೆ. ತನ್ನನ್ನು ಪ್ರೀತಿಸುವಾತನನ್ನು ಹೇಗಾದರೂ ಮಾಡಿ ದೂರ ಮಾಡುವುದು ಈಕೆಯ ತಂತ್ರವಾದರೆ, ಆಕೆ ಒಡ್ಡುವ ಷರತ್ತುಗಳನ್ನೆಲ್ಲ ಗೆದ್ದು ಆಕೆಯನ್ನು ಪಡೆಯಬೇಕೆಂಬ ಛಲ ಈತನದ್ದು!

ಬೆನ್ನಿಗೆ ಬಿದ್ದ ಹುಡುಗನನ್ನು ದೂರ ಮಾಡಲು ಆಕೆ ಮಾಡುವ ತಂತ್ರಗಳೆಲ್ಲವನ್ನೂ ಹೀರೋ ತನ್ನ ಧೈರ್ಯ ಸಾಹಸಗಳಿಂದಲೇ ಒಂದೊಂದಾಗಿ ಗೆಲ್ಲುತ್ತಾನೆ. ಮನಮೆಚ್ಚಿದ ಹುಡುಗಿಯನ್ನು ಗೆಲ್ಲುವ ವಿಷಯದಲ್ಲಿ ಹೀರೋ ನಿಜಕ್ಕೂ ಬಹದ್ದೂರ್. ಅಂತಿಮವಾಗಿ ಹೀರೋಯಿನ್ ಅಸಹಾಯಕಳಾಗಿ ತಾನು ತಂದೆಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲೇಬೇಕಾದ ಸಂಕಷ್ಟ ಹೇಳಿಕೊಳ್ಳುತ್ತಾಳೆ. ತಂದೆಯ ಕಾಳಜಿ, ಮಗಳ ನಿಷ್ಠೆ ಎಲ್ಲವನ್ನೂ ಮಾನವೀಯವಾಗೇ ಲೆಕ್ಕ ಹಾಕುವ ಹೀರೋ ಅಲ್ಲಿಗೆ ಪರಿಸ್ಥಿತಿಯನ್ನು ಅರಿತು ವಿಷಾದದಿಂದಲೇ ಆಕೆಗೆ ವಿದಾಯ ಹೇಳಿ ಇನ್ನೇನು ಹೊರಡಬೇಕು. ಅಷ್ಟರೊಳಗೆ ಈ ಸಂಗತಿ ಹೀರೋಯಿನ್ ತಂದೆಗೆ ಗೊತ್ತಾಗಿ ತನ್ನ ಮಗಳಿಗಾಗಿ ಇಷ್ಟೆಲ್ಲಾ ಹೆಣಗಾಡಿದ ಹೀರೋನೇ ತನ್ನ ಮಗಳ ಪಾಲಿಗೆ ಸೂಕ್ತ ಗಂಡೆಂದು ಆಶೀರ್ವದಿಸುತ್ತಾನೆ. ಅಲ್ಲಿಗಿದು ಸುಖಾಂತ್ಯದ ಕತೆಯಾಗುತ್ತದೆ.

ಹಿಂದಿಯಲ್ಲಿ ಶಾರುಕ್-ಕಾಜೋಲ್ ನಟಿಸಿ ಅಭೂತಪೂರ್ವ ಯಶಸ್ಸು ಕಂಡಿದ್ದ 'ದಿಲ್‌ವಾಲೆ ದುಲ್ಹನಿಯಾ ಲೇಜಾಯೆಂಗೆ' (ಡಿಡಿಎಲ್‌ಜೆ), ವರ್ಷದ ಹಿಂದಷ್ಟೇ ಕನ್ನಡದಲ್ಲಿ ಯಶ್-ದೀಪಾ ಸನ್ನಿಧಿ ನಟಿಸಿದ್ದ 'ಜಾನು' ಮುಂತಾದ ಚಿತ್ರಗಳದ್ದೇ ಕತೆಗೆ ಹೋಲುವ ಕತೆಯಿದು. ಆದರೆ ವೈಶಿಷ್ಟ್ಯವಿರುವುದು ನಿರೂಪಣೆ ಮತ್ತು ಮೇಕಿಂಗ್‌ನಲ್ಲಿ. ನಿರ್ದೇಶಕ ಚೇತನ್‌ಕುಮಾರ್ ತಮ್ಮ ಪ್ರಥಮ ಯತ್ನದಲ್ಲೇ ಭವಿಷ್ಯದಲ್ಲಿ ತಾನೊಬ್ಬ ಸ್ಟಾರ್ ಡೈರೆಕ್ಟರಾಗುವ ಸೂಚನೆ ನೀಡುತ್ತಾರೆ. ತೀರ ಕ್ಲಿಷ್ಟವೆನಿಸದ ಕತೆಗೆ ಅಸಾಧ್ಯ ದೃಶ್ಯ ವೈಭವವನ್ನು ಕಟ್ಟಿಕೊಟ್ಟಿರುವುದು ಕ್ಯಾಮರಾಮನ್ ಶ್ರೀಷ ಕೂಡುವಳ್ಳಿ. ಇದಲ್ಲದೆ ಹರಿಕೃಷ್ಣರ ಸಂಗೀತ ಮತ್ತು ಹರ್ಷರ ಕೋರಿಯೋಗ್ರಫಿಯಿಂದಾಗಿ ಚಿತ್ರದ ಶ್ರೀಮಂತಿಕೆ ಹೆಚ್ಚಿದೆ. ಕನ್ನಡದ ಮಟ್ಟಿಗೆ ಶ್ರೇಷ್ಠ ಸ್ಟಂಟ್ ಸಂಯೋಜಕ ರವಿವರ್ಮರ ಖ್ಯಾತಿ ಬಾಲಿವುಡ್‌ನ ಸಲ್ಮಾನ್‌ಖಾನ್ ತನಕ ವ್ಯಾಪಿಸಿದೆ. ಅವರ ಕೈಚಳಕದ ಫಲವಾಗಿಯೇ ಧ್ರುವ ಫೈಟಿಂಗ್‌ನಲ್ಲಿ ಮಿಂಚಿದ್ದಾರೆ



ಇಷ್ಟೆಲ್ಲಕ್ಕೂ ಮಿಗಿಲಾಗಿ 'ಬಹದ್ದೂರ್'ನ ವೈಶಿಷ್ಟ್ಯವಿರುವುದು ಪವರ್‌ಸ್ಟಾರ್ ಪುನೀತ್‌ರ ಹಿನ್ನೆಲೆ ಧ್ವನಿಯಿಂದಾಗಿ. ಪುನೀತ್ ಧ್ವನಿ ಕೊಟ್ಟ ಕಾರಣಕ್ಕಾಗಿಯೇ ಬಾಲಿವುಡ್ ಚಿತ್ರಗಳ ಮಟ್ಟಕ್ಕೆ 7.1 ಟ್ರ್ಯಾಕ್‌ಸೌಂಡ್ ಅನ್ನು ಅಳವಡಿಸಿದ ಮೊಟ್ಟಮೊದಲ ಕನ್ನಡ ಚಿತ್ರ ಎಂಬ ಹೆಗ್ಗಳಿಕೆಗೆ 'ಬಹದ್ದೂರ್' ಸೇರ್ಪಡೆಯಾಗಿತ್ತು. ಸೆಪ್ಟೆಂಬರ್ 28ರಂದು ಬಿಡುಗಡೆಯಾದ ಆಡಿಯೋಗಳು ಕೇವಲ ಹದಿನೈದೇ ದಿನಕ್ಕೆ ಪ್ಲಾಟಿನಂ ಡಿಸ್ಕ್ ಅಂದರೆ 1 ಲಕ್ಷಕ್ಕೂ ಮೀರಿದ ಧ್ವನಿಮುದ್ರಿಕೆಗಳು ಮಾರಾಟವಾಗಿದ್ದವು. ಕನ್ನಡದ ಬೇರೆಲ್ಲ ಸ್ಟಾರ್‌ಗಳು ತಮ್ಮ ಹತ್ತೋ ಇಪ್ಪತ್ತೋ ಚಿತ್ರಕ್ಕೆ ಸಾಧಿಸಿದ್ದ ಸ್ಟಾರ್‌ವಾಲ್ಯೂ ಅನ್ನು ಧ್ರುವ ತನ್ನ ಎರಡನೇ ಚಿತ್ರಕ್ಕೆ ಸಾಧಿಸಿದ್ದರ ಹಿಂದೆ ಇಂಥ ಅನೇಕ ಕಾರಣಗಳಿದ್ದವು.

ಸದ್ಯ ಧ್ರುವ ಗಾಂಧಿನಗರದ ಹೊಸ ಧೂಮಕೇತು. ಪುನೀತ್, ದರ್ಶನ್, ಸುದೀಪ್, ಶಿವಣ್ಣ, ಯಶ್‌ರಂಥ ಘಟಾನುಘಟಿಗಳಿರುವ ಹತ್ತು ಕೋಟಿಯ ಕ್ಲಬ್ಬಿಗೆ ತನ್ನ ಎರಡನೇ ಚಿತ್ರದಿಂದಲೇ ಪ್ರವೇಶ ಗಿಟ್ಟಿಸಿದ್ದಾನೆಂದರೆ ಆತನ ಮುಂದಿನ ಚಿತ್ರ ಇನ್ನೆಂಥದ್ದಿರಬೇಡ!


ಆಕ್ಷನ್ನಿಗಾತ ಪುನೀತ್ ತಮ್ಮನಾದರೆ ರೋಮ್ಯಾಂಟಿಕ್‌ಗೆ ಯಾರಿಗಾದರೂ ಅಣ್ಣನೆ. ಹಾಲಿ ಚಾಲ್ತಿಯಲ್ಲಿರುವ ಸ್ಟಾರ್‌ಗಳಿಗೆ ನಡುಕ ಹುಟ್ಟದಿದ್ದರೂ ನಿದ್ದೆಯನ್ನಂತೂ ಕೆಡಿಸಿದ್ದಾನೆ.

● ರಾ. ಸೋಮನಾಥ್

'ನನ್ನ ಜೀವನ ಸಂಗಾತಿ ಯಾರು ಎಂಬುದು ನಾನು ಯಾರೆಂಬುದನ್ನು ನಿರ್ಧರಿಸುವುದಿಲ್ಲ'

ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ತಡೆಯುವ ನೆಪದಲ್ಲಿ ಇತ್ತೀಚೆಗೆ ಬಿಜೆಪಿಯ ವಿದ್ಯಾರ್ಥಿ ಅಂಗವಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಅವಿವಾಹಿತರು ಜೊತೆಯಾಗಿ ವಾಸಿಸುವುದರ ವಿರುದ್ಧ ಒಂದು ಆಂದೋಲನವನ್ನು ಪ್ರಾರಂಭಿಸಿತು. "ಅವಿವಾಹಿತರು ಜೊತೆಯಾಗಿ ವಾಸಿಸುವುದು ಭಾರತೀಯ ಸಂಸ್ಕೃತಿಯ ಉಲ್ಲಂಘನೆ. ಇಂತಹ ಸಂಬಂಧಗಳು ಹೆಚ್ಚು ಕಾಲ ಉಳಿಯುವುದಿಲ್ಲ, ಆದ್ದರಿಂದ ಇಂತಹ ಸಂಬಂಧಗಳ ವಿರುದ್ಧ ಯುವತಿಯರನ್ನು ಎಚ್ಚರಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ" ಎಂದು ಎಬಿವಿಪಿಯ ರಾಷ್ಟ್ರೀಯ ಕಾರ್ಯದರ್ಶಿಯಾದ ರೋಹಿತ್ ಚಹಾಲ್ ಎಂಬುವವನು ಹೇಳಿದ್ದ.

ಅವನ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯಾದ ಅರ್ಪಣಾ ಮಹಿಯಾರಿಯಾ ಎಂಬಾಕೆ ಬರೆದಿರುವ ಪತ್ರ ಹೀಗಿದೆ:



"ಶ್ರೀ ಚಹಾಲ್ ಅವರಿಗೆ,

ನನಗೊಬ್ಬ ಗೆಳೆಯನಿದ್ದಾನೆ. ನಾವಿಬ್ಬರೂ ಜೊತೆಯಾಗಿ ವಾಸಿಸುತ್ತಿದ್ದೇವೆ. ಮನೆ ಕೆಲಸವನ್ನು ಬಲ್ಲ ಆತ ಆ ಜವಾಬ್ದಾರಿಯನ್ನು ನನ್ನೊಂದಿಗೆ ಸಮಾನವಾಗಿ ಹಂಚಿಕೊಳ್ಳುತ್ತಾನೆ. ಅಷ್ಟೇ ಅಲ್ಲ, ಯಾವುದೇ ಸಮಸ್ಯೆ ಅಥವಾ ತೊಂದರೆ ಎದುರಾದಾಗ ನಾವಿಬ್ಬರೂ ಪರಸ್ಪರರಿಗೆ ಮಾನಸಿಕ ಬೆಂಬಲವನ್ನು ನೀಡುತ್ತೇವೆ. ರಾತ್ರಿ ಎಷ್ಟೇ ಹೊತ್ತಾದರೂ ಆತನಿರುವ ಮನೆಗೆ ವಾಪಸ್ ಬರುವುದೇ ಒಂದು ಸಂತೋಷದ ಸಂಗತಿಯಾಗಿದೆ.

ನಿಮ್ಮ ಆರೆಸ್ಸೆಸ್ ಸಂಘಟನೆಯ ಸಕ್ರಿಯ ಕಾರ್ಯಕರ್ತರ ಕುಟುಂಬದಿಂದ ಬಂದವಳು ನಾನು. ನಾನು ಬಿಎ ಮುಗಿಸುತ್ತಿದ್ದಂತೆ ನನ್ನನ್ನು ಹೆತ್ತವರು ತಮಗೆ ಇಷ್ಟವಾದ (ಧರ್ಮ ಮತ್ತು ಜಾತಿ ಆಧಾರದ ಮೇಲೆ ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ ಎನಿಸುತ್ತದೆ) ಹುಡುಗನನ್ನು ನಾನು ಮದುವೆ ಆಗಬೇಕೆಂದು ಒತ್ತಾಯಿಸಲಾರಂಭಿಸಿದರು. ನಾನು ಇನ್ನಷ್ಟು ಓದಬೇಕೆಂದು ಎಷ್ಟೇ ಹೇಳಿದರೂ ಮದುವೆಯ 'ಅಗತ್ಯ'ದ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪಿಸುತ್ತಾ ನಾನು ನೆಮ್ಮದಿಯಿಂದ ಓದುವುದಕ್ಕೂ ತೊಡಕಾಗುತ್ತಿದ್ದರು.

ಮಹಿಳೆಯರಿಗೆ ಹೆಚ್ಚಿನ ಗೌರವವನ್ನು ಕೊಡಬೇಕೆಂದು ನೀವು ಹೇಳಿರುವ ಪತ್ರಿಕಾ ವರದಿಯನ್ನು ಈಗಷ್ಟೇ ನೋಡಿದೆ. ಮಹಿಳೆಯರಿಗೆ ಗೌರವ ಕೊಡುವುದೆಂದರೆ ಯಾರು ಅವರಿಗೆ ಸೂಕ್ತ ಜೀವನ ಸಂಗಾತಿ ಎಂದು ಇತರರು ನಿರ್ಧರಿಸುವುದಲ್ಲ, ಬದಲಾಗಿ ಮಹಿಳೆಯರಿಗೆ ಗೌರವ ಕೊಡುವುದೆಂದರೆ ಅವರ ಆಯ್ಕೆಯನ್ನು - ಅವರು 'ಬೇಡ' ಎಂದಾಗಲೂ ಕೂಡ- ಗೌರವಿಸುವುದು. ಮಾನವರಾಗಿರುವ ಮಹಿಳೆಯರೂ ಶಕ್ತರು, ವಿವೇಚನಾಶೀಲರು ಎಂಬುದನ್ನು ಅರ್ಥಮಾಡಿಕೊಂಡು ತಮ್ಮ ಬದುಕಿನ ಬಗ್ಗೆ ಆಯ್ಕೆ ಮಾಡಿಕೊಳ್ಳುವ ಶಕ್ತಿ ಉಳ್ಳವರು ಎಂಬುದನ್ನು ತಮ್ಮಂತಹವರು ಮೊದಲು ಅರ್ಥಮಾಡಿಕೊಳ್ಳಬೇಕು.

ನನ್ನ ಗೆಳೆಯನೊಂದಿಗಿನ ನನ್ನ ಸಂಬಂಧ ಯಶಸ್ವಿಯಾಗದಿದ್ದರೂ ಅದು ನನ್ನ ಜೀವನದ ಅಂತ್ಯವೇನಲ್ಲ (ನಿಮ್ಮ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಂತಹ ಅಭಿಪ್ರಾಯವಿರಬಹುದು). ಯಾಕೆಂದರೆ ನನ್ನ ಜೀವನ ಸಂಗಾತಿ ಯಾರು ಎಂಬುದೇ ನಾನು ಯಾರೆಂಬುದನ್ನು ನಿರ್ಧರಿಸುವುದಿಲ್ಲವಾದ್ದರಿಂದ ಅದು ಅಷ್ಟು ಮುಖ್ಯವೇ ಅಲ್ಲ. ಈ ಸಂಬಂಧವನ್ನು ಅಂತ್ಯಗೊಳಿಸುವುದು ನನ್ನ ಆಯ್ಕೆಯೇ ಆಗಲೂಬಹುದು. ಈ ಸಂಬಂಧ ಯಶಸ್ವಿಯಾಗುತ್ತದೋ ಅಥವಾ ವಿಫಲವಾಗುತ್ತದೋ, ಅದೇನೇ ಆದರೂ ಅದನ್ನು ಎದುರಿಸಬೇಕಾದವಳು ನಾನೇ ಹೊರತು, ಅದಕ್ಕೂ ನಿಮಗೂ ಸಂಬಂಧವಿಲ್ಲ. ಜೊತೆಯಾಗಿ ಜೀವಿಸುವುದು ಸುಂದರವಾಗಿದೆ, ಪ್ರೀತಿಸುವುದೂ ಸೊಗಸಾಗಿದೆ.

ಅಂದಹಾಗೆ, ನನ್ನ ಜೊತೆಗಾರ ಓರ್ವ ಮುಸ್ಲಿಮ್. ಆದರೆ ನಾವಿಬ್ಬರೂ ನಾಸ್ತಿಕರಾಗಿದ್ದು ನಮ್ಮ ಸಂಬಂಧ ನಾವು ಯಾವ ಧರ್ಮದವರು, ಯಾವ ಜಾತಿಯವರು ಎಂಬುದರಿಂದ ಸ್ವತಂತ್ರವಾಗಿದೆ. ಇಂತಹ ಕಲ್ಪನೆಯೇ ನಿಮಗೆ ಅರ್ಥವಾಗುವುದಿಲ್ಲ, ಅಲ್ಲವೇ?

ಪಿ.ಎಸ್: ಒಮ್ಮೊಮ್ಮೆ ನಾವಿಬ್ಬರೂ ಒಂದು ಡ್ರಿಂಕ್ ಫಿಕ್ಸ್ ಮಾಡಿಕೊಂಡು, ನಮ್ಮ ಬಾಲ್ಕನಿಯಲ್ಲಿ ಕೂತು ಗಂಟೆಗಟ್ಟಲೆ ಚರ್ಚಿಸುತ್ತೇವೆ. ಇವೆಲ್ಲದರ ಮಧ್ಯೆಯೂ ನೀವು ಮತ್ತು ನಿಮ್ಮಂಥವರ (ಅದರಲ್ಲಿ ನನ್ನನ್ನು ಹೆತ್ತವರೂ ಸೇರಿದ್ದಾರೆ) ವಿರುದ್ಧದ ನಮ್ಮ ಹೋರಾಟ ಸಾಗುತ್ತಿರುತ್ತದೆ.

ಸಾಹಿಲ್ ಖುರೇಶಿ ಎಂಬುವವನ ಪ್ರೀತಿಯಲ್ಲಿ ಮುಳುಗಿರುವ

ಅರ್ಪಣಾ ಮಹಿಯಾರಿಯ

ಬಂದೂಕಿನ ಬಾಯಲ್ಲಿ ಗುಬ್ಬಿಗೂಡು

1

ನಾನು ಬೀದರದಲ್ಲಿದ್ದಾಗ, ನನ್ನ ಕೋಣೆಯ ಕಿಟಕಿಯ ಮೇಲೆ ಕಪ್ಪುಬಣ್ಣದ ಪುಟ್ಟ ಹಕ್ಕಿಯೊಂದು ಅಂಗೈ ಅಗಲ ಗೂಡು ಕಟ್ಟಿತ್ತು, ಮೊಟ್ಟೆಗಳಿಂದ ಹೊರ ಬಂದಿದ್ದ ಎರಡು ಮರಿಗಳು ತಾಯಿಹಕ್ಕಿಯ ಬರವನ್ನೇ ಕಾಯುತ್ತ ಕುಳಿತಿರುತ್ತಿದ್ದವು. ಅವುಗಳನ್ನು ಮೊದಲ ಬಾರಿಗೆ ನೋಡಿದಾಗ, ನದಿ ಮಧ್ಯದಲ್ಲಿ ಇಬ್ಬರು ವ್ಯಕ್ತಿಗಳು ಹರಿಗೋಲಲ್ಲಿ ಕುಳಿತಂತೆ ಕಂಡಿತು. ಅವೆರಡೂ ಮರಿಗಳು ತಾಯಿಯ ಆಜ್ಞಾಪಾಲಕರಂತೆ ಆ ಹರಿಗೋಲಿನಂಥ ಚಿಕ್ಕ ಗೂಡಿನಲ್ಲೇ ಇರುತ್ತಿದ್ದವು. ಆ ಹಕ್ಕಿ ಪದೆ ಪದೆ ಬಂದು ಅವುಗಳಿಗೆ ಗುಟುಕು ಹಾಕಿ ಹೋಗುತ್ತಿತ್ತು, ದಿನಗಳು ಕಳೆದ ಮೇಲೆ ಮರಿಗಳು ಸಾಕಷ್ಟು ಬೆಳೆದಿವೆ ಎಂದು ಅನಿಸುತ್ತಿತ್ತು, ಆದರೂ ಅವು ಗೂಡು ಬಿಟ್ಟು ಹೊರಗೆ ಬರುತ್ತಿರಲಿಲ್ಲ.

ಒಂದು ದಿನ ಹಕ್ಕಿಯ ಮತ್ತು ಆ ಹಕ್ಕಿಮರಿಗಳ ಸದ್ದೇ ಇಲ್ಲದ ವೇಳೆ, ಆ ಗೂಡಿನಲ್ಲಿ ಏನೂ ಇಲ್ಲ ಎಂದು ಅನಿಸಿತು. ಕಿಟಕಿಯನ್ನು ಹತ್ತಿ ಗೂಡಿನೊಳಗೆ ಮೂಗು ತೂರಿಸಿದೆ. ಮಲಗಿದ್ದ ಮರಿಗಳು ಪಟ್ಟನೆ ಎದ್ದವು. ತಕ್ಷಣವೇ ಕೆಳಗೆ ಇಳಿದೆ.

ಸ್ವಲ್ಪ ಹೊತ್ತಿನಲ್ಲೇ ತಾಯಿ ಹಕ್ಕಿ ಬಂದು ಎರಡೂ ಮರಿಗಳಿಗೆ ಗುಟುಕು ಹಾಕಿತು. ಮರಿಗಳು ತಾಯಿಗೆ ಏನೋ ಹೇಳಿದಂತಾಯಿತು ಎಂದು ಭಾವಿಸುವುದರೊಳಗೇ ಆ ಹಕ್ಕಿ ನಾನು ನಿಂತಲ್ಲಿಗೆ ಬಂದು ನನ್ನ ಎದರಿಗೇ ಹಾರಾಡಿ ಅದೇನೋ ಸಿಡುಕು ಸಿಡುಕಾಗಿ ಧ್ವನಿ ತೆಗೆದುಹೋಯಿತು. ನನಗೆ ಆಶ್ಚರ್ಯ ಎನಿಸಿತು. ಆ ಮರಿಗಳಿಗೆ ನನ್ನಿಂದ ತೊಂದರೆಯಾಯಿತೆಂಬುದರ ಅರಿವಾಯಿತು. ಅಂತೆಯೆ ಆ ತಾಯಿ ಹಕ್ಕಿ ಬಂದು ತನ್ನ ಸಂಕಟ ವ್ಯಕ್ತಪಡಿಸಿತು. ಸ್ವಲ್ಪ ಹೊತ್ತು ಬೇಸರದಿಂದ ಹಾಗೇ ನಿಂತೆ. ಅರಿಯದೇ ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಟ್ಟೆ.

ಆ ಹಕ್ಕಿ ಮತ್ತೆ ಬಂದಿತು. ಗೂಡಿನ ಹೊರಗೆ ನಿಂತು ಅದೇನೋ ಹೇಳಿತು. ಒಂದು ಮರಿ ಹೊರಗೆ ಬಂದಿತು. ಏನೇನೋ ಹೇಳಿತು. ಅದು ರೆಕ್ಕೆ ಬಿಚ್ಚಿ ಕಸರತ್ತು ಮಾಡಿತು. ತಾಯಿಯ ಜೊತೆ ಮೊದಲ ಬಾರಿಗೆ ಹಾರಿಹೋಯಿತು. ಆ ತಾಯಿ ಸ್ವಲ್ಪ ಹೊತ್ತಿನ ಮೇಲೆ ಮತ್ತೆ ಬಂದಿತು. ಅದೇ ರೀತಿಯಲ್ಲಿ ಎರಡನೇ ಮರಿಯನ್ನು ಕರೆದುಕೊಂಡು ಹೋಯಿತು. ಮರಿಗಳಿಗೆ ಹಾರಾಟ ಕಲಿಸುತ್ತಿದ್ದು ಹೊತ್ತು ಮುಳುಗುವ ಹೊತ್ತಿಗೆ ವಾಪಸ್ ಬರಬಹುದೆಂದು ಭಾವಿಸಿದೆ. ಆದರೆ ಅವು ಬರಲಿಲ್ಲ, ಬರಲೇ ಇಲ್ಲ!

2

ನಾನು ಕಾರವಾರದಲ್ಲಿ ವರದಿಗಾರನಾಗಿದ್ದಾಗ ನಡೆದ ಘಟನೆ: ಭಟ್ಕಳ ಗಲಭೆಯ ಸಂದರ್ಭದಲ್ಲಿ ಪತ್ರಕರ್ತ ಮಿತ್ರರೆಲ್ಲ ಭಟ್ಕಳಕ್ಕೆ ಭೇಟಿ ನೀಡಿ ಬಸ್ಸಲ್ಲಿ ವಾಪಸ್ ಬರುತ್ತಿದ್ದೆವು. ಅಪರಾಹ್ನದ ವೇಳೆ. ಬಸ್ಸಿನಲ್ಲಿ ಒಬ್ಬಾತನನ್ನು ಬಿಟ್ಟು ಎಲ್ಲರೂ ಕುಳಿತಿದ್ದರು. ಹಿಂದೆ ಒಂದು ಸೀಟು ಖಾಲಿ ಇದ್ದರೂ ಆತ ಕುಳಿತಿರಲಿಲ್ಲ, ಇಡೀ ಬಸ್ಸಿನಲ್ಲಿ ಪ್ರಶಾಂತ ವಾತಾವರಣವಿತ್ತು, ಆಹ್ಲಾದಕರ ಗಾಳಿ ಬೀಸುತ್ತಿತ್ತು, ಬಸ್ಸು ಒಂದೇ ಲಯದಲ್ಲಿ ಹೊರಟಿತ್ತು, ಆ ಬಸ್ಸಿನಲ್ಲಿ ಕೆಲ ಮುಸ್ಲಿಂ ದಂಪತಿಗಳಿದ್ದರು. ಎಲ್ಲರೂ ಮೌನವಾಗಿ ಪ್ರಯಾಣದ ಸುಖವನ್ನು ಅನುಭವಿಸುತ್ತಿದ್ದರು. ಆದರೆ ಆ ನಿಂತ ವ್ಯಕ್ತಿ ಮುಸ್ಲಿಮರ ವಿರುದ್ಧ ಕಿಡಿ ಕಾರತೊಡಗಿದ. ಆದರೆ ಅವನ ಕಡೆ ಯಾರೂ ನೋಡಲಿಲ್ಲ, ಆತ ಪ್ರತಿಯೊಬ್ಬರಿಗೂ ಕೇಳಿಸುವಂತೆ ಮುಸ್ಲಿಮರನ್ನು ಜೋರುಜೋರಾಗಿ ದ್ವೇಷಿಸತೊಡಗಿದ. ಅವನಿಗೆ ಯಾರೂ ಬೆಂಬಲಿಸಲಿಲ್ಲ, ಉಪದೇಶವನ್ನೂ ಮಾಡಲಿಲ್ಲ, ಬಸ್ಸಿನಲ್ಲಿ ಅವನ ಅಸ್ತಿತ್ವವೇ ಇಲ್ಲದಂತೆ ಎಲ್ಲರೂ ಕುಳಿತಿದ್ದರು. ನನ್ನ ಪಕ್ಕದಲ್ಲಿ ಕುಳಿತಿದ್ದ ಗಂಗಾಧರ ಹಿರೇಗುತ್ತಿಗೆ ಮೈಯೆಲ್ಲ ಕುದಿಯುತ್ತಿತ್ತು, ಇಂಥ ವಿಚಾರಗಳಲ್ಲಿ ಆತ ಬಹಳ ಭಾವುಕ. ಇಂಥ ಸನ್ನಿವೇಶಗಳನ್ನು ಆತ ತಡೆದುಕೊಳ್ಳುವವನಲ್ಲ, ಪ್ರತಿಭಟನೆ ಆತನ ಗುಣ. ಆದರೆ ನನಗೆ ತಮ್ಮನಾಗಿದ್ದರಿಂದ ಒಳಒಳಗೆ ಬೇಸರಪಟ್ಟುಕೊಂಡರೂ ನನ್ನ ಮಾತನ್ನು ಮೀರುತ್ತಿರಲಿಲ್ಲ, ಎರಡು ಮೂರು ಬಾರಿ 'ನನಗೆ ತಡೆಯಲಿಕ್ಕಾಗುತ್ತಿಲ್ಲ; ಆತನಿಗೆ ಬುದ್ಧಿ ಕಲಿಸುತ್ತೇನೆ' ಎಂದು ಗಂಗಾಧರ ಏಳುವ ಪ್ರಯತ್ನ ಮಾಡಿದ. ನಾನು ಪ್ರತಿಬಾರಿಯೂ 'ಸುಮ್ಮನಿರು, ಜನ ಎಷ್ಟೊಂದು ಪ್ರಜ್ಞಾವಂತರಿದ್ದಾರೆ ನೋಡು' ಎಂದು ಹೇಳುತ್ತಿದ್ದೆ, ಅದು ನನಗೆ ಸಂತೋಷದ ಕ್ಷಣವಾಗಿತ್ತು, ಆ ವ್ಯಕ್ತಿ ಅಂಕೋಲಾ ಬರುವ ಮೊದಲೇ ತನ್ನ ಒಂಟಿತನಕ್ಕೆ ಬೇಸರಪಟ್ಟುಕೊಂಡು ಸುಸ್ತಾಗಿ ಮೌನವಾದ. ಕಾರವಾರ ಬರುವವರೆಗೆ ಸುಮ್ಮನಿದ್ದು ಬಸ್ಸು ನಿಂತೊಡನೆ ಸರಸರನೆ ಇಳಿದುಹೋದ. ಜನರೆಲ್ಲ ಮೌನವಾಗೇ ಇದ್ದರು. ಮೌನವಾಗೇ ಇಳಿದುಹೋದರು. ನಮ್ಮ ಜನರಿಗೆ ರಾಜಕಾರಣಿಗಳು, ಧರ್ಮಕಾರಣಿಗಳು ಹೊಸ ಹೊಸ ಪಾಠಗಳನ್ನು ಕಲಿಸುತ್ತಲೇ ಹೋಗುತ್ತಾರೆ. ಅವರಿಂದ ಏನನ್ನೂ ಕಲಿಯುವುದಿಲ್ಲ.

3

ಎರಡು ದಶಕಗಳ ಹಿಂದೆ ನಡೆದ ಭಟ್ಕಳ ಗಲಭೆಯ ಸಂದರ್ಭದಲ್ಲಿ 20 ಮಂದಿ ಬಡ ಮುಸ್ಲಿಮರು ಮತ್ತು 20 ಮಂದಿ ಬಡ ಮೀನುಗಾರ, ನಾಮಧಾರಿ ಮುಂತಾದ ಹಿಂದುಳಿದ ಜನಾಂಗದವರು ಜೀವ ಕಳೆದುಕೊಂಡರು. ನೂರಾರು ಜನ ಗಾಯಾಳುಗಳಾದರು. ಕೋಟ್ಯಂತರ ರೂಪಾಯಿಗಳ ಆಸ್ತಿಪಾಸ್ತಿ ಹಾಳಾಯಿತು. ದಂಗೆಯ ದಿನಗಳಲ್ಲಿ ಒಂದು ರಾತ್ರಿ ಹಿಂದುಳಿದ ಜನಾಂಗದ ಬಡವನೊಬ್ಬನಿಗೆ ದುಷ್ಕರ್ಮಿಗಳು ಚಾಕು ಹಾಕಿದ್ದರು. ಆ ಗಾಯಾಳುವನ್ನು ಮಣಿಪಾಲ ಆಸ್ಪತ್ರೆಗೆ ಸೇರಿಸಬೇಕಾಗಿತ್ತು, ಕಾರಲ್ಲಿ ಹೊರಟಿದ್ದ ಒಬ್ಬ ಮುಸ್ಲಿಂ ಕೂಡಲೇ ಕಾರಿಂದ ಇಳಿದು ಆತನನ್ನು ಮಣಿಪಾಲ ಆಸ್ಪತ್ರೆಗೆ ಸೇರಿಸಲು ಮುಂದಾದ. ನೆರೆದವರು ಚಿಂತಾಜನಕ ಸ್ಥಿತಿಯಲ್ಲಿದ್ದ ಆ ವ್ಯಕ್ತಿಯನ್ನು ಕಾರಲ್ಲಿ ಹಾಕಿದರು. ಆದರೆ ಆತನ ಜೊತೆ ಯಾರೂ ಮಣಿಪಾಲ್‌ಗೆ ಹೋಗಲು ಸಿದ್ಧರಾಗಲಿಲ್ಲ, 'ಯಾರದರೂ ಹಿಂದೂಗಳು ಜೊತೆಗೆ ಬನ್ನಿರಿ. ರಸ್ತೆಯಲ್ಲಿ ಯಾರಾದರೂ ತಡೆದು, ನಾನೇ ಚಾಕು ಹಾಕಿ ಕಾರಲ್ಲಿ ಒಯ್ಯುತ್ತಿದ್ದೇನೆ ಎಂದು ಭಾವಿಸಿದರೆ ಏನು ಹೇಳಲಿ' ಎಂದು ಸಹಾಯಕ್ಕೆ ಬಂದಾತ ಅಂಗಲಾಚಿದ. ಯಾರೂ ಕಿವಿಗೊಡಲಿಲ್ಲ, ಗಾಯಾಳುವಿನ ಸಾವುಬದುಕಿನ ಪ್ರಶ್ನೆ ಆ ಕಾರಿನವನ ಮುಂದಿತ್ತು, ಆತ ಯಾರ ಸಹಾಯವಿಲ್ಲದೆ ಗಾಯಾಳುವನ್ನು ಒಯ್ಯಲೇಬೇಕಾಯಿತು.

4

ಭಟ್ಕಳ ಬಳಿಯ ಕಡಲತೀರದ ನಸ್ತಾರ್ ಗ್ರಾಮದಲ್ಲಿ ಗಲಭೆಯ ದಿನಗಳಲ್ಲಿ ಒಂದು ರಾತ್ರಿ ಮೀನುಗಾರ ಯುವಕರು ಬರೀ ಹೆಣ್ಣುಮಕ್ಕಳೇ ಇದ್ದ ಮುಸ್ಲಿಮರೊಬ್ಬರ ಮನೆಗೆ ಬೆಂಕಿ ಹಚ್ಚುತ್ತಿದ್ದರು. ಮನೆಯೊಡತಿ ಆ ಬೆಂಕಿಯ ಮೇಲೆ ಬಕೆಟ್‌ನಿಂದ ನೀರು ಎರಚುತ್ತಿದ್ದಳು. ಅವಳ ಸಹಾಯಕ್ಕೆ ಬರುವ ಧೈರ್ಯವನ್ನು ಅಕ್ಕಪಕ್ಕದ ಯಾವ ಹಿಂದೂ ಅಥವಾ ಮುಸ್ಲಿಮ ಪುರುಷರು ಮಾಡಲಿಲ್ಲ, ಆಕೆಯೊಬ್ಬಳೇ ಈ ದುರಂತವನ್ನು ಎದುರಿಸುತ್ತಿದ್ದಳು. ಬೆಂಕಿ ಆರಿಸುವ ಆಕೆಯ ಪ್ರಯತ್ನಕ್ಕೆ ಅಡ್ಡಿಯುಂಟುಮಾಡುವ ಉದ್ದೇಶದಿಂದ ಗುಂಪಿನಲ್ಲಿದ್ದ ಯುವಕನೊಬ್ಬ ಹೋಗಿ ಅವಳ ಕೈಹಿಡಿದ. ಆಗ ಅದೇ ಬೆಂಕಿಹಚ್ಚುವ ಗುಂಪಿನಲ್ಲಿದ್ದ ಇನ್ನೊಬ್ಬ ಮೀನುಗಾರ ಯುವಕ ಆವೇಶದಿಂದ ಎರಗಿ ಬಂದು ಆ ಕೈಹಿಡಿದವನ ಅಂಗಿ ಹಿಡಿದು ಹೊಡೆದುಬಿಟ್ಟ. ಕೈ ಹಿಡಿದ ಯುವಕನಿಗೆ ದಿಕ್ಕು ತೋಚದಂತಾಯಿತು. ಎಲ್ಲರೂ ಮೌನವಾದರು.



ಅಲ್ಲಿಂದ ಹೊರಟುಹೋದರು. ರಕ್ಷಣೆಗೆ ಬಂದ ಯುವಕ ಅಮ್ಮನ ಮಾನ ಕಾಯ್ದಿದ್ದ. ಆ ಹೆಣ್ಣುಮಗಳ ಪಕ್ಕದ ಮನೆಯವನಾದ ಆತ ಬಾಲ್ಯದ ದಿನಗಳಲ್ಲಿ ಆಕೆಯ ಉಡಿಯಲ್ಲೇ ಬೆಳೆದ ಕಾರಣ ಅವಳಿಗೆ ಅಮ್ಮ ಎಂದೇ ಕರೆಯುತ್ತಿದ್ದ!

5

ಒಂದು ದಿನ ಪತ್ರಕರ್ತರೆಲ್ಲ ಸೇರಿ ಕಾರವಾರದಿಂದ, ಗಲಭೆ ಪಿಡಿತ ಭಟ್ಕಳಕ್ಕೆ ಹೋಗುತ್ತಿದ್ದೆವು. ಭಟ್ಕಳದ ಹೊರವಲಯದಲ್ಲಿ ಚೀರೆಕಲ್ಲು ಕಡಿಯುತ್ತಿದ್ದ ಇಬ್ಬರು ಕೂಲಿಗಳನ್ನು ನೋಡಿದೆವು. ಈ ಗಲಭೆಯ ಬಗ್ಗೆ ಅವರ ಅನಿಸಿಕೆಯನ್ನು ತಿಳಿದುಕೊಳ್ಳಬೇಕೆನಿಸಿತು. ವಾಹನ ನಿಲ್ಲಿಸಿ ಅವರ ಬಳಿ ಹೊರಟೆ. ಇತರ ಗೆಳೆಯರೂ ಬಂದರು. ಆ ಇಬ್ಬರೂ ಕೂಲಿಕಾರರ ಮುಖ ಮತ್ತು ಮಾಸಿದ ಬಟ್ಟೆಗಳಿಗೆ ಚೀರೆಕಲ್ಲಿನ ಕೆಂಪುಹುಡಿ ಅಂಟಿಕೊಂಡಿತ್ತು, ಗಲಭೆ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದೆ. ಗಲಭೆ ಮಾಡುವವರಿಗೆ ಕೇಳಿರಿ ಎಂದು ಅವರಲ್ಲೊಬ್ಬ ಬೆವರು ಒರೆಸಿಕೊಳ್ಳುತ್ತ ಹೇಳಿದ. ಇನ್ನೊಬ್ಬ ನಮ್ಮ ಕೂಡ ಮಾತನಾಡತೊಡಗಿದ. 'ಈತ ಮುಸ್ಲಿಂ, ನಾನು ಹಿಂದೂ. ಇಬ್ಬರೂ ಕೂಡಿ ಕಷ್ಟಪಟ್ಟು ದುಡಿಯುತ್ತೇವೆ. ಆ ಕಡೆ ನೋಡಿರಿ. ನಮ್ಮ ಹೆಂಡಿರು ಮಾತನಾಡುತ್ತ ಬಟ್ಟೆ ಒಗೆಯು ತ್ತಿದ್ದಾರೆ. ಆ ಗಿಡದ ಕೆಳಗೆ ನೋಡಿರಿ. ನಮ್ಮ ಮಕ್ಕಳು ಖುಷಿಯಿಂದ ಆಟ ಆಡುತ್ತಿದ್ದಾರೆ. ನಮ್ಮ ಗುಡಿಸಲುಗಳನ್ನು ನೋಡಿರಿ. ಎರಡು ಹತ್ತಿಕೊಂಡೇ ಇವೆ. ಅಡುಗೆಗೆ ಎಣ್ಣೆ ಇಲ್ಲದಾಗ ಇವನ ಗುಡಿಸಲಿನಿಂದ ಎಣ್ಣೆ ತರುತ್ತೇವೆ. ಇವನ ಗುಡಿಸಲಿನಲ್ಲಿ ಉಪ್ಪು ಇಲ್ಲದಾಗ ನಮ್ಮ ಗುಡಿಸಲಿನಿಂದ ಹೋಗುತ್ತದೆ. ನಾವು ಕಷ್ಟಪಟ್ಟು ದುಡಿದು ಸುಖದುಃಖ ಹಂಚಿಕೊಳ್ಳುತ್ತ ಆರಾಮಾಗಿ ಇದ್ದೇವೆ. ಗಲಭೆ ಅನ್ನೋದು ಕೆಲಸ ಇಲ್ಲದವರ ಕೆಲಸ' ಎಂದು ಸುಮ್ಮಾನದ. ನಮಗೆ ಮಾತನಾಡಲಿಕ್ಕಾಗಲಿಲ್ಲ!

6

ನಾನು ಗುಲ್ಬರ್ಗಾದಲ್ಲಿ ಪತ್ರಕರ್ತನಾಗಿ ಇದ್ದಾಗ, ಮಹಾರಾಷ್ಟ್ರದ ಮುಸ್ಲಿಂ ಪತ್ರಕರ್ತರೊಬ್ಬರು ಭಾವೈಕ್ಯ ಪ್ರಚಾರಕ್ಕಾಗಿ ಸ್ಕೂಟರ್ ಮೇಲೆ ದೇಶ ಸಂಚಾರ ಮಾಡುತ್ತ ಗುಲ್ಬರ್ಗಕ್ಕೆ ಬಂದಿದ್ದರು. ಈ ದೀರ್ಘವಾದ ದೇಶ ಪರ್ಯಟನ ಸಂದರ್ಭದಲ್ಲಿನ ಮರೆಯಲಾಗದ ಘಟನೆ ಬಗ್ಗೆ ಹೇಳಿರಿ ಎಂದು ಕೇಳಿದೆ. ಅಂಥ ಘಟನೆಗಳು ಬಹಳಷ್ಟಿವೆ ಎಂದು ಹೇಳಿದ ಅವರು ಮಾನವ ಸೂಕ್ಷ್ಮತೆಯ ಪ್ರಸಂಗವೊಂದನ್ನು ತಿಳಿಸಿದರು. ಪಂಜಾಬ್ ಪ್ರವಾಸದಲ್ಲಿದ್ದಾಗ ಒಬ್ಬ ವ್ಯಕ್ತಿ ತಮ್ಮ ಮನೆಯಲ್ಲಿ ಒಂದು ರಾತ್ರಿ ಕಳೆಯಲು ಈ ಭಾವೈಕ್ಯದ ವ್ಯಕ್ತಿಗೆ ಮನವಿ ಮಾಡಿದರು. ಆ ಮನೆಯಲ್ಲಿ ರಾತ್ರಿ ಊಟದ ಸಮಯದಲ್ಲಿ ಈ ವ್ಯಕ್ತಿಯ ತಲೆಯಲ್ಲಿ ಯಕ್ಷಪ್ರಶ್ನೆಯೊಂದು ಹೊಕ್ಕಿತು. ಇಷ್ಟೊಂದು ದೊಡ್ಡ ಮನೆ. ಅತ್ಯಾಧುನಿಕ ಅಡುಗೆ ಮನೆಯೂ ಇದೆ. ಆದರೆ ಇವರೇಕೆ ಪಕ್ಕದ ಮನೆಯಿಂದ ಅಡುಗೆ ಮಾಡಿಕೊಂಡು ಬರುತ್ತಿದ್ದಾರೆ ಎಂಬುದು ಅವರಿಗೆ ವಿಚಿತ್ರ ಎನಿಸಿತು. ಅವರು ಆ ಮನೆಯೊಡೆಯನಿಗೆ ಕೇಳಿಯೇ ಬಿಟ್ಟರು. ಆಗ ಆತ ಹೇಳಿದರು: "ನಮ್ಮ ಮನೆಯಲ್ಲಿ ಎಲ್ಲವೂ ಇದೆ. ಆದರೆ ನಮ್ಮ ಪಾತ್ರೆಗಳಲ್ಲಿ ಒಮ್ಮೊಮ್ಮೆ ಹಂದಿಯ ಮಾಂಸವನ್ನೂ ಬೇಯಿಸುತ್ತೇವೆ. ತಾವು ಮುಸ್ಲಿಂ ಧರ್ಮದವರಾಗಿರುವುದರಿಂದ, ಹಾಗೆ ಬಳಕೆಯಾದ ಪಾತ್ರೆಯಲ್ಲಿ ಅಡುಗೆ ಮಾಡಿ ತಮಗೆ ಉಣಬಡಿಸುವುದು ಸರಿಯಲ್ಲ ಎಂಬ ಕಾರಣಕ್ಕೆ ಹೀಗೆ ಮಾಡಬೇಕಾಯಿತು."

7

1949ನೇ ಡಿಸೆಂಬರ್ 22/23ರ ಮಧ್ಯರಾತ್ರಿ. ರಾಮಸೀತೆಯರ ಮೂರ್ತಿಗಳನ್ನು ಬಾಬರಿ ಮಸೀದಿಯಲ್ಲಿ ಇಡಲಾಯಿತು. ಅಂದಿನ ಫೈಜಾಬಾದ ಜಿಲ್ಲೆಯ ಕಲೆಕ್ಟರ್ ಕೆ.ಕೆ.ನಯ್ಯರ್ ಈ ಕೃತ್ಯದ ಹಿಂದೆ ಇದ್ದ. ಮೂರ್ತಿಗಳನ್ನು ತೆಗೆಯಬೇಕೆಂದು ಅಂದಿನ ಪ್ರಧಾನಿ ನೆಹರೂ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಗೋವಿಂದ ವಲಭ ಪಂತ ಅವರು ಆದೇಶಿಸಿದರು. ನಯ್ಯರ್ 'ಬಹುಸಂಖ್ಯಾತ ಹಿಂದೂಗಳನ್ನು ಎದುರಿಸಲಿಕ್ಕಾಗದು' ಎಂದು ಕುಂಟುನೆಪ ಹೇಳುತ್ತ ಆ ಮೂರ್ತಿಗಳು ಬಾಬರಿ ಮಸೀದಿಯಲ್ಲೇ ಉಳಿಯುವಂ... ನೋಡಿಕೊಂಡ. ನಿವೃತ್ತಿಯ ನಂತರ ಜನಸಂಘ ಸೇರಿ ರಾಜಕಾರಣಿಯಾದ.

ಹೀಗೆ ಮೂರ್ತಿಗಳನ್ನು ಒಳಗೆ ಇಟ್ಟು ಬಾಬರಿ ಮಸೀದಿಗೆ ಬೀ... ಹಾಕುವುದರಿಂದ ಮುಂದೊಂದು ದಿನ ಭಾರತ ಭಾರೀ ಬೆಲೆ ತೆರಬೇಕಾಗುತ್ತ... ಎಂದು ಅಂದೇ ಎಚ್ಚರಿಸಿದವರು, ಆ ಸಮಯದಲ್ಲಿ ಫೈಜಾಬಾದ ಜಿಲ... ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬ್ರಹ್ಮಚಾರಿ ಎಂಬವರು ತಾವು ರಾಮಭಕ್ತ ಹಾಗು ಗಾಂಧಿವಾದಿ ಎಂದು ಹೇಳಿಕೊಂಡು ಗೋವಿಂದ ವಲ್ಲಭ ಪಂತ ಅವರಿ... ಪತ್ರ ಬರೆದ ಅವರು, ಮುಂದಿನ ದಿನಗಳಲ್ಲಿ ದೇಶ ಎದುರಿಸಬೇಕಾ... ಗಂಡಾಂತರದ ಬಗ್ಗೆ ಎಚ್ಚರಿಕೆ ನೀಡಿದ್ದರು. ಒಬ್ಬ ಗಾಂಧಿವಾದಿಯಾಗಿ ... ಅನ್ಯಾಯವನ್ನು ವಿರೋಧಿಸುತ್ತೇನೆ ಎಂದೂ ಪತ್ರದಲ್ಲಿ ತಿಳಿಸಿದ್ದರು.

8

ಬಾಬರಿ ಮಸೀದಿಯಲ್ಲಿನ ರಾಮ ಮತ್ತು ಸೀತಾ ಮೂರ್ತಿಗಳ ಪೂಜಾ... ಲಾಲಬಾಬಾ ಎಂಬುವರು ತಾರುಣ್ಯದಲ್ಲಿ ಒ... ಕಮ್ಯೂನಿಸ್ಟ್ ಆಗಿದ್ದವರು! ಪೂಜಾರಿ ಕೆಲಸ ಅವ... ಕುಟುಂಬದ ವೃತ್ತಿಯಾಗಿದ್ದರಿಂದ, ಹೊಟ್ಟೆಪಾಡಿಗಾ... ತಂದೆಯ ಪೂಜಾವೃತ್ತಿಯನ್ನೇ ಅವಲಂಬಿಸಿ ಬಾಬ... ಮಸೀದಿಯಲ್ಲಿ ರಾಮಲಲ್ಲಾ ಪೂಜಾರಿಯಾದರು. ವಿ... ಹಿಂದೂ ಪರಿಷತ್, ಬಜರಂಗ ದಳ ಮುಂತಾ... ಸಂಘಪರಿವಾರದವರು ಅಯೋಧ್ಯೆಗೆ ಬಂದು ಜನರ... ಕೋಮುವಾದದ ವಿಷಬೀಜಗಳನ್ನು ಬಿತ್ತುವುದನ್ನು ಅವರು ವಿರೋಧಿಸುತ್ತಿದ್ದರು. 'ಮಾನುಷಿ' ಪತ್ರಿಕೆಯ ಸಂಪಾದಕಿ ಮಧು ಕಿಷ್ವರ್ ಅವರಿಗೆ ನೀಡಿ... ಸಂದರ್ಶನದಲ್ಲಿ ಅವರು ಹೇಳಿದ ಮಾನವೀಯ ಮಾತುಗಳು ಅತ್ಯುನ್ನತ ಮಟ್ಟದಲ್ಲಿವೆ. ನಂತರ ಖಾ... ಸಾಕ್ಷ್ಯಚಿತ್ರ ನಿರ್ಮಾಪಕ ಆನಂದ ಪಟವರ್ಧನ ಅವರಿ... ನೀಡಿದ ವಿಡಿಯೋ ಸಂದರ್ಶನದಲ್ಲಿ ಕೂಡ ಅವ... ಇದೇ ಮಾತುಗಳನ್ನು ಆಡಿದರು. ಈ ರೀತಿ... ಸಂದರ್ಶನಗಳಿಂದ ತಮ್ಮ ಕೊಲೆಯಾಗಬಹುದ... ಎಂದು ಅವರು ಹೇಳಿದ್ದರು. ನಂತರ ಕೆಲ... ತಿಂಗಳುಗಳಲ್ಲಿ ಅವರ ಕೊಲೆಯಾಯಿತು! ಈ ದೇಶದ ಸಂವೇದನಾಶೀ... ವ್ಯಕ್ತಿಯೊಬ್ಬನ ಕೊಲೆಯ ಸುದ್ದಿ ದೇಶವಾಸಿಗಳಿಗೆ ಸರಿಯಾಗಿ ತಲುಪಲಿ... ಮಾಧ್ಯಮಗಳಿಗೆ ಇದೊಂದು ಸಾಮಾನ್ಯ ಸುದ್ದಿಯಾಗಿತ್ತು!

9

ನಾನು, ಜವೀರುಲ್ಲಾ ಷರೀಫ್ ಮತ್ತು ಇನ್ನೊಬ್ಬ ಲಿಂಗಾಯತ ಸಾಹಿ... ಮುಖ್ಯ ಅತಿಥಿಗಳಾಗಿ ಸಮಾರಂಭವೊಂದಕ್ಕೆ ಹೋಗಿದ್ದೆವು. ನಮ... ವಸತಿಗೃಹವೊಂದರ ದೊಡ್ಡ ಕೋಣೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು, ನಾ... ಧರ್ಮದ ಕುರಿತು ಮಾರ್ಕ್ಸ್ ಮತ್ತು ಎಂಗೆಲ್ಸ್ ಬರೆದ ಪುಸ್ತಕವನ್ನು ಓದುತ್ತಿ... ಷರೀಫ್ ನಮಾಜ ಮಾಡುತ್ತಿದ್ದರು. ಆ ಲಿಂಗಾಯತ ಸಾಹಿತಿ ಇಷ್ಟಲಿಂಗ ಪೂಜೆ ಮಾಡಿಕೊಳ್ಳುತ್ತಿದ್ದರು. ಧರ್ಮ ಮೊದಲು ಮಾಡಿ ಎಲ್ಲವೂ ತ... ತಮ್ಮ ಪರಿಧಿಯಲ್ಲಿ ಎಷ್ಟೊಂದು ಸುಂದರವಾಗಿರುತ್ತವೆ ಎನಿಸಿತು. ಧರ್ಮ ಹೃದಯಹೀನ ಜಗತ್ತಿನ ಹೃದಯ. ಅದು ತನ್ನ ಪರಿಧಿಯನ್ನು ಮೀರಿದ... ಜನರ ಅಫೀಮು ಆಗುವುದರಲ್ಲಿ ಸಂಶಯವಿಲ್ಲ ಎಂಬುದನ್ನು ನಾ... ಮಾರ್ಕ್ಸ್‌ವಾದದಿಂದ ಅರಿತುಕೊಂಡೆ. ಅದನ್ನೇ ದೇಶದಲ್ಲಿ ನೋಡಿದೆ.

10

1992ನೇ ಡಿಸೆಂಬರ್ 6ರಂದು ಟಿವಿಗೆ ಅಂಟಿಕೊಂಡಿದ್ದೆ. ಅವರಿ... ಮಧ್ಯೆ ಕುಳಿತಿದ್ದ ಪೇಜಾವರ ಶ್ರೀಗಳು ಬಾಬರಿ ಮಸೀದಿ ಕೆಡವುವುದ... ತದೇಕ ಚಿತ್ತದಿಂದ ನೋಡುತ್ತಿದ್ದರು. ತಮ್ಮ ಕನಸುನನಸಾಯಿತು ಎ... ರೀತಿಯಲ್ಲಿ ಅವರ ಮುಖದಲ್ಲಿ ನೆಮ್ಮದಿಯ ಅಲೆಗಳು ಏಳುತ್ತಿರುವ... ಭಾಸವಾಗುತ್ತಿತ್ತು. ಆದರೆ ನಾನು ಆತಂಕದಲ್ಲಿದ್ದೆ. ಅಷ್ಟೊಂದು ಗದ್ದಲ... ಹರೆಯದ ಹೆಣ್ಣುಮಗಳೊಬ್ಬಳು ಹಸುಗೂಸನ್ನು ಎತ್ತಿಕೊಂಡು ಮಸಿ... ಕೆಡವುವವರಿಗೆ ಬೆಂಬಲ ವ್ಯಕ್ತಪಡಿಸುತ್ತಿದ್ದಳು. ಆ ಹುಚ್ಚುಗದ್ದಲದಲ್ಲಿ ಎಲ್ಲಿ ಮಗುವಿಗೆ ಅಪಾಯವಾಗುವುದೋ ಎಂಬ ಚಿಂತೆ ನನ್ನನ್ನು ಕಾಡುತ್ತಿತ್ತು, ಆ ಮಸೀದಿಯ ಗುಮ್ಮಟದ ಮೇಲೆ ಭಾವಾವೇಶದಿಂದ ಹತ್ತಿ ಅದ... ಕೆಡವುತ್ತಿರುವ ಜನರ ಮುಖಗಳನ್ನು ನೋಡುತ್ತಿದ್ದೆ. ಅವರ ಮೇಲೆ ಕರು... ಬರುತ್ತಿತ್ತು, ಅವರು ಪೌಷ್ಟಿಕಾಂಶಗಳ ಕೊರತೆಯಿಂದ ಬದುಕುತ್ತಿರುವ ಜನ... ಇರಬಹುದು ಎಂಬ ಸಂಶಯ ಕಾಡುತ್ತಿತ್ತು, ಮಸೀದಿ ಬೀಳುವಾಗ ಅವ... ಅದರಡಿ ಸಿಕ್ಕಿ ಸಾಯದಿರಲಿ ಎಂದು ನನ್ನೊಳಗೇ ಅಂದುಕೊಳ್ಳುತ್ತಿದ್ದೆ. ಬಡ ಮತ್ತು ಅಸಹಾಯಕ ಜನರಿಗೆ ಇಷ್ಟೊಂದು ಬೃಹತ್ ಪ್ರಮಾಣ... ಧರ್ಮದ ಅಫೀಮು ತಿನ್ನಿಸಿದವರು ಪೆಂಡಾಲ್ ಕೆಳಗೆ ಕುಳಿತು ಕೇಕೆ ಹಾಕುತ್ತಿ... ಮಸೀದಿ ಬೀಳಿಸಲು ಪ್ರಚೋದಿಸುವವರು, ಪ್ರಚೋದನೆಗೆ ಒಳಗಾದ... ಸುಖಮಯ ಬದುಕಿಗಾಗಿ ಏನನ್ನೂ ಮಾಡಿಲ್ಲ ಎಂಬುದು ಅವರನ್ನು ನೋಡಿ... ಅನಿಸದೆ ಇರುತ್ತಿರಲಿಲ್ಲ.

11

ಬಾಬರಿ ಮಸೀದಿ ಬಿದ್ದ ಬಹಳ ದಿನಗಳ ನಂತರ ಆ ಕುರಿತು ಉದ... ಟಿವಿಯಲ್ಲಿ ಪೇಜಾವರ ಶ್ರೀ, ಪ್ರೊ. ಜಿ.ಕೆ.ಗೋವಿಂದರಾವ್ ಮತ್ತು ... ಮಧ್ಯೆ ಚರ್ಚೆಯೊಂದನ್ನು ಏರ್ಪಡಿಸಲಾಗಿತ್ತು, ಗೋವಿಂದರಾಯರು ಬ... ಆವೇಶಭರಿತರಾಗಿ ಪದೆಪದೆ ಪೇಜಾವರ ಶ್ರೀಗಳ ಮೇಲೆ ಹರಿಹಾಯುತ್ತಿ... ಅವರ ಆವೇಶ ಪೇಜಾವರ ಶ್ರೀಗಳ ಯತಿತ್ವವನ್ನೇ ಪ್ರಶ್ನಿಸುವಂತಿತ್ತು, ಏತ... ನಾನು ಮಾತನಾಡಲು ಆರಂಭಿಸಿದೆ. ಮಸೀದಿ ಧ್ವಂಸ ಮಾಡಿದ ಜಾಗ... ಮತ್ತೆ ಮಸೀದಿ ನಿರ್ಮಾಣವೂ ಬೇಡ, ರಾಮಮಂದಿರ ನಿರ್ಮಾಣ... ಬೇಡ. ಸ್ವಾತಂತ್ರ್ಯಾನಂತರ ಈ ದೇಶದಲ್ಲಿ 35 ಸಾವಿರದಷ್ಟು ಕೋ... ಗಲಭೆಗಳಾಗಿವೆ. ದೇಶಾದ್ಯಂತ ಅಂಥ ಕೋಮುಗಲಭೆಗಳಲ್ಲಿ ತಂದೆತ...

ಕೊಂಡು ಅನಾಥರಾದ ಮಕ್ಕಳಿಗಾಗಿ ಅತ್ಯುನ್ನತ
ಶಿಕ್ಷಣ ನೀಡುವಂಥ ವಸತಿಶಾಲೆಯೊಂದು ಆ
ನಿರ್ಮಾಣವಾಗಲಿ. ಅಂಥ ಅನಾಥ ಮಕ್ಕಳಿಗೆ
ಶಿಕ್ಷಣ ಸಿಗಲಿ. ಮೂಲಭೂತವಾದಿಗಳಿಂದಾಗಿ
ರಾದ ಎಲ್ಲ ಜಾತಿ ಧರ್ಮಗಳ ಅವರು,
ಭುತ್ವ ನಮ್ಮ ಧರ್ಮ, ಸಂವಿಧಾನ ನಮ್ಮ
ಂಥ' ಎಂಬ ನಿರ್ಧಾರಕ್ಕೆ ಬರುವಂಥ ಶಿಕ್ಷಣ
ಲಿ ಎಂದು ಮುಂತಾಗಿ ಹೇಳಿದೆ.
ಮೇಲೆ ಕುಪಿತಗೊಂಡ ಪೇಜಾವರ ಶ್ರೀಗಳು
ಮಕ್ಕಳಿಗಾಗಿ ಮೆಕ್ಕಾದಲ್ಲಿ ವಸತಿಶಾಲೆ ಆರಂಭಿಸಲು
ನೀಡಿರಿ. ಶ್ರೀರಾಮಚಂದ್ರ ಜನಿಸಿದ ಜಾಗದಲ್ಲಿ
ಎಂದು ಹೇಳಿದರು. ಆಗ ನಾನಂದೆ 'ಯತಿಗಳೇ
ನನ್ನ ದೇಶದ ಸಮಸ್ಯೆ ಬಗೆಹರಿಸುವ ವಿಚಾರ
ದ್ದೇನೆ. ಹಾಗೆಲ್ಲ ಮಾತನಾಡಿದರೆ ಬೇರೆ ದೇಶದ
ರದಲ್ಲಿ ಕೈ ಹಾಕಿದ ತಪ್ಪು ಮಾಡಿದಂತಾಗಿ ನೀವು
ದೆ ಅನುಭವಿಸಬೇಕಾಗಬಹುದು.' ನಾನು ಹೇಳಿದ
ಂದ ಪೇಜಾವರ ಶ್ರೀಗಳು ಒಂದುಕ್ಷಣ
ಗೊಂಡರು. ಆ ಜಾಗದಲ್ಲಿ ಮಂದಿರ ಮತ್ತು ಮಸೀದಿ
ಣವಾಗಲಿ ಎಂದು ಹೇಳಿಬಿಟ್ಟರು. ಕನಿಷ್ಠಪಕ್ಷ
ದರೂ ಆಗಲಿ ಎಂದೆ.
ಬರಿ ಮಸೀದಿ ತೀರ್ಪು ಬಂದ ನಂತರ ಕೆಲವರು
ಗದಲ್ಲಿ ಮಂದಿರ ಮಸೀದಿ ನಿರ್ಮಾಣವಾಗಲಿ
ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕೆ ಪೇಜಾವರ ಶ್ರೀಗಳು
ಹೆಯನ್ನು ವಿರೋಧಿಸಿದ್ದನ್ನು ಪತ್ರಿಕೆಯಲ್ಲಿ ಓದಿದೆ!

12

ಬರ್ ತನ್ನ ಮಗ ಹುಮಾಯೂನನಿಗೆ ತಿಳಿಸಿದ:
ಮಾಂಸ ತಿನ್ನಬೇಡ. ಅದರಿಂದ ನಮ್ಮ ಹಿಂದೂ
ದರರಿಗೆ ನೋವಾಗುವುದು.'
ಮಾಯೂನ್ ಸಾವಿನ ಹಾಸಿಗೆಯ ಮೇಲೆ ಇದ್ದಾಗ
ಅಲ್ಲಾಹನಲ್ಲಿ ಬೇಡಿಕೊಂಡ: 'ದೇವರೇ ನನ್ನ
ವನ್ನು ನನ್ನ ಮಗನಿಗೆ ಕೊಡು.'
ಬರ್ ಸತ್ತ, ಹುಮಾಯೂನ್ ಬದುಕಿ ಉಳಿದ
ನಾಮಾ).

13


ವೇಕಾನಂದರು ಹೀಗೆ ಹೇಳಿದ್ದಾರೆ: 'ಅದ್ವೈತವು
ಅಂತಿಮ ಪದ ಮತ್ತು ವಿಚಾರ. ಅಲ್ಲದೆ ಎಲ್ಲ
ಗಳು ಮತ್ತು ಪಂಗಡಗಳನ್ನು ಪ್ರೇಮಭಾವದಿಂದ
ಳ್ಳುವಂಥ ಏಕೈಕ ಮಾರ್ಗ. ಮುಂಬರುವ ಪ್ರಬುದ್ಧ
ಕುಲದ ಧರ್ಮವಿದು ಎಂದು ನಾನು ನಂಬಿರುವೆ.
ಸನೀಯ ರೀತಿಯಲ್ಲಿ ಯಾವುದಾದರೂ ಧರ್ಮ
ನಾನತೆಯ ಬಳಿ ಸಾರಿದ್ದರೆ ಅದು ಇಸ್ಲಾಂ; ಇಸ್ಲಾಂ
.. ವಾಸ್ತವ ಇಸ್ಲಾಂ ಸಹಾಯವಿಲ್ಲದೆ, ವೇದಾಂತದ
ಗಳು ಎಷ್ಟೇ ಚೆನ್ನಾಗಿ ಮತ್ತು ಅದ್ಭುತವಾಗಿದ್ದರೂ
ಕುಲಕ್ಕೆ ಸಂಪೂರ್ಣ ಮೌಲ್ಯಹೀನವಾಗುತ್ತವೆ
ಮು ನನ್ನ ದೃಢನಿರ್ಧಾರವಾಗಿದೆ. .. .. ನಮ್ಮ
ಭೂಮಿಗಾಗಿ ಎರಡು ಮಹಾನ್ ವ್ಯವಸ್ಥೆಗಳಾದ
ಮತ್ತು ಇಸ್ಲಾಂ- ವೇದಾಂತದ ಮೆದುಳು ಮತ್ತು
ದೇಹ- ಸಂಯೋಜನೆಯೊಂದೇ
ಮುಕವಾದುದಾಗಿದೆ. ವೇದಾಂತದ ಮೆದುಳು ಮತ್ತು
ದೇಹದೊಂದಿಗೆ ಭವಿಷ್ಯದ ತೇಜಸ್ವಿ ಮತ್ತು
ಲವಾದ ಪರಿಪೂರ್ಣ ಭಾರತ, ಈ ಹಾಹಾಕಾರ
ಗಲಭೆಗಳಿಂದ ಮುಕ್ತವಾಗುವುದನ್ನು ನಾನು ನನ್ನ
ಕಣ್ಣಲ್ಲಿ ನೋಡುತ್ತೇನೆ.' (ಕಲೆಕ್ಟೆಡ್ ವರ್ಕ್ಸ್ ಆಫ್
ನಂದ ವಾಲ್ಯುಂ 6- ಪೇಜ್ 16 ಅನುವಾದ)
ರತದ ಹಿಂದೂ ಮತ್ತು ಮುಸ್ಲಿಮರು ಈ
ವಾಣಿಗೆ ಬೆಲೆ ಕೊಡದಿದ್ದರೆ ಇನ್ನೂ ಹೆಚ್ಚಿನ
ತಗಳನ್ನು ಎದುರಿಸಬೇಕಾಗುತ್ತದೆ. ತಮ್ಮ ಮೇಲೆ
ಂದ (ಹಿಂದ್) ನನ್ನೆಡೆಗೆ ತಂಗಾಳಿ ಬೀಸುತ್ತಿದೆ'
ದಾ ಶಾಂತಿ ಬಯಸಿದ ಮಹಮ್ಮದ್ ಪೈಗಂಬರರು
ಭಾರತದ ಮುಸ್ಲಿಮರಂತೂ ಮರೆಯಲೇ
. 'ತಂಗಾಳಿ' ಎಂಬುದು ಶಾಂತಿತತ್ವದ
ಗಿದೆ. ಏಕೈಕವಾದ ನಿರ್ಗುಣ ನಿರಾಕಾರ ಬ್ರಹ್ಮದ
ವೇದಾಂತ ವಿವರಿಸುತ್ತದೆ. ನಿರ್ಗುಣ ನಿರಾಕಾರ
ಶರಣಾಗತವಾಗುವುದರ ಮೂಲಕ ಮಾತ್ರ ಶಾಂತಿ
ಸಾಧ್ಯ ಎಂಬುದು ಉಪನಿಷತ್ (ವೇದಾಂತ)
ದೆ. ಇಸ್ಲಾಂ ತತ್ವವೂ ಇದೇ ಆಗಿದೆ. ಇಸ್ಲಾಂ
ಧಾನವೆಂದರೆ ಎಂದರೆ ಏಕೈಕನಾದ ಪರಮಾತ್ಮನಿಗೆ
ತ ಆಗುವುದು, ಶಾಂತಿ ಮತ್ತು ಸಮೃದ್ಧಿಯ
ಹೊಂದುವುದು. ವೇದಾಂತದ ಆಶಯ ಕೂಡ
ಗಿದೆ.
ತವನ್ನು ಕೋಮುವಾದಿಗಳಿಂದ ಮತ್ತು
ಗಳಿಂದ ಮುಕ್ತಗೊಳಿಸಿ
ಕಿನ ಬಾಯಲ್ಲಿ ಗುಬ್ಬಿ
ಸುವಂಥ ವಾತಾವರಣ
ಸಾಧ್ಯವಾಗುವುದು
ಂದರ ವಿವೇಕವನು,
ಕೊಂಡಾಗ ಮಾತ್ರ.



ಬಾನ್ ದರ್ಗಾ

ಮುಗಿಯದಾಗಿದೆ ವಸ್ತ್ರ ಸಂಹಿತೆಯ ರಗಳೆ...

ಅತ್ಯಾಚಾರಕ್ಕೆ ಕಾರಣ ಹುಡುಕುವಾಗ ಆತುರದಲ್ಲೋ ಇಲ್ಲಾ ತಮ್ಮ ಆಲೋಚನಾ ಕ್ರಮದ ಭಾಗವಾಗಿಯೋ ರಾಜಕಾರಣಿಗಳು, ಮಠಾಧೀಶರು, ಅಧಿಕಾರಿಗಳನ್ನೂ ಒಳಗೊಂಡು ಬಹಳಷ್ಟು ಜನ ಹೇಳುವ ಉತ್ತರ ಹೆಣ್ಣು ಮಕ್ಕಳು ಧರಿಸುವ ಅತ್ಯಾಧುನಿಕ ಉಡುಪುಗಳು, ಅರೆ ಉಡುಪುಗಳು ಪ್ರಮುಖ ಕಾರಣ ಎಂಬುದು. ಅತ್ಯಾಚಾರಗಳು ದಿನನಿತ್ಯದ ಸಂಗತಿಗಳೇ ಆಗುತ್ತಿವೆ. ಅದರ ಜೊತೆಜೊತೆಯಲ್ಲೇ ಉಡುಪಿನ ಕುರಿತಾದ ಈ ಚರ್ಚೆಯೂ ಸಾಗುತ್ತಿದೆ. ಗಲ್ಲು ಶಿಕ್ಷೆ ವಿಧಿಸುವ ಮಟ್ಟಕ್ಕೆ ಅಪರಾಧದ ತೀವ್ರತೆ ಮೆರೆದ ದೆಹಲಿಯ ನಿರ್ಭಯ ಪ್ರಕರಣದ ಉದಾಹರಣೆಯನ್ನೇ ತೆಗೆದುಕೊಂಡರು ಆ ಯುವತಿ ಮೈಯ್ಯೆಲ್ಲಾ ಆವರಿಸಿಕೊಂಡಿದ್ದ ಉಡುಗೆಯನ್ನೇ ಧರಿಸಿದ್ದಳು. ಉತ್ತರ ಪ್ರದೇಶದ ಬದೌನ್‌ನಲ್ಲಿ ಅತ್ಯಾಚಾರಕ್ಕೂ, ಹತ್ಯೆಗೂ



ಬಲಿಯಾದರೆಂದು ಹೇಳಲಾಗುತ್ತಿರುವ ಯುವತಿಯರು ಮೈಪೂರಾ ಮುಚ್ಚಿಕೊಂಡಿದ್ದ ಚೂಡಿದಾರವನ್ನು ಧರಿಸಿದ್ದರು. ಕರ್ನಾಟಕದ ಪ್ರಮುಖ ಧಾರ್ಮಿಕ ಕ್ಷೇತ್ರವಾದ ಧರ್ಮಸ್ಥಳದಲ್ಲಿ ಅತ್ಯಾಚಾರಕ್ಕೆ ಬಲಿಯಾಗಿ ಬರ್ಬರವಾಗಿ ಕೊಲೆಯಾಗಿ ಹೋದ ಸೌಜನ್ಯ ಮೈತುಂಬಾ ಬಟ್ಟೆ ಧರಿಸಿಯೇ ಕಾಲೇಜಿಗೆ ತೆರಳಿದ್ದಳು. ಆವಳ ಮೇಲೆ ಪೈಶಾಚಿಕ ದಾಳಿ ನಡೆದಾಗ ಸ್ಥಳ ಮಹಿಮೆಯೂ ಕೆಲಸಕ್ಕೆ ಬರಲಿಲ್ಲ, ಆಕೆಯ ಧಿರಿಸೂ ಮಾನವ ರೂಪದಲ್ಲಿದ್ದ ಪಿಶಾಚಿಗಳಲ್ಲಿ ಗೌರವ ಮೂಡಿಸಲಿಲ್ಲ. ಇತ್ತೀಚಿಗೆ 85 ವರ್ಷದ ವಯೋವೃದ್ಧೆಯೊಬ್ಬರ ಮೇಲೆ ಅತ್ಯಾಚಾರ ಜರುಗಿದ ಪ್ರಕರಣ ವರದಿಯಾಯಿತು. ಅವರಂತೂ ಭಾರತೀಯ ಸಂಪ್ರದಾಯದಂತೆ ಸೀರೆಯನ್ನೇ ಧರಿಸಿದ್ದರು. ಇನ್ನು 2,3,4,5 ವಯೋಮಾನದಿಂದ ಪ್ರಾರಂಭಿಸಿ ಅತ್ಯಾಚಾರಕ್ಕೆ ಬಲಿಯಾದ ಅಸಂಖ್ಯಾತ ಹಸುಳೆಗಳು ಕ್ಯಾಬರೆ ಬಟ್ಟೆಯನ್ನು ಧರಿಸಿ ಮೈಕುಣಿಸುವವರಂತೂ ಅಲ್ಲವೇ ಅಲ್ಲ.

ಮಕ್ಕಳ ಮೈಮೇಲಿನ ಬಟ್ಟೆಗಳೂ ಕಾಮುಕರ ಮೈನವಿರೇಳಿಸುತ್ತವೆ ಎಂದಾದರೆ ಇದು ನಿರ್ಜೀವಿ ಬಟ್ಟೆಗಳ ದೋಷವಂತೂ ಅಲ್ಲವೇ ಅಲ್ಲ, ಎಂಥದೇ ಬಟ್ಟೆ ಧರಿಸಿದಾಗಲು ಮಕ್ಕಳನ್ನು ಮಕ್ಕಳಂತೆ ನೋಡಲಾಗದ ಮನಸ್ಥಿತಿಯ ದೋಷ. ನಂಜುಕಾರಕ ಹುಣ್ಣುಗಳನ್ನ ಮೈವೆತ್ತ ಹಾಗೂ ಅಂತಹ ಆಲೋಚನೆಗಳಿಗೆ ಸಾಮಾಜಿಕ, ಸಾಂಸ್ಕೃತಿಕ ಸನ್ನಿವೇಶಗಳನ್ನು ನಿರ್ಮಾಣ ಮಾಡಿರುವ ಮೆದುಳುಗಳ ದೋಷ. ಎರಡು ವರ್ಷದ ಕಂದಮ್ಮನಿಂದ ಆರಂಭವಾಗಿ ಬದುಕಿದ್ದರೆ 100 (ಬದುಕಿರಲೇಬೇಕು ಎನ್ನುವ ನಂಬಿಕೆಯೂ ಹುಸಿಯಿರಬಹುದೇನೊ) ವಯಸ್ಸಿನ ಹೆಂಗಸಾದರೂ ಸರಿಯೇ ಅತ್ಯಾಚಾರಕ್ಕೆ ಸೈ ಎನ್ನುವ ಮನಸ್ಥಿತಿಗಳ ಕುರಿತು ಒಂದು ನಾಗರಿಕ ಸಮಾಜ ಗಂಭೀರ ಚಿಂತನೆ ನಡೆಸಬೇಕೆ ಹೊರತು ಆ ಕೊಳಕನ್ನು "ಬಟ್ಟೆಯ ವಿನ್ಯಾಸದ" ಮೂಲಕ ಸರಿಪಡಿಸುತ್ತೇವೆಂದು ಹೊರಟರೆ ಆ ನಡವಳಿಕೆಯನ್ನು ಏನೆಂದು ಕರೆಯುವುದು?

ಮಹಿಳೆಯರ ಉಡುಪು ಮತ್ತು ಅತ್ಯಾಚಾರಗಳನ್ನು ಜೊತೆಗೂಡಿಸಿರುವ ವಿದ್ಯಮಾನಗಳು ಈ ಸಮಾಜಕ್ಕೆ ಹೊಸ ಸಂಗತಿಯೇನೂ ಅಲ್ಲ. ಕೆಳಜಾತಿಯ ಮಹಿಳೆಯರು ನಿನ್ನೆ-ಮೊನ್ನೆಯವರೆಗೂ ಕುಪ್ಪಸಗಳನ್ನ ಧರಿಸದೇ ಸೀರೆಯ ತುಂಡುಗಳಲ್ಲೇ ಬದುಕು ಸವೆಸಿ ಮಣ್ಣಾಗಿ ಹೋದ ವಾಸ್ತವವನ್ನು ನಾವೆಲ್ಲಾ ಕಣ್ಣಾರೆ ಕಂಡಿದ್ದೇವೆ. ಕೇರಳದಂತಹ ರಾಜ್ಯದಲ್ಲಿ ಎದೆಯ ಮೇಲೆ ಬಟ್ಟೆ ಹೊದ್ದುಕೊಳ್ಳುವ ಅವಕಾಶಕ್ಕಾಗಿ ಚಳವಳಿಗಳೇ ನಡೆದುಹೋಗಿವೆ. ಮಹಿಳೆಯರು ಮೈತುಂಬಾ ಬಟ್ಟೆ ಧರಿಸುವ ಅವಕಾಶವನ್ನು ಕಿತ್ತುಕೊಂಡಿದ್ದ ಮೇಲ್ಜಾತಿ ಜನವರ್ಗದ ಮೇಲೆ ಅಯ್ಯಂಗಾಳಿ ಮುಂತಾದ ಸಾಮಾಜಿಕ ಹೋರಾಟಗಾರರು ಸಮರವನ್ನೇ ಸಾರಿದ ಉದಾಹರಣೆಗಳು ನಮ್ಮ ಮುಂದಿವೆ.

ಇಂದು ಮೈ ಕಾಣುವಂತೆ ಮಹಿಳೆ ಬಟ್ಟೆ ತೊಟ್ಟರೆ ಅದಕ್ಕೆ ಪ್ರತಿಯಾಗಿ ಅತ್ಯಾಚಾರದಂತಹ ಕೃತ್ಯಗಳಿಗೆ ಬಲಿಯಾಗಬೇಕಾಗುತ್ತದೆ ಎಂದು ವಾದಿಸುವವರು ಅಂದು ಅತ್ಯಾಚಾರಗಳಿಗೆ ಮುಕ್ತ ಅವಕಾಶವಿರಲಿ ಎನ್ನುವ ಕಾರಣಕ್ಕಾಗಿಯೇ ಕೆಳಜಾತಿಯ ಹೆಣ್ಣುಗಳಿಗೆ ಅರೆಬಟ್ಟೆಯ ವಸ್ತ್ರಸಂಹಿತೆಯನ್ನು ಹೇರಿದ್ದರು ಎನ್ನುವುದನ್ನು ಒಪ್ಪಿಕೊಳ್ಳುವರೆ? ಒಪ್ಪಲೇಬೇಕು. ಆದರೆ, ಅಡ್ಡಿಯಿದೆ ಇದಕ್ಕೆ. ಅಂದು ಸಮಾಜದ ಮೇಲ್ವರ್ಗ ಅರೆನಗ್ನ ಉಡುಪನ್ನು ಕೆಳಜಾತಿಯ ಮಹಿಳೆಯರಿಗೆ ವಿಧಿಬದ್ಧಗೊಳಿಸಿತ್ತು, ಅದು ಯಾರೂ ಪ್ರಶ್ನಿಸದೇ ಆಚರಿಸುವಂತಿತ್ತು. ಇಂದಿನ ಮಹಿಳೆಯರು ತಮ್ಮಿಷ್ಟದ ಬಟ್ಟೆಗಳನ್ನು ತಾವೇ ಆಯ್ಕೆ ಮಾಡಿ ಧರಿಸುವಷ್ಟು ಸ್ವತಂತ್ರರಾಗುತ್ತಿದ್ದಾರೆ. ನಮ್ಮ ಹೇಳಿಕೆ-ಕೇಳಿಕೆಗಳೇನು ಇವರಿಗೆ ಬೇಕಾಗಿಲ್ಲ, ನಮ್ಮ ಹಿಡಿತ ಸಂಪೂರ್ಣ ನೆಲಕಚ್ಚುವ ಅಪಾಯವಿದೆ ಎನ್ನುವುದೇ ಆಧುನಿಕ ಉಡುಪುಗಳ ಬಗ್ಗೆ ತಕರಾರು ತೆಗೆಯುವ ಮೂಲಭೂತವಾದಿ ಚಿಂತನೆಗಳಿಗೆ ಅಡ್ಡಗಾಲಾಗಿರುವ ಪ್ರಶ್ನೆ.

ತಮ್ಮ ಹಿತಾಸಕ್ತಿಗೆ ಅನುಕೂಲಕರವಾಗಿರುವಂತೆ ಮಹಿಳೆಯರಿಗೆ ವಸ್ತ್ರಸಂಹಿತೆ ರೂಪಿಸಿಕೊಟ್ಟಿದ್ದ ಮೂಲಭೂತವಾದ ಆ ಹಿಂದಿನ ತನ್ನ ಅನುಭವದ ಧಾಟಿಯಲ್ಲಿಯೇ ಇಂದೂ ಮಾತನಾಡುತ್ತಿದೆ. ಅದು, ಅರೆಬಟ್ಟೆ ಧರಿಸಿದರೆ ಅತ್ಯಾಚಾರಕ್ಕೆ ಸಿದ್ಧರಾಗಬೇಕಾದೀತು ಎನ್ನುವ ಸಂಕೇತದ ಮೂಲಕ. ದುರಂತವೆಂದರೆ ಜನತೆಯ ಆಹಾರ, ಆಚರಣೆ, ವೇಷ, ಭೂಷಣ, ಭಾಷೆ, ಭವಿಷ್ಯ ಎಲ್ಲವನ್ನೂ ರೂಪಿಸುವುದು ಆಳುವ ವರ್ಗ ಎನ್ನುವ ವಾಸ್ತವವನ್ನು ಮತ್ತು ಜನರ ಆರ್ಥಿಕ, ಸಾಮಾಜಿಕ ಶ್ರೇಣಿಗನುಗುಣವಾಗಿ ಅವುಗಳನ್ನು ವಿನ್ಯಾಸಗೊಳಿಸಲಾಗುತ್ತದೆಂಬ ಹುನ್ನಾರಗಳನ್ನು ಅರಿಯಲು ಅಶಕ್ತವಾಗಿರುವ ಜನಸಮುದಾಯಗಳು ಮತ್ತದೇ ಅಧಿಕಾರಶಾಹಿ ಊದುವ ವಂಚಕ ತುತ್ತೂರಿಗಳನ್ನೇ ಕಂಠಪಾಠ ಮಾಡಿ ಪುನರುಚ್ಚರಿಸುವವು. ಅಂತಹ ಕಂಠಪಾಠಗಳ ತುಣುಕೇ ಆಧುನಿಕ ಉಡುಪು ಮಹಿಳೆಗೆ ಅನಾಹುತಕಾರಿ ಎನ್ನುವ ವಾದಸರಣಿ.

ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶದ ಹಿನ್ನೆಲೆಯಲ್ಲಿ ಒಂದು ಸಣ್ಣ ಉದಾಹರಣೆಯಾಗಿ ಈ ಸಂಗತಿಯನ್ನು ನೋಡುವುದಾದರೆ, ಕೆಸರು ಗದ್ದೆಯಲ್ಲಿ ನಾಟಿ ಕೆಲಸ ಮಾಡುವ ಮಹಿಳೆಯರು ಮಂಡಿಗಿಂತಲೂ ಮೇಲಕ್ಕೆ ಸೀರೆ-ಲಂಗ ಕಟ್ಟಿರುತ್ತಾರೆ. ಸೊಂಟ ಬಗ್ಗಿಸಿ ನಾಟಿ ಹಾಕುವಾಗ, ಕಳೆಕೀಳುವಾಗ ಸೆರಗು - ರವಿಕೆಗಳೆರಡೂ ಏರುಪೇರು ಆಗಿಬಿಡುತ್ತವೆ. ಹೆಚ್ಚುಕಡಿಮೆ ಅರೆನಗ್ನರಾಗಿಯೇ ಹೆಂಗಸರು ಹೊಲ-ಗದ್ದೆಗಳಲ್ಲಿ ಕೆಲಸ ಮಾಡಬೇಕಾದ ಸನ್ನಿವೇಶ ಇರುತ್ತದೆ. ಹಾಗಿದ್ದರೆ ಇವರ ಮೇಲೆಲ್ಲಾ ಅತ್ಯಾಚಾರ ಘಟಿಸಲೇಬೇಕೆ?

ಅಂದಿನ ಪಾಳೆಯಗಾರಿಗೂ ಇಂದಿನ ಬಂಡವಾಳಶಾಹಿಗೂ ಸಾಮ್ಯತೆಯಿರುವ ಒಂದು ಸಂಗತಿಯನ್ನಿಲ್ಲಿ ಪ್ರಸ್ತಾಪಿಸಬೇಕು. ಅಂದಿನ ಪಾಳೆಯಗಾರಿ/ಸಂಪ್ರದಾಯವಾದಿಗಳು ತಳಸಮುದಾಯದ ಮಹಿಳೆಯರಿಗೆ ರೂಪಿಸಿದ ವಸ್ತ್ರ ಸಂಹಿತೆಯನ್ನು ಇಂದಿನ ಬಂಡವಾಳಶಾಹಿ ಸ್ವಲ್ಪ ಆಧುನಿಕವಾಗಿ ಮಾರ್ಪಾಡುಗೊಳಿಸಿ ಇಡೀ ಸಮಾಜಕ್ಕೆ ವಿಸ್ತರಿಸುವ ಮಹದಾಸೆಯನ್ನು ಹೊಂದಿರಬಹುದು. ಹೆಣ್ಣನ್ನೇ ಒಂದು ಸರಕಾಗಿ ಮಾರ್ಪಡಿಸಲು ಹೊರಟಿರುವ ಈ ನವಉದಾರೀಕರಣದ ವ್ಯಾಪಾರಿಗಳಿಗೆ ಹೆಣ್ಣನ್ನು ಕನಿಷ್ಠ ಉಡುಗೆಯಲ್ಲಿ ಬಿಂಬಿಸುವುದೂ ಒಂದು ವ್ಯಾಪಾರಿ ಕಲೆಯೇ ಆಗಿರಬಹುದು. 'ನೀನು ಅಂದು ಮಾಡಿದ್ದನ್ನ ನಾನು ಇಂದು ಮಾಡುತ್ತೇನೆ ಅಂದು ನಾನು ಸುಮ್ಮನಿದ್ದೆ ಇಂದು ನೀನು ಸುಮ್ಮನಿರು' ಎನ್ನುವ ಮೈತ್ರಿ ಮನೋಭಾವ ಈ ಎರಡೂ ವರ್ಗಗಳನ್ನು ಬೆಸೆದಿದೆಯಷ್ಟೆ.


ಮುಕ್ತಮಾರುಕಟ್ಟೆ ಎನ್ನುವ ಹೊಸ ಹೆಸರಿನಲ್ಲಿ ಈ ಜೋಡಿ ಮರು ಅವತರಿಸಿಬಿಟ್ಟಿದೆ. ಪಾಳೇಗಾರಿ, ಸಂಪ್ರದಾಯವಾದಿಗೆ ಮಹಿಳೆ ಕಾಮದ ವಸ್ತುವಾದರೆ ಬಂಡವಾಳಶಾಹಿಗೆ ಮಾರುಕಟ್ಟೆ ಸರಕು. ಭಾರತದ ಸಂದರ್ಭದಲ್ಲಿ ಪಾಳೇಗಾರಿ-ಬಂಡವಾಳಶಾಹಿ ಸ್ನೇಹಕೂಟ ಅಧಿಕಾರ ಹಿಡಿದಿರುವ ಕಾರಣ ಇಲ್ಲಿನ ಹೆಣ್ಣು ಸಮಾಜದ ಎದುರು ಕಾಮದ ಬೊಂಬೆಯೂ, ಮಾರಾಟದ ಸರಕೂ ಆಗಿರುವ ಒಂದೇ ನಾಣ್ಯದ ಎರಡು ಮುಖ. ಆಧುನಿಕ ವಿದ್ಯಾಭ್ಯಾಸ ಮತ್ತು ಮಹಿಳಾ ಚಳವಳಿಗಳ ಫಲವಾಗಿ ಇಂದಿನ ಮಹಿಳೆಯರಿಗೆ ಸ್ವಲ್ಪ ಮಟ್ಟಿನ ಸ್ವತಂತ್ರ ಆಯ್ಕೆಗಳು ಇವೆ ಎನ್ನಬಹುದಾದರೂ ಮಾರುಕಟ್ಟೆಯ ಕೂಗುಮಾರಿ ಜಾಹೀರಾತುಗಳಿಗೆ, ನಿಯಂತ್ರಣಗಳಿಗೆ ಬಲಿಬೀಳದ ಮಹಿಳಾ ಸಮೂಹ ಇದಾಗಿದೆ ಎಂದು ಹೇಳುವುದು ಕಷ್ಟ. ಇಷ್ಟಾಗಿಯೂ ತೀರಾ ಅತ್ಯಾಧುನಿಕ ಉಡುಗೆ-ತೊಡುಗೆಗಳಿಗೆ ಜೋತು ಬಿದ್ದಿರುವ ಮಹಿಳೆಯರ ಸಂಖ್ಯೆ ತೀರಾ ನಗಣ್ಯ ಮತ್ತು ಇದು ಯಾವತ್ತೂ ಚಿಗುರನ್ನೇ ಮೇಯುವ ಸಮಾಜದ ಮೇಲ್ಪದರವೇ ಆಗಿದೆಯೇ ಹೊರತು ಸಾಮಾನ್ಯ ವಿಭಾಗವಂತು ಅಲ್ಲವೇ ಅಲ್ಲ.

ಅಂದು ಅರೆಬಟ್ಟೆಯನ್ನು ಆರಾಧಿಸಿದ್ದ ಚಿಂತನೆಗಳೇ ಇಂದು ಅರೆಬಟ್ಟೆಯ ವಿರುದ್ಧ ಅಭಿಪ್ರಾಯ ರೂಪಿಸಲು ಹೊರಟಿರುವ ಸೋಜಿಗದ ಹಿಂದೆ ಮತ್ತೊಂದು ಘನ ಉದ್ದೇಶವಿದೆ. ಲಿಂಗ ಸಮಾನತೆಯ ಕಡೆಗೆ ಎಲ್ಲಾ ವರ್ಗದ ಮಹಿಳೆಯರೂ ಒಗ್ಗಟ್ಟಿನಿಂದ ಹೆಜ್ಜೆ ಹಾಕುವುದು ಈ ಮೂಲಭೂತವಾದಿ ಚಿಂತನೆಗೆ ಸಹಿಸಲಾಗದ ಸಂಕಟ. ಈ ಬೇನೆಯಿಂದ ಮುಕ್ತವಾಗಿರಲು ಅದು ಕಂಡುಕೊಂಡಿರುವ ಮದ್ದೇ ಮಹಿಳೆಯರನ್ನು ಯಶಸ್ವಿಯಾಗಿ ಬೇರ್ಪಡಿಸಬಹುದಾದ ವಿಷಚಿಂತನೆಗಳನ್ನು ಅವರಿಗುಣಿಸುವುದು. ಹೆಣ್ಣಿಗೆ ಹೆಣ್ಣೇ ಶತ್ರು ಎನ್ನುವ ಪದಪುಂಜಗಳನ್ನು ಅವರ ಬಾಯಿಂದಲೇ ಬರುವ ಹಾಗೆ ಮಾಡುವ ತಂತ್ರಗಾರಿಕೆಗಳನ್ನು ರೂಪಿಸುವುದು, ಹೆಣ್ಣೊಬ್ಬಳು ಧರಿಸುವ ಉಡುಗೆಯೇ ಮತ್ತೊಬ್ಬಳು ಹೆಣ್ಣಿನ ಮಾನಹಾನಿಗೆ ಕಾರಣೀಭೂತವಾಗಿದೆ ಎನ್ನುವಂತೆ ಅಭಿಪ್ರಾಯ ರೂಪಿಸುವುದು, ಮಹಿಳೆಯರ ನಡುವೆ ಒಡಕನ್ನು ಮೂಡಿಸಿ ಆ ಬೇರ್ಪಟ್ಟ ಅನೈಕ್ಯ ಸ್ಥಿತಿಯನ್ನು ಕಾಪಾಡುವುದು ಮೂಲಭೂತವಾದದ ಅಸಲಿ ಉದ್ದೇಶ. ದುರಂತವೆಂದರೆ ಸಂಪ್ರದಾಯವಾದದ ಈ ಘನ ಉದ್ದೇಶವೇ ಹಲವಾರು ಟಿವಿ ಚಾನಲ್‌ಗಳು, ಮಾಧ್ಯಮಗಳಿಗೆ ಬಣ್ಣ-ಬಣ್ಣದ ತುತ್ತೂರಿ. ಅತ್ಯಾಚಾರಕ್ಕೆ ಮಹಿಳೆಯರು ಧರಿಸುವ ಉಡುಪೇ ಕಾರಣ ಎಂದು ಮಹಿಳೆಯರಿಂದಲೇ ವಾದ ಮಂಡಿಸುವ ಇವರ ರೋಚಕ ವಾದಸರಣಿಗಳು ಇದರ ಭಾಗವೇ. ಮಗುವಿನ ಮೇಲೆ ಅತ್ಯಾಚಾರವಾದಾಗಲೂ, ಕಾಮುಕರು ಮುದುಕಿಯ ಮೇಲೆರಗಿದಾಗಲೂ ಇವೇ ಪುನರಾವರ್ತನೆಗಳು, ನಿರಂತರ ಬೊಬ್ಬೆ ಹೊಡೆಯುವ ಏಕರೂಪ ಚಿಂತನೆಯ ಚರ್ಚಾ ಲಹರಿಗಳು, ವಿಚಾರ ಮಂಡನೆಗಳು ಮೂಲಭೂತವಾದದ ಬ್ಲೂ ಪ್ರಿಂಟ್‌ಗಳೇ. ಅಷ್ಟರಿಂದಲೇ ಅತ್ಯಾಚಾರಕ್ಕೊಳಗಾಗುತ್ತಿರುವ ಹೆಣ್ಣುಮಕ್ಕಳ ವಿಷಯದಲ್ಲೂ ಬಟ್ಟೆಗಳೇ ವಿಲನ್ ಪಾತ್ರ ವಹಿಸುತ್ತಿವೆಯೇ?



● ಎನ್. ಪ್ರಭಾ, ಬೇವಂಗಲ

ಹುಲಿಗಳ ಜಾಡಿನಲ್ಲಿ ಕರಡಿಯ ಕೊಲೆ




ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ಸ್ವಾತಂತ್ರ ಪೂರ್ವದಲ್ಲಿ ಚಿತ್ರದುರ್ಗ ಆಗಿನ ಮೈಸೂರು ರಾಜ್ಯದ ಉತ್ತರದ ತುದಿಯಲ್ಲಿದ್ದು, ಅದರ ಈಶಾನ್ಯ ದಿಕ್ಕಿನಲ್ಲಿ ಮದ್ರಾಸ್ ರಾಜ್ಯಕ್ಕೆ ಸೇರಿದ ಬಳ್ಳಾರಿ ಜಿಲ್ಲೆಯಿದ್ದರೆ, ವಾಯುವ್ಯ ದಿಕ್ಕಿನಲ್ಲಿ ಬೊಂಬಾಯಿ ರಾಜ್ಯಕ್ಕೆ ಸೇರಿದ ಪ್ರದೇಶವಿತ್ತು. ಹೊಳಲ್ಕೆರೆ ಈ ಜಿಲ್ಲೆಯ ಎರಡನೆಯ ದೊಡ್ಡ ಪಟ್ಟಣವಾಗಿತ್ತು, ಇದು ಬಹಳ ಹಿಂದಿನಿಂದ ನರಭಕ್ಷಕಗಳ ಆವಾಸಸ್ಥಾನವಾಗಿದ್ದು ಆಗಾಗ ಹುಲಿಗಳು ಮನುಷ್ಯರನ್ನು ಬಲಿತೆಗೆದುಕೊಂಡ ಘಟನೆಗಳ ಬಗೆಗೆ ವರದಿಯಾಗುತ್ತಿತ್ತು.

ಸುಮಾರು ವರ್ಷಗಳ ಹಿಂದೆ ಹೊಳಲ್ಕೆರೆಯ ಸುತ್ತಮುತ್ತ ಸಾಕಷ್ಟು ಜನರು ಹುಲಿಯಿಂದ ಸಾವನ್ನಪ್ಪತೊಡಗಿದಾಗ, ಮೈಸೂರು ಗೆಜೆಟ್‌ನಲ್ಲಿ ಜಾಹಿರಾತು ನೀಡುವುದರ ಮೂಲಕ ಯಾವುದೇ ಪರವಾನಗಿ ಇಲ್ಲದೆ ಈ ನರಭಕ್ಷಕ ಹುಲಿಯನ್ನು ಬೇಟೆಯಾಡುವವರಿಗೆ ಸರ್ಕಾರ ಆಹ್ವಾನ ನೀಡಿತು. ಬೆಂಗಳೂರಿನಲ್ಲಿ ನನಗೆ ಪರಿಚಯವಿದ್ದ ಸಹೃದಯಿ ದಂಪತಿಗಳಾದ ಆಂಗುಸ್ ಮಾಕ್ವೆವಿಷ್ ಮತ್ತು ಅವರ ಪತ್ನಿ ಹುಲಿಯ ಬೇಟೆಯ ಬಗೆಗೆ ಆಸಕ್ತಿ ಹೊಂದಿದ್ದರು. ನಾವು ಮೂರೂ ಜನ ಸೇರಿಕೊಂಡು ಈ ನರಭಕ್ಷಕನನ್ನು ಬೇಟೆಯಾಡುವ ಪ್ರಯತ್ನದಲ್ಲಿ ನಾಲ್ಕು ವಾರ ಸಮಯವನ್ನು ಕಳೆಯುವ ಯೋಜನೆಯನ್ನು ಅವರು ರೂಪಿಸಿದರು.





ನಾವು ಮಾರ್ಕ್ವಿಷ್ ಅವರ ಕಾರಿನಲ್ಲಿ ಜಿಲ್ಲೆಯ ರಾಜಧಾನಿಯಾಗಿದ್ದ ಚಿತ್ರದುರ್ಗಕ್ಕೆ ಬಂದು ಅಲ್ಲಿನ ಅರಣ್ಯಾಧಿಕಾರಿಯ ಬಳಿ ಹುಲಿಯ ಇತ್ತೀಚಿನ ಬಲಿಗಳ ಬಗೆಗೆ ವಿವರಗಳನ್ನು ಕೇಳಿದೆವು. ನರಭಕ್ಷಕ ಚಿತ್ರದುರ್ಗದ ಹೊರವಲಯದಿಂದ ಹಿಡಿದು ಹತ್ತು ಮೈಲು ದೂರವಿದ್ದ ಹೊಳಲ್ಕೆರೆ ಮತ್ತು ಒಂಬತ್ತು ಮೈಲು ದೂರವಿದ್ದ ಹೊಸದುರ್ಗದವರೆಗೂ ತನ್ನ ಕಾರ್ಯಕ್ಷೇತ್ರವನ್ನು ಹೊಂದಿದೆ ಎಂದು ಅವರು ಹೇಳಿದರು. ಹೊಸದುರ್ಗದಿಂದ ಪೂರ್ವದಲ್ಲಿ 5 ಮೈಲು ದೂರದಲ್ಲಿರುವ ಮಾರಿಕಣಿವೆ ಅಥವಾ ವಾಣಿವಿಲಾಸ ಎಂಬ ದೊಡ್ಡ ಕೆರೆಯವರೆಗೂ ಹುಲಿ ಬೇಟೆಯಾಡುತ್ತಿತ್ತು, ಚಿತ್ರದುರ್ಗದ ದಕ್ಷಿಣ ದಿಕ್ಕಿನಲ್ಲಿನ ಜೋಗಿಮಟ್ಟಿ ಎಂಬ ಬೆಟ್ಟಗಳ ಮೇಲಿನ ಹಳೆಯ ಕೋಟೆ ಪ್ರದೇಶದಲ್ಲಿಯೂ ಹುಲಿ ನರಬಲಿಯನ್ನು ತೆಗೆದುಕೊಂಡಿತ್ತು.

ನನಗೆ ತಿಳಿದಿದ್ದ ಪ್ರಕಾರ ಈ ಹಳೆಯ ಕೋಟೆ ಪ್ರದೇಶದಲ್ಲಿ ಕರಡಿ ಮತ್ತು ಚಿರತೆಗಳು ಆಗಾಗ ಓಡಾಡುತ್ತಿದ್ದು ಹುಲಿಗಳು ಅಪರೂಪಕ್ಕೊಮ್ಮೆ ಬರುತ್ತಿದ್ದವು. ಎಲ್ಲಾ ವಿವರಗಳನ್ನು ಪಡೆದ ನಾವು ಹೊಳಲ್ಕೆರೆ ಮತ್ತು ಹೊಸದುರ್ಗದಲ್ಲಿ ನಮ್ಮ ಕ್ಯಾಂಪ್ ಹೂಡಲು ನಿರ್ಧರಿಸಿದೆವು.

ಮರುದಿನ ಬೆಳಗ್ಗೆ ನಾವು ಹೊಳಲ್ಕೆರೆಗೆ ಹೋದಾಗ ನರಭಕ್ಷಕಗಳ ಸ್ಥಳದಲ್ಲಿ ಸಾಮಾನ್ಯವಾಗಿ ಇರುವ ಭಯಮಿಶ್ರಿತ ಉದ್ವೇಗ ಅಲ್ಲಿನ ಜನಗಳಲ್ಲಿ ಕಾಣುತ್ತಿತ್ತು, ಊರಿನವರು ಎಲ್ಲಾ ರೀತಿಯ ಕಥೆಗಳನ್ನು ಹೇಳಿದರು. ಕೆಲವು ಕಥೆಗಳಲ್ಲಿ ಮೇಲ್ನೋಟಕ್ಕೇ ವಿರೋಧಾಭಾಸಗಳು ಕಾಣುತ್ತಿದ್ದವು. ಇವುಗಳಿಂದ ನಾವು ಒಟ್ಟಾರೆ ತಿಳಿದುಕೊಂಡಿದ್ದೆಂದರೆ ಹುಲಿ ಭಾರೀ ಚಾಲಾಕಿಯಾಗಿದ್ದು, ಎಲ್ಲಾ ಕಡೆ ತಿರುಗುತ್ತಾ ಯಾರೂ ನಿರೀಕ್ಷಿಸದಿರುವ ಸ್ಥಳಗಳಲ್ಲಿ ದಿಢೀರನೆ ಕಾಣಿಸಿಕೊಳ್ಳುತ್ತಿತ್ತು, ಹೊಳಲ್ಕೆರೆ-ಹೊಸದುರ್ಗದ ರಸ್ತೆಯ ಅಕ್ಕಪಕ್ಕದಲ್ಲಿ ಲಂಟಾನ ಪೊದೆಗಳಿಂದಾವೃತವಾಗಿದ್ದ ಈಚಲುಮರಗಳ ತೋಪಿಗೆ ಹುಲಿ ಆಗಾಗ ಭೇಟಿನೀಡುತ್ತಿತ್ತು ಎನ್ನುವ ವದಂತಿ ಹೆಚ್ಚಾಗಿ ಕೇಳಿಬಂತು. ಹುಲಿಯ ಹೆಜ್ಜೆಗುರುತುಗಳು ಆ ದಾರಿಯಲ್ಲಿ ಆಗಾಗ ಕಾಣುತ್ತಿದ್ದುದರಿಂದ ನಾವು ರಾತ್ರಿಯಿಡೀ ಆ ರಸ್ತೆಯಲ್ಲಿ ಹಿಂದೆಮುಂದೆ ಸಂಚರಿಸುತ್ತಿದ್ದರೆ ಹುಲಿಯನ್ನು ಭೇಟಿಯಾಗುವ ಸಾಧ್ಯತೆ ಇದೆಯೆಂದು ಅಲ್ಲಿನ ಜನರು ನಮಗೆ ತಿಳಿಸಿದರು.

ಇದೇ ಉದ್ದೇಶದಿಂದ ನಾವು ಆ ರಾತ್ರಿ 7 ಗಂಟೆಗೆ ಹೊಳಲ್ಕೆರೆಯಿಂದ ಹೊರಟೆವು. ಒಂದೇ ಮೈಲು ದೂರದಲ್ಲಿ ಈಚಲುಮರಗಳ ಕಾಡು ಪ್ರಾರಂಭವಾಯಿತು. ಮರದ ಬುಡ ಕಾಣದಷ್ಟು ನೆಲದಲ್ಲಿ ದಟ್ಟವಾದ ಲಂಟಾನ ಪೊದೆಗಳು ಬೆಳೆದಿತ್ತು. ಇಲ್ಲಿಂದ ನಾವು ಟಾರ್ಚ್‌ನ ಬೆಳಕನ್ನು ಎಲ್ಲಾ ಕಡೆ ಹರಿಸುತ್ತಾ ಆಮೆನಡಿಗೆಯಲ್ಲಿ ಕಾರನ್ನು ಓಡಿಸಿದೆವು. ಹೀಗೆ ಅರ್ಧ ಮೈಲು ಮುಂದುವರೆದಾಗ ಹದಿನೈದು ಅಡಿ ಎತ್ತರವಿದ್ದ ಒಂದು ಈಚಲುಮರವನ್ನು ಒಬ್ಬ ಕಪ್ಪಾದ ರೋಮಭರಿತ ವ್ಯಕ್ತಿ ಹತ್ತಿಕೊಂಡು ಅಲ್ಲಿದ್ದ ಅರ್ಧ ಕಳಿತ ಹಳದಿ ಹಣ್ಣುಗಳನ್ನು ಗೊಂಚಲಿನಿಂದ ಕಿತ್ತು ತಿನ್ನುತ್ತಿರುವುದನ್ನು ನೋಡಿದೆವು.

ನಾವು ಇನ್ನೂ ಹತ್ತಿರ ಹೋಗಿ ಕಾರನ್ನು ನಿಲ್ಲಿಸಿದೆವು. ಆಗ ಆ ವಿಚಿತ್ರ ಮನುಷ್ಯ ಮರವನ್ನು ಇಳಿಯತೊಡಗಿದ. ಅರ್ಧ ಇಳಿದ ನಂತರ ಅವನು ನಮ್ಮತ್ತ ತಿರುಗಿದಾಗ ನನ್ನ ಸಂಗಾತಿಗಳು ಆಶ್ಚರ್ಯದಿಂದ ಈ ವ್ಯಕ್ತಿಯನ್ನು ಕರಡಿ (ಸ್ಲೋತ್ ಬೇರ್) ಎಂದು ಗುರುತಿಸಿದರು! ನನಗೆ ಇದು ಕರಡಿ ಎಂದು ಮೊದಲೇ ಗೊತ್ತಿದ್ದರೂ ನನ್ನ ಸಂಗಾತಿಗಳು ತಾವಾಗಿಯೇ ತಿಳಿದುಕೊಳ್ಳಲಿ ಎಂದು ಸುಮ್ಮನಿದ್ದೆ. ಶ್ರೀಮತಿ ಮಾರ್ಕ್ವಿಷ್ ಕಾರಿನ ಒಳಗಿನಿಂದಲೇ ತಮ್ಮ ಬಂದೂಕನ್ನು ಚಲಾಯಿಸಿ ಕರಡಿಯನ್ನು ಹೊಡೆದು ಉರುಳಿಸಿದರು.

ನಾವು ಆ ರಾತ್ರಿ ಹೊಳಲ್ಕೆರೆ ಮತ್ತು ಹೊಸದುರ್ಗದ ಮಧ್ಯೆ ಮೂರು ಬಾರಿ ಸಂಚರಿಸಿದರೂ ಏನೂ ಕಾಣಲಿಲ್ಲ, ನಮ್ಮ ಕೊನೆಯ ಪ್ರಯಾಣದಲ್ಲಿ ಕತ್ತೆಕಿರುಬವೊಂದು ಕರಡಿಯ ಶವದ ಹತ್ತಿರ ಸುಳಿಯುತ್ತಿದ್ದುದನ್ನು ನೋಡಿ, ಹೀಗೆಯೇ ಬಿಟ್ಟರೆ ಅದು ಕರಡಿಯನ್ನು ಮುಗಿಸಿಬಿಡಬಹುದೆಂದು ಕಷ್ಟದಿಂದ ಶವವನ್ನು ಮ್ಯಾಕ್‌ನ ಕಾರಿಗೆ ಹಾಕಿಕೊಂಡು ಹೊರಟೆವು.

ನರಭಕ್ಷಕನ ಅವಾಂತರಗಳು

ಬೆಳಗ್ಗೆ ಶ್ರೀಮತಿ ಮ್ಯಾಕ್ವಿಷ್ ತಯಾರಿಸಿದ ತಿಂಡಿಯನ್ನು ತಿಂದು ಕರಡಿಯ ಚರ್ಮವನ್ನು ಬಿಡಿಸಿಟ್ಟು, ಹೊಸದುರ್ಗಕ್ಕೆ ಹೋಗಿ ಇತ್ತೀಚಿನ ಎರಡು ನರಬಲಿಗಳ ಬಗೆಗೆ ಮಾಹಿತಿ ಪಡೆಯಲು ನಿರ್ಧರಿಸಿದೆವು. ದಾರಿಯಲ್ಲಿ ನಮಗೆ ಹಗಲಿನ ಬೆಳಕಿನಲ್ಲಿ ಲಂಟಾನ ಪೊದೆಗಳ ದಟ್ಟತೆಯನ್ನು ಕಂಡು ಅಂತಹ ಸ್ಥಳದಲ್ಲಿ ಹುಲಿಯನ್ನು ನೋಡುವ ಅಥವಾ ಬೇಟೆಯಾಡುವುದು ಅಸಾಧ್ಯವೆನ್ನುವುದು ಅರಿವಾಯಿತು.

ಹೊಸದುರ್ಗದಲ್ಲಿ ದೊರೆತ ಮಾಹಿತಿಗಳ ಪ್ರಕಾರ ಮೂರು ವಾರಗಳ ಹಿಂದೆ ಅಲ್ಲಿನ ಹಳ್ಳಿಯ ಹೊರವಲಯದಲ್ಲಿದ್ದ ಮನೆಯ ಹತ್ತಿರದಿಂದ 11 ವರ್ಷದ ಬಾಲಕಿಯನ್ನು ಹುಲಿ ಹೊತ್ತೊಯ್ದಿತ್ತು, ರಾತ್ರಿ 8 ಗಂಟೆಗೆ ಮನೆಯಿಂದ ಹೊರಬಂದಿದ್ದ ಹುಡುಗಿ ಕಾಣೆಯಾಗಿದ್ದಳು. ಆ ಬಾಲಕಿಯ ಪೋಷಕರು ಹಳ್ಳಿಯ ಸುಮಾರು 50 ಜನರನ್ನು ಒಟ್ಟುಗೂಡಿಸಿಕೊಂಡು ಕತ್ತಿ ಕೊಡಲಿ ಬಂದೂಕುಗಳನ್ನು ಹಿಡಿದು ಹುಡುಕಲು ಹೊರಟರು. ಆ ರಾತ್ರಿಯ ಪ್ರಯತ್ನ ವಿಫಲವಾದಾಗ ಮರುದಿನ ಬೆಳಗ್ಗೆ ಮತ್ತೆ ಹುಡುಕಾಟ ಮುಂದುವರೆಸಿದರು. ಸುಮಾರು ಅರ್ಧ ಮೈಲು ದೂರದಲ್ಲಿ ಮುಳ್ಳಿನಲ್ಲಿ ಸಿಕ್ಕಿಕೊಂಡಿದ್ದ ಹರಿದ ಹುಡುಗಿಯ ಒಳ ಉಡುಪುಗಳ ಹೊರತಾಗಿ ಇನ್ನೇನು ಕಂಡುಬರಲಿಲ್ಲ.

ಎರಡನೆಯ ಬಲಿ ಮಾರಿಕಣಿವೆಯ ಹತ್ತಿರದ ಹಳ್ಳವೊಂದರ ಬಳಿ ನಡೆದಿತ್ತು, ಆ ಹಳ್ಳದಲ್ಲಿ ಸಹೋದರರಾದ ಇಬ್ಬರು ದೋಬಿಗಳು ತಮ್ಮ ಬಟ್ಟೆ ತೊಳೆಯುವ ವೃತ್ತಿಯನ್ನು ನಡೆಸುತ್ತಿದ್ದರು. ಬಟ್ಟೆಯನ್ನು ಹೊತ್ತೊಯ್ಯಲು ಅವರ ಬಳಿ ಮೂರು ಕತ್ತೆಗಳಿದ್ದವು. ಹತ್ತು ದಿನಗಳ ಹಿಂದೆ ಸಂಜೆ 5 ಗಂಟೆಯ ಹೊತ್ತಿಗೆ ಅವರು ತಮ್ಮ ಕೆಲಸವನ್ನು ಮುಗಿಸಿ ಹಿಂತಿರುಗುತ್ತಿದ್ದರು. ಕತ್ತೆಗಳನ್ನು ಸುರಕ್ಷಿತವಾಗಿಡುವ ಉದ್ದೇಶದಿಂದ ಅವುಗಳನ್ನು ಮಧ್ಯದಲ್ಲಿಟ್ಟುಕೊಂಡು ಮುಂದೆ ಮತ್ತು ಹಿಂದೆ ಒಬ್ಬೊಬ್ಬ ಸಹೋದರರು ನಡೆದು ಹೋಗುತ್ತಿದ್ದರು. ಹೊಸದುರ್ಗಕ್ಕೆ ಒಂದು ಮೈಲು ದೂರವಿರುವಾಗ ಮರೆಯಿಂದ ಹಾರಿದ ಹುಲಿಯೊಂದು ಮುಂದೆ ಹೋಗುತ್ತಿದ್ದ ವ್ಯಕ್ತಿಯನ್ನು ಹಿಡಿದುಕೊಂಡು ಹೋಯಿತು. ಇದನ್ನು ಹಿಂದಿನಿಂದ ನೋಡಿದ ಅವನ ಸಹೋದರ ಭಯದಿಂದ ಮತ್ತೆ ಹಳ್ಳದ ಕಡೆ ಓಡಿಹೋದ.

ರಾತ್ರಿ ಎಂಟು ಗಂಟೆಯಾದರೂ ಈ ಸಹೋದರರು ಹಿಂತಿರುಗದಿದ್ದಾಗ ಅವರ ಹೆಂಡತಿಯರು ಹಳ್ಳಿಯಲ್ಲಿ ಸುದ್ದಿಯನ್ನು ಹರಡಿದರು. ಹತ್ತು ಗಂಟೆಗೆ ಅವರನ್ನು ಹುಡುಕಲು ಗುಂಪೊಂದು ಹೊರಟಿತು.

ದಾರಿಯಲ್ಲಿ ಬಟ್ಟೆಯ ಭಾರವನ್ನು ಬೆನ್ನ ಮೇಲೆ ಇಟ್ಟುಕೊಂಡು ನಿಶ್ಚಿಂತೆಯಿಂದ ಮಲಗಿದ್ದ ಕತ್ತೆಗಳು ಅವರ ಕಣ್ಣಿಗೆ ಬಿದ್ದವು. ಅಲ್ಲಿಂದ ಮುಂದೆ ಹೋದಾಗ ಹಳ್ಳದ ಹತ್ತಿರ ಮತ್ತೊಬ್ಬ ಸಹೋದರ ಸಿಕ್ಕಿದ. ತನ್ನ ಅಣ್ಣನಿಗಾದ ದುರಂತವನ್ನು ಕಂಡು ಅವನು ಭಯದಿಂದ ಎಚ್ಚರ ತಪ್ಪುವ ಸ್ಥಿತಿಯಲ್ಲಿದ್ದ. ಅವನ ಬಾಯಿಯಲ್ಲಿ ನೊರೆಬರುತ್ತಿದ್ದು ಕಣ್ಣುಗುಡ್ಡೆಗಳು ಮೇ... ...ಗಿದ್ದವು. ಸುಮಾರು ಒಂದು ಗಂಟೆಯ ನಂತರ ಅವನು ತನ್ನ ಸಹೋದರನಿಗೆ ಏನಾಯಿತೆಂಬುದನ್ನು ಮೆಲುದನಿಯಲ್ಲಿ ತಿಳಿಸಿದ. ಆ ರಾತ್ರಿಯಲ್ಲಿ ಅವ... ಹುಲಿ ಎತ್ತಿಕೊಂಡುಹೋದ ವ್ಯಕ್ತಿಯನ್ನು ಹುಡುಕಲಾಗಲಿಲ್ಲ.

ಮರುದಿನ ಬೆಳಗ್ಗೆ ಮತ್ತೆ ಹರಿದ ಬಟ್ಟೆಗಳು ಮತ್ತು ರಕ್ತದ ಜಾಡ... ಹಿಡಿದು ಹುಡುಕಾಟ ನಡೆಸಿದಾಗ ಆ ವ್ಯಕ್ತಿಯ ಶವ ದೊರಕಿತು. ಹುಲಿಯ... ಶವದ ಮುಕ್ಕಾಲು ಭಾಗವನ್ನು ಆಗಲೇ ತಿಂದು ಮುಗಿಸಿತ್ತು, ಸಿ... ಅವಶೇಷಗಳನ್ನು ತಂದು ಶವಸಂಸ್ಕಾರವನ್ನು ಮಾಡಲಾಯಿತು.

ಅಲ್ಲಿ ಇನ್ನೊಂದು ಘಟನೆಯ ವಿವರಗಳು ಕೂಡ ದೊರೆಯಿತು. ನಾ... ದಿನದ ಹಿಂದೆ ಹೊಸದುರ್ಗದ ಕಡೆ ಹೊರಟಿದ್ದ ಎತ್ತಿನ ಗಾಡಿಯೊಂ... ಮೇಲೆ ಮಧ್ಯಾಹ್ನ ಮೂರು ಗಂಟೆಯ ಹೊತ್ತಿನಲ್ಲಿ ಹುಲಿ ಆಕ್ರಮಣ ಮಾಡಿ... ಗಾಡಿಯನ್ನು ಓಡಿಸುತ್ತಿದ್ದವನು ಅದರಿಂದ ಹಾರಿ ಬಳಸು ದಾರಿಯಲ್ಲಿ ಹ... ಹಿಂತಿರುಗಿದ್ದನು. ಮರುದಿನ ಜನರು ಗಾಡಿಯನ್ನು ಹುಡುಕಿಕೊಂಡು ಹೋದ... ಒಂದು ಎತ್ತು ಮಾತ್ರ ಅದೇ ಜಾಗದಲ್ಲಿ ನೊಗವನ್ನು ಕಳಚಿಕೊಳ್ಳದೆ ನಿ... ಇತ್ತು, ಹುಲಿ ಇನ್ನೊಂದು ಎತ್ತನ್ನು ಅಲ್ಲಿಂದ ಹತ್ತು ಗಜ ದೂರ ಎಳೆದುಕೊಂ... ಹೋಗಿ ತಿಂದು ಮುಗಿಸಿತ್ತು.

ಉತ್ಸಾಹೀ ಯುವ ಬೇಟೆಗಾರರು

ನಮಗೆ ದೊರೆತ ಇನ್ನೊಂದು ಮಾಹಿತಿಯೆಂದರೆ ಐದು ದಿನಗಳ ಹಿ... ಬಂದಿದ್ದ ಇಬ್ಬರು ಬೇಟೆಗಾರರು ಹೊಸದುರ್ಗದ ಪ್ರವಾಸಿಮಂದಿರದಲ್ಲಿ ತಂಗಿ... ಎನ್ನುವುದು. ಇದನ್ನು ಕೇಳಿದ ಮೇಲೆ ನಮ್ಮ ಬೇಟೆಯ ಉತ್ಸಾಹ ... ತಗ್ಗಿತು. ಏಕೆಂದರೆ ನಮಗಿಂತ ಮೊದಲು ಬಂದವರನ್ನು ಕಡೆಗಣಿಸಿ ನಾ... ಬೇಟೆಯಾಡುವುದು ಉತ್ತಮ ಕ್ರೀಡಾಮನೋಭಾವವಾಗಿರಲಿಲ್ಲ, ಅಷ್ಟೇ ಅ... ಬಹಳಷ್ಟು ಬೇಟೆಗಾರರು ಒಂದೇ ಪ್ರಾಣಿಯ ಹಿಂದೆ ಬಿದ್ದಾಗ ಅದ... ಹೆದರಿಸಿ ಓಡಿಸುವ ಸಾಧ್ಯತೆಗಳೇ ಹೆಚ್ಚು ಮತ್ತು ಆಕಸ್ಮಿಕವಾಗಿ ಒಬ್ಬರ ಮ... ಇನ್ನೊಬ್ಬರು ಗುಂಡು ಹಾರಿಸುವ ಅಪಾಯವೂ ಇರುತ್ತದೆ.

ಈ ಎಲ್ಲಾ ವಿಷಯಗಳನ್ನು ನಾವು ಚರ್ಚಿಸುತ್ತಿರುವಾಗ ಆ ಇ... ಹೊಸ ಬೇಟೆಗಾರರು ಅಲ್ಲಿಗೆ ಬಂದರು. ಯುವಕರಾಗಿದ್ದ ಅವ... ಅನನುಭವಿಗಳಾಗಿದ್ದರೂ ಬೇಟೆಯಾಡುವ ಬಗೆಗೆ ತೀವ್ರ ಉತ್ಸಾಹ ಹೊಂದಿದ... ದೋಬಿಯು ಸಾವಿಗೀಡಾದ ಸ್ಥಳದಲ್ಲಿ ತಾವು ಒಂದು ಎರಡು ದಿನದ... ಎಮ್ಮೆಯನ್ನು ಬಲಿಯಾಗಿ ಕಟ್ಟಿದ್ದೇವೆ ಎಂದು ಅವರು ಹೇಳಿದರು. ಅ... ದಾರಿಗೆ ಅಡ್ಡಬರಬಾರದೆಂಬ ಉದ್ದೇಶದಿಂದ ನಾವು ಅವರಿಗೆ ಶುಭ ಹಾ... ಹೊಳಲ್ಕೆರೆಗೆ ಹೊರಡಲು ಸಿದ್ಧರಾದೆವು. ಆದರೆ ಅವರು, ತಾವು ಮರು... ಬೆಳಗ್ಗೆ ತಮ್ಮ ಊರಾದ ಬಳ್ಳಾ... ಹಿಂತಿರುಗುವುದಾಗಿಯೂ ಮತ್ತು ಅಲ್ಲಿಯವರೆಗೆ ತ... ಜೊತೆ ಹೊಸದುರ್ಗದ ಪ್ರವಾಸಿ ಬಂಗಲೆಯ... ಕಳೆಯಬೇಕೆಂದು ಒತ್ತಾಯಿಸಿದರು.

ಈ ರೀತಿಯ ಸ್ನೇಹದ ಮಾತುಕತೆಗಳಾಗುತ್ತಿರು... ಅವರು ಬಲಿಗಾಗಿ ಕಟ್ಟಿದ್ದ ಎಮ್ಮೆಯನ್ನು ಹಿ... ರಾತ್ರಿ ಹುಲಿ ಕೊಂದು ಅರ್ಧಭಾಗವನ್ನು ತಿಂದಿ... ಸಮಾಚಾರ ಬಂದಿತು. ಬಹಳ ಸಹೃದಯಿಗಳಾ... ಆ ಯುವಕರು ಬಲಿ ಎಮ್ಮೆಯ ಬಳಿ ನಾವು ಕು... ಬೇಟೆಯಾಡಬೇಕೆಂದು ನಮ್ಮನ್ನು ಕೇಳಿಕೊಂಡರು. ... ನಾವು ಸಮ್ಮತಿಸಲಿಲ್ಲ.

ಊಟ ಮಾಡಿದನಂತರ ನಾವು ಎಮ್ಮೆಯ ಶ... ಜಾಗಕ್ಕೆ ಹೊರಟೆವು. ಅಲ್ಲಿ ಬಂಡೆಗಳು ಹರಡಿಕೊಂ... ಬಲಿಪಶುವನ್ನು ಕಟ್ಟಲು ಅವರು ಸೂಕ್ತ ಜಾಗ... ಆರಿಸಿಕೊಂಡಿರಲಿಲ್ಲ, ಅದೂಅಲ್ಲದೆ ಬಲಿಯ... ಸರಿಯಾಗಿ ಕಟ್ಟದ ಕಾರಣ ಹುಲಿ ಅದನ್ನು ಬಂಡೆಯ ಹಿಂದೆ ಎಳೆದುಕೊ... ಹೋಗಿತ್ತು. ಹಾಗಾಗಿ ಅವರು ಮಚಾನು ನಿರ್ಮಿಸಬೇಕೆಂದಿದ್ದ ಮರ... ಶವ ಕಾಣುತ್ತಲೇ ಇರಲಿಲ್ಲ.

ಹುಲಿ ಶವವಿದ್ದ ಸ್ಥಳಕ್ಕೆ ಮತ್ತೆ ಬರಲು ನಿರ್ಧರಿಸಿದರೆ ಅದಕ್ಕೆ ಎ... ದಾರಿಗಳಿದ್ದವು. ಈ ಎರಡು ದಾರಿಗಳು ಮತ್ತು ಎಮ್ಮೆಯ ಶವ-ಎ... ಕಾಣುವಂತಹ ಸ್ಥಳದಲ್ಲಿ ಎರಡು ಬಂಡೆಗಳಿದ್ದವು. ಹಾಗಾಗಿ ಆ ... ಬೇಟೆಗಾರರು ಒಬ್ಬೊಬ್ಬರು ಒಂದೊಂದು ಬಂಡೆಯ ಹಿಂದೆ ಕುಳಿತುಕೊ... ನಿರ್ಧರಿಸಿದರು. ಈ ಹುಲಿಯೇ ನರಭಕ್ಷಕನಾಗಿದ್ದರೆ ಬಂಡೆಯ ... ಕುಳಿತುಕೊಳ್ಳುವುದು ಭಾರಿ ಅಪಾಯಕಾರಿಯಾಗುವ ಸಾಧ್ಯತೆ ಇತ್ತು, ಹಾ... ನಾನು ಆ ಬೇಟೆಗಾರರಿಗೆ ಬಂಡೆಯ ಮೇಲೆ ಮುಳ್ಳಿನ ಮರೆಯನ್ನು ಮಾಡಿಕೊ... ಕುಳಿತುಕೊಳ್ಳಲು ಸಲಹೆ ನೀಡಿದೆ. ಇದಕ್ಕೆ ಒಪ್ಪಿದ ಅವರು ಬಂಡೆಗೆ ... ಮಾಡಿಕೊಂಡು ನೆಲದ ಮೇಲೆ ಕುಳಿತು ಹುಲಿಗಾಗಿ ಕಾಯಲು ನಿರ್ಧರಿ...

ಬಂಡೆಯ ಹಿಂದೆ ಸ್ವಲ್ಪ ಮುಳ್ಳಿನ ಮರೆಮಾಡಿ ಸಂಜೆ 4 ಗಂ... ಹೊತ್ತಿಗೆ ನಾವು ಹಿಂತಿರುಗಿದೆವು. ಆ ಯುವಕರ ಸುರಕ್ಷತೆಯ ಬಗೆಗೆ ... ತೀವ್ರ ಆತಂಕವಿತ್ತು, ಆದ್ದರಿಂದ ಅವರ ಅಪಾಯದ ಕರೆ ಕೇಳುವಷ್ಟು ದೂ... ಕಾಯುತ್ತಾ ಕುಳಿತಿರಲು ಬಯಸಿದ್ದೆ. ಆದರೆ ನನ್ನ ಹಾಜರಿಯಿಂದ ... ಬರದೆ ಹೋಗಬಹುದು ಮತ್ತು ಆ ಯುವಕರು ನನ್ನ ಉದ್ದೇಶಗಳ ... ಅನುಮಾನಪಡಬಹುದು ಎನ್ನುವ ಕಾರಣಕ್ಕಾಗಿ ಹೊಸದುರ್ಗದ ಪ... ಬಂಗಲೆಗೆ ಹಿಂತಿರುಗಿದೆ. ಆದರೆ ನಮ್ಮ ಶುಭ ಹಾರೈಕೆಗಳು ಆ ಇ... ಒಬ್ಬ ಯುವಕನ ಜೊತೆ ನಮ್ಮ ಕೊನೆಯ ಮಾತುಕತೆಯಾಗಬಹುದು ... ಕಲ್ಪನೆ ನಮಗೆ ಆ ಕ್ಷಣದಲ್ಲಿ ತಿಳಿದಿರಲಿಲ್ಲ.

ಆ ಸಂಜೆ ನಾವು ಹಳ್ಳಿಯವರಿಂದ ಹೆಚ್ಚಿನ ಮಾಹಿತಿ ಸಂಗ್ರಹಿ... ಪ್ರವಾಸಿ ಬಂಗಲೆಯಲ್ಲಿ ಕಳೆದೆವು. ಆ ಯುವಕರು ಬೇಟೆಗೆ ಕುಳಿತಿ... ಒಂದು ಮೈಲು ದೂರವಿದ್ದು ಅದರ ವಿರುದ್ಧ ದಿಕ್ಕಿನಲ್ಲಿ ಗಾಳಿ ಬೀಸುತ್ತಿದ್ದು... ಅವರ ಗುಂಡಿನ ಸದ್ದು ಕೇಳುವ ಸಾಧ್ಯತೆಗಳಿರಲಿಲ್ಲ. ಊಟವಾದ ... ನಾನು ಬಂಗಲೆಯ ಜಗುಲಿಯಲ್ಲಿ ಮಾಮೂಲಿನಂತೆ ಕಾಡಿನ ಸ... ಆಲಿಸುತ್ತಾ ಕುಳಿತೆ.

(ಮುಂದುವರೆಯು...



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಗೊಂಡಿಯರ ಸಂಭೂ ಶೇಖರ ಶಂಭೋ ಶಂಕರನಾದ ಕಥೆ

ಗೊಂಡ್ವಾನ ಸಂಸ್ಕೃತಿ ಅಥವಾ ಸಿಂಧೂ ...ತಿಯೆಂದು ಕರೆಯಲಾಗುವ ಕೃತಿಯೊಂದನ್ನು ಆರ್.ಹಂಪನಗೌಡ ಸಂಪಾದಿಸಿದ್ದಾರೆ. ಆದರಲ್ಲಿ ಕೆಲವು ಕುತೂಹಲಕರವಾದ ಅಂಶಗಳು ಶಿವನ ಬಗ್ಗೆ ಬೆಳಕು ...ತ್ತವೆ.

...ಧು ಕೊಳ್ಳದ ಸಂಸ್ಕೃತಿಯನ್ನು ಹರಪ್ಪೀಯ ಸಂಸ್ಕೃತಿ ... ಗುರುತಿಸಲಾಗುವುದು. ಕ್ರಿ.ಪೂ. 2500 ರಿಂದ ... 1800ರವರೆಗೆ ಇದರ ಅವಧಿಯೆಂದು ...ಲಾಗಿದೆ. ಇದು ವಿಶ್ವದ ಪ್ರಾಚೀನ ನಾಗರಿಕತೆಯ ...ತಿಕ ನೆಲೆಗಳಲ್ಲಿ ಒಂದು. ಇದನ್ನು ಆರ್ಯಪೂರ್ವ ... ಶೋಧಿಸಲಾಗಿದೆ. ಬಹುಸಂಖ್ಯಾತರು ಇದನ್ನು ...ದ ಸಂಸ್ಕೃತಿಯ ಮೂಲ ಸಂಸ್ಕೃತಿ ಎಂದು ಹೇಳುವರು. ... ಮೂಲಿಗರು ನಾಗವಂಶಿಗಳು, ಪಶುಪತಿ ಆರಾಧಕರು ... ದ್ರಾವಿಡ ಭಾಷಿಗ ಗೊಂಡರು ಎಂಬುದು ಗೊಂಡಿ ...ದರ್ಶಕ ಮೋತಿರಾವಣ ಕಂಗಾಲಿಯವರ ವಾದ.

...ರ್ಯರ ಆಕ್ರಮಣದ ಪರಿಣಾಮ

...ರ್ಯರ ಆಕ್ರಮಣದ ನಂತರ ಸಿಂಧುಕೊಳ್ಳದ ...ರು ದೇಶಾಂತರವಾದರು. ಬಹುಸಂಖ್ಯಾತರು ಮಧ್ಯ ... ದಕ್ಷಿಣ ಭಾರತಕ್ಕೆ ತಳ್ಳಲ್ಪಟ್ಟು ಕಾಲಾಂತರದಲ್ಲಿ ...ದಾ, ಗೋದಾವರಿ, ಕೃಷ್ಣಾ, ತುಂಗಭದ್ರಾ, ಕಾವೇರಿ ...ದಿ ನದಿ ಜಲಾನಯನ ಪ್ರದೇಶಗಳಲ್ಲಿ ...ಲಾರಂಭಿಸಿದರು. ಸಿಂಧು ಕೊಳ್ಳದ ಸಿಂಧರು ...ಂತರದಲ್ಲಿ ಸಿಂಧರು ಮತ್ತು ಸೇಂದ್ರಕರಾಗಿ ...ನೆಗೊಂಡು ಸಿಂಧರು ಗ್ವಾಲಿಯರ್ ಪ್ರದೇಶದ ಕಾಲಿ ...ದಲ್ಲಿ ಮತ್ತು ಸೇಂದ್ರಕರು ಮಧ್ಯಭಾರತದ ಮತ್ತು ...ಭಾರತದಲ್ಲಿ ರಾಜಕೀಯ ಸ್ಥಾಪಿಸಿದ ಮನೆತನಗಳು ...ಗುವುದೆಂದು ವಿಶ್ರಾಂತ ಕುಲಪತಿ ಡಾ. ಹೀರಾಲಾಲ್ ...ಜಿವರು ಹೇಳುವುದರಲ್ಲಿ ಹುರುಳಿದೆ. ಸಾಕ್ಷಿಯಾಗಿ ...(ಬಾಗಲಕೋಟೆ)ಯ ಸಿಂಧರು, ಯಲಬುರ್ಗಿಯ ...ರು, ಬೆಳಗುತ್ತಿ(ಕರಹಾಟ)ಯ ಸಿಂಧರು, ...ಲ(ಬೀದರ ಜಿಲ್ಲೆ)ದ ಸಿಂಧರು, ಮುಳಗುಂದ(ಗದಗ ... ಸಿಂಧರು, ಪ್ರತ್ಯೆಂಡ್ರಕ(ಹಿಂದಿನ ಮಹಾರಾಷ್ಟ್ರದ ... ರಾಜ್ಯ)ದ ಸಿಂಧರು, ಚಕ್ರಕೂಟ(ಪ್ರಾಚೀನ ಆಂಧ್ರ ...)ದ ಸಿಂಧರು, ಕೋಗಳೀನಾಡಿನ (ಬಳ್ಳಾರಿ ಜಿಲ್ಲೆ) ...ರು, ಗುತ್ತಿ(ಇಂದಿನ ಆಂಧ್ರಪ್ರದೇಶದ ಅನಂತಪುರ ...ಮ ತಾಲೂಕು ಕೇಂದ್ರ)ಯ ಸಿಂಧರು ಮತ್ತು ...ೋಡು (ಬಳ್ಳಾರಿ ಜಿಲ್ಲೆ) ಸಿಂಧರು. ಈ ಮನೆತನಗಳು ...ಪ್ರದೇಶ, ಛತ್ತೀಸಗಡ, ಒಡಿಸ್ಸಾ, ಆಂಧ್ರಪ್ರದೇಶ, ...ರಾಷ್ಟ್ರ, ಕರ್ನಾಟಕ ಇತ್ಯಾದಿ ನಿದರ್ಶನಗಳಿಗಳಿವೆ. ... ಅಥವಾ ಅವರ ಕಳ್ಳುಬಳ್ಳಿಯ ವಿವಿಧ ಮನೆತನಗಳು ...ಪ್ರದೇಶವನ್ನು ಆಳಿರುವ ಹಿನ್ನೆಲೆಯಲ್ಲಿ ನಾಗ, ಸಿಂಧ, ...ಸ ಹೆಸರಿನ ಸ್ಥಳನಾಮಗಳು ಈ ಪ್ರದೇಶದಲ್ಲಿ ...ವಾಗಿ ಕಾಣಸಿಗುವವು. ಈ ನಾಗ

ಗೊಂಡರು ಇಂದು ...ಟಕದಲ್ಲಿ ಗೊಂಡ, ಲಾಳಗೊಂಡ, ... ಕುಡಿಒಕ್ಕಲಿಗ, ಆದಿಬಣಜಿಗ, ...ಂಬ ಇತ್ಯಾದಿ ಹೆಸರುಗಳಿಂದ ...ತಿಸಲ್ಪಡುವವರು. ಇವರೆಲ್ಲರ ...ಮಹಾಲಿಂಗ, ಇದರ ಮೂಲ ...ಪಿ ಸಿಂಧುಕೊಳ್ಳದಿಂದ ...ಭಾರತಕ್ಕೆ ತಳ್ಳಲ್ಪಟ್ಟ ಆದಿವಾಸಿ ...ರು ಪಶುಪತಿ (ಫೆರಸಾಪೆನ್) ... ದೈವವನ್ನು ಪ್ರಾಕೃತಿಕವಾಗಿ ...ಸುವರು.

...ಂಡ್ವಾನ ಮಹಾದ್ವೀಪದ ...ಸವು ಬಹಳ ಪುರಾತನವಾದದ್ದು, ಇಂದಿಗೆ ಸುಮಾರು ...ವಿರ ವರ್ಷ ಪೂರ್ವದಲ್ಲಿ ಭರತವರ್ಷದಲ್ಲಿ ಗೊಂಡಿ ... ಪ್ರಭಾವಯುತವಾಗಿತ್ತು, ಆದ್ದರಿಂದ ಭಾರತಕ್ಕೆ ...ವರಾಷ್ಟ್ರ' ಅಥವಾ 'ಗೊಂಡ ರಾಷ್ಟ್ರ'ವೆಂದು ...ರಾಗುತ್ತಿತ್ತು ಎಂದು ಋಗ್ವೇದದಲ್ಲಿ ಇದೆಯೆಂದು ...ಗುತ್ತದೆ.

...ರತಕ್ಕೆ ಬಂದ ಆರ್ಯರು ಆಗ ಅಸ್ತಿತ್ವದಲ್ಲಿದ್ದ ... ಭಾಷೆಯ ಶಬ್ದಗಳನ್ನು ತಮ್ಮ ಸಂಸ್ಕೃತ ಭಾಷೆಗೆ ...ಕೊಂಡರು. ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಾದ ... ಡೀವ್ಸ್, ಹರ್ನಲ್ ಮತ್ತು ಗ್ರೀಯರ್ ಸನ್‌ರ ...ಯಂತೆ ಪ್ರಕಾರ ಪ್ರಾಚೀನವಾದದ್ದು ಪ್ರಾಕೃತ, ಉಳಿದವು ...ಸಿ ಭಾಷೆಗಳು. ಇವುಗಳಲ್ಲಿ ಗೊಂಡಿ ಭಾಷೆಯೂ ...ದೆ.

...ಧು ಬಯಲಿನ ಹರಪ್ಪ, ಮೊಹೆಂಜದಾರೋ ...ನ ಉತ್ಖನನದಲ್ಲಿ ಇದ್ದ ಚಿತ್ರಲಿಪಿಯನ್ನು ಗೊಂಡರು ಇಂದಿಗೂ ಬಳಸುತ್ತಿದ್ದು ಇದನ್ನು ಗೊಂಡಿ ಭಾಷೆಯ ಮೂಲಕವೇ ಓದಲು ಸಾಧ್ಯವಾಗಿದೆ. ಪ್ರಾಯಶಃ ಈ ಚಿತ್ರಲಿಪಿಯೇ ಮನುಕುಲದ ಮೊದಲ ಲಿಪಿ.

ಗೊಂಡರ ಪೌರಾಣಿಕ ಐತಿಹ್ಯದ ಗೋತ್ರಗಳು

ಗೊಂಡರ ಪೌರಾಣಿಕ ಐತಿಹ್ಯದ ಪ್ರಕಾರ 88 ಸಂಭೂ (ಶಂಭು) ಗಳಿದ್ದು, ಅವರಲ್ಲಿ 44ನೇ ಶಂಭೂವಿನ ಶಿಷ್ಯನಾದ ಕುಪಾರ ಲಿಂಗೋನು, ಕಾಳಿಕಂಕಾಳಿ ಹಾಗೂ ಸುಖಾಶ್ರಯರ 33 ಕೋಟಿ (ಗರ್ಭಸ್ಥ) ಮಕ್ಕಳನ್ನು ಕೊಯ್ಲಿ ಕಛಾರಗಢ ಗುಹೆಯಿಂದ ಬಂಧನದಲ್ಲಿದ್ದವರನ್ನು ಬಿಡಿಸಿ, ಲಾಂಜಿಕೋಟ್‌ನಲ್ಲಿ ಗೋತ್ರ, ದೇವತೆಗಳ ಗುಂಪುಗಳಾಗಿ



ವಿಂಗಡಿಸಿದನು. ಹೀಗೆ ವಿವರಿಸುವ ಆ ಗೋತ್ರ ವ್ಯವಸ್ಥೆಯ ವೃಕ್ಷದಲ್ಲಿ ಅವುಗಳು ಹೇಗೆ ಗೋತ್ರಗಳಾಗಿ ಮುಂದುವರಿದವು ಎಂದು ವರ್ಣಿಸುತ್ತಾರೆ. ಮೂವತ್ತಮೂರು ಕೋಟಿ ದೇವತೆಗಳ ವಿಷಯವು ಇಲ್ಲಿಯೂ ಪ್ರಸ್ತಾಪವಾಗುವುದನ್ನು ಕಂಡರೆ, ಬಹುಶಃ ಗೊಂಡರ ಪುರಾಣ ರಚನಾಕಾರರೂ ವೈದಿಕ ಪುರಾಣದ ರಚನಾಕಾರರ ಪ್ರಭಾವಕ್ಕೆ ಒಳಗಾಗಿದ್ದಾರೇನೋ ಎಂದು ಅನ್ನಿಸಿದರೂ, ವೈದಿಕರೇ ಗೊಂಡರ ಪುರಾಣದ ಪ್ರಭಾವಕ್ಕೆ ಒಳಗಾಗಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಹೀಗೆ ವಿಭಾಗಿತವಾದ ಗೊಂಡರ 750 ಗೋತ್ರಗಳನ್ವಯ ಪ್ರತಿಯೊಂದು ಗೋತ್ರಕ್ಕೂ ತಾವು ಪಾಲನೆ, ಪೋಷಣೆ, ರಕ್ಷಣೆ ಮಾಡಬೇಕಾದ ಸಸ್ಯ ಪ್ರಾಣಿ, ಪಕ್ಷಿಗಳನ್ನು



ನಿರ್ಣಯಿಸಿ ಒಂದೊಂದು ಗೋತ್ರಕ್ಕೆ 3 ಗಣ ಚಿಹ್ನೆಗಳನ್ನು 44ನೇ ಸಂಭೂವಿನ ಶಿಷ್ಯ ಕುಪಾರ ಲಿಂಗೋ ನಿರ್ಣಯಿಸಿರುತ್ತಾನೆ. ಗೊಂಡರದು ಏಕವರ್ಣವ್ಯವಸ್ಥೆಯಾದರೆ, ಮುಂದೆ ಬಂದ ಆರ್ಯರದು ಚಾತುರ್ವರ್ಣದ ವ್ಯವಸ್ಥೆ.

ಮುಂದೆ ಗೊಂಡರ 88ನೇ ಸಂಭೂ ಶೇಖರನ ಆಳ್ವಿಕೆ ಕ್ರಿ.ಪೂ. 6000ರಲ್ಲಿ ಆರಂಭವಾಗಿ ಕ್ರಿ.ಪೂ. 3102ರಲ್ಲಿ ಮುಗಿದಿದೆ. ಸುಮಾರು ಮೂರು ಸಾವಿರ ವರ್ಷಗಳ ಅಂತರದಲ್ಲಿ, ಇದನ್ನು ಲಾಳಗೊಂಡರ ನಾಳಗೊಂಡೇಶ್ವರ ಪುರಾಣಕಾವ್ಯದ ಹಿನ್ನೆಲೆಯಲ್ಲಿ ಹೀಗೆ ವ್ಯಾಖ್ಯಾನಿಸಬಹುದು.

ನಾಳಗೊಂಡೇಶ್ವರನು ಕಲಿಯುಗದ ಆರಂಭದಲ್ಲಿದ್ದವನೆಂದೂ ಅವನ ಸಮಾಧಿಯನ್ನು ಕೇದಾರದಲ್ಲಿ ಬಾಣಾಸುರನ ಮಗಳಾದ ಶ್ರೀಕೃಷ್ಣನ ಮೊಮ್ಮಗ ಅನಿರುದ್ಧನ ಹೆಂಡತಿಯಾದ ಉಷಾದೇವಿಯು ಸ್ಥಾಪಿಸಿದ್ದಾಳೆಂದು ಹೇಳಲಾಗಿದೆ. ನಾಳಗೊಂಡೇಶನು ತನ್ನ ಅನುಯಾಯಿಗಳಿಗೆ ದಕ್ಷಿಣಕ್ಕೆ ಹೋಗಲು ನಿರ್ದೇಶಿಸಿದನು. 'ಶಾಂತಿಪ್ರಿಯರಾದ ನೀವು ಅಂದರೆ ಗೊಂಡರು ದಕ್ಷಿಣಕ್ಕೆ ಹೋದರೆ ನಿಮಗೆ ಊರ, ನಾಡಿನ ಯಜಮಾನ್ಯ ಸಿಗುತ್ತದೆ. ಇನ್ನು ಮುಂದೆ ದ್ರಾವಿಡ ಆರ್ಯ ಘರ್ಷಣೆ ಹೆಚ್ಚುತ್ತದೆ' ಎಂಬ ಮಾತಿನ ಅನ್ವಯ ಭಿಲ್ಲ, ಖೋತ, ಗೊಂಡ ಇತ್ಯಾದಿ ಬುಡಕಟ್ಟುಗಳು ದಕ್ಷಿಣಕ್ಕೆ ಚಲಿಸಿವೆ ಎನ್ನಬಹುದು. ಇದನ್ನು ಗೆಜೆಟಿಯರ್ಸ್‌ಗಳಲ್ಲಿ ಗೊಂಡರನ್ನು ರಾವಣ ವಂಶೀಯರೆಂದೂ, ಅದಕ್ಕೇ ದಕ್ಷಿಣಕ್ಕೆ ತಳ್ಳಲಾಯಿತೆಂದು ಉಲ್ಲೇಖಿಸಿದ್ದಾರೆ.

ನಾಗವಂಶಜರು

ಮಹಾಭಾರತದ ಯುದ್ಧ ಮುಗಿದು, ಕಲಿಯುಗ ಪ್ರವೇಶದ ನಂತರ (ಈಗ ಕಲಿಯುಗ-5114) ನಾಗ ವಂಶಜರು ಖಾಂಡವ ದಹನದ ನಂತರ ದಕ್ಷಿಣಕ್ಕೆ ಸ್ಥಾನಾಂತರವಾದರೆನ್ನಬಹುದು. ಏಕೆಂದರೆ, ನಾಗ ವಂಶಜರು ಮಹಾಭಾರತ ಯುದ್ಧದಲ್ಲಿ ಯಾರ ಪರ-ವಿರೋಧವನ್ನೂ ವಹಿಸಿರಲಿಲ್ಲ. ನಂತರ ಅಶ್ವಮೇಧ ಯಾಗದ ನೆಪದಲ್ಲಿ ನಾಗಲೋಕವನ್ನು ಆಕ್ರಮಿಸಲು ಹೋದಾಗ ಬಬ್ರುವಾಹನನಿಂದ ಪಾಂಡವರ ಅರ್ಜುನನ ಮುಖಭಂಗವಾಯಿತು. ನಾಗ ವಂಶಜರು ಪ್ರಾಬಲ್ಯವಿದ್ದ ನಾಡೇ ನಾಗರಖಂಡ, ನಾಗಲೋಕ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿರಬಹುದು ಎಂದು ತಮ್ಮ ಹೈಪೋಥಿಸಿಸ್‌ನ ಪ್ರಕಾರ ಹೇಳುತ್ತಾರೆ.

ಇಂದಿಗೂ ಗೊಂಡರು ಸಂಭೂವನ್ನು ನಾಗ ವಂಶದವನೆಂದು ಕರೆಯುತ್ತಾರೆ. ಅವನ ಟೋಟಮ್ ಅಥವಾ ಪಶು ಸಂಕೇತ ನಾಗ. ಸಪ್ತ ನಾಗದೇವತೆಯ ದೇವಸ್ಥಾನಗಳು ಕರ್ನಾಟಕದಲ್ಲಿ ವಿಶೇಷವಾಗಿವೆ. ಹಾಗಾಗಿಯೇ ಶಿವನೂ ನಾಗಧಾರಿಯಾಗಿಯೇ ಕಾಣಿಸಿಕೊಳ್ಳುತ್ತಾನೆ. ದಕ್ಷಿಣಭಾರತದ ಬಹುಸಂಖ್ಯಾತ ರಾಜವಂಶಜರು ತಾವು ನಾಗವಂಶಜರೆಂದೂ, ಫಣೀಂದ್ರ ವಂಶಜರೆಂದೂ ಹೇಳಿಕೊಳ್ಳುತ್ತಾ, ತಮ್ಮ ಮೂಲವನ್ನು ಕಾಳಂಜಪುರಕ್ಕೆ, ಅಹಿಚ್ಛತ್ರಪುರಕ್ಕೆ ಜೋಡಿಸಿಕೊಳ್ಳುತ್ತಾರೆ. ಈ ಅಹಿಚ್ಛತ್ರಪುರವು ಹಸ್ತಿನಾವತಿಯ ಹತ್ತಿರದ ಉತ್ತರಪ್ರದೇಶದ ಬರೇಲಿ ಜಿಲ್ಲೆಯಲ್ಲಿದೆ. ರಾಯಬರೇಲಿ ಅಲ್ಲ.

ಇವರು ಇನ್ನೂ ಮುಂದುವರೆದು ಹಲವು ದೇವತೆಗಳನ್ನು ತಮ್ಮ ಗೊಂಡ ಸಂಸ್ಕೃತಿಯ ಗೋತ್ರಕ್ಕೇ ಕೂಡಿಸುತ್ತಾರೆ.

ಹನುಮಂತ ಗೊಂಡರ ಮುಂಜಾಲ್ ಗೋತ್ರದವನಾದರೆ, ಗಣೇಶನು ಗಜೇಶನೆಂದು ಕರೆಯಲ್ಪಟ್ಟವನು ದೇವತೆಗಳ ಮತ್ತು ದಾನವರ ಸಂಯುಕ್ತ ಸೇನಾಧಿಪತಿ ಎನ್ನುತ್ತಾರೆ. ಮೂಷಕ ಗೋತ್ರ ಚಿಹ್ನೆಯವರನ್ನು ಸೋಲಿಸಿ, ತನ್ನ ಅಡಿಯಾಳಾಗಿ ಮಾಡಿಕೊಂಡವ. ದಕ್ಷಿಣ ಕನ್ನಡದ ಗೊಂಡರು ಇಂದಿಗೂ ಆನೆ ಮುಖವಾಡ ಧರಿಸಿ ನೃತ್ಯ ಮಾಡುವರು. ಮಹಿಷಾಸುರನೂ ಇದೇ ನಾಗವಂಶದವನಾಗಿದ್ದು, ಕೋಣದ ಗೋತ್ರದವನು. ಬಲಿ ಚಕ್ರವರ್ತಿಯು ಬಲಿಜ ಅಥವಾ ಆದಿ ಬಣಜಿಗರ ಮೂಲಿಗ. ಇವನೂ ನಾಗರ ಖಂಡೆಯವನು. ಕೇರಳ ಹಾಗೂ ಕರಾವಳಿಯಲ್ಲಿ ಇವನನ್ನು ಆರಾಧಿಸುತ್ತಾರೆ.

ದಕ್ಷನ ಅಹಂಕಾರ ಹಾಗೂ ದ್ರಾವಿಡರ ಅವಹೇಳನದ ಫಲವಾಗಿ ಸಂಭೂ ಶೇಖರನ ಶಿಷ್ಯರಿಂದ ಅವನ ತಲೆ ಕತ್ತರಿಸಲ್ಪಟ್ಟು ನಂತರ ಸಂಭೂ ಶೇಖರ ಕುರಿತಲೆ ನೀಡಿದ್ದು ಆ ಗೋತ್ರವನ್ನು ವಿಧೇಯಗೊಳಿಸಿದರ ಸಂಕೇತ.

ಗೊಂಡಿ ಭಾಷೆಯಲ್ಲಿ ನೀಲಕಂಠ ಪಕ್ಷಿಯನ್ನು ರಾವೇನ ಅಥವಾ ರಾವಣ ಎಂದು ಕರೆಯಲಾಗುವುದು. ಇವನು ಗಢಮಂಡಲದ ಅಧಿಪತಿಯಾಗಿದ್ದು, ಉತ್ತರ ಭಾರತದಲ್ಲಿ ರಾವಣನ ಗೋತ್ರಜರಿಂದ ಇತ್ತೀಚೆಗೆ ರಾಜಸ್ಥಾನದಲ್ಲಿ ಭವ್ಯವಾದ ಮಂದಿರ ಸ್ಥಾಪನೆ ನಡೆದಿದೆ. ಅದೇ ರೀತಿ ಮಂಡೋದರಿ ಮಯ ರಾಜನ ಮಗಳು. ಮೀರತ್ ಅವಳ ಜನ್ಮಸ್ಥಳ.

ನಂದ ಎಂದರೆ ಗೊಂಡಿ ಭಾಷೆಯಲ್ಲಿ 'ಎತ್ತು'. ಮೌರ್ಯಪೂರ್ವ ನಂದರ ಮುಖ್ಯಮಂತ್ರಿಯ ಹೆಸರು ಅಮಾತ್ಯರಾಕ್ಷಸ ಎಂದಿದೆ. 'ಯಾದಿಂಗ' ಆಕಳುಯಾದ (ಗೊಂಡಿ) ಗೋತ್ರದ ಕುಲಚಿಹ್ನೆ 'ಗುಪೇತ್' ಗುಪ್ತರ ಗೋತ್ರ. ಜೇಡ ಎಂದು ಇದರ ಅರ್ಥ. ಚರಿತ್ರೆಯ ಕಾಲದಲ್ಲಿ ನಗರೀಕರಣದ ಆದ್ಯ ಪ್ರವರ್ತಕರಾದ ಗುಪ್ತರು ವಿದೇಶಿ ವ್ಯಾಪಾರಕ್ಕೆ ಹೆಚ್ಚು ಒತ್ತು ಕೊಟ್ಟವರು. ನಗರೀಕರಣ ಹಂತದಲ್ಲಿ ನಗರಾಧಿಪತಿಯಾಗಿ, ಸಂಭೂವನ್ನು ನಗರೇಶ್ವರನನ್ನಾಗಿ ಮಾರ್ಪಡಿಸಿ ಪೂಜಿಸಲಾರಂಭಿಸಿದರು. ಇವರು ದೇವಾಲಯದ ಆರ್ಥಿಕ ಪದ್ಧತಿಯ ಮೂಲಿಗರು ಎಂದು ಊಹಿಸಲಾಗುತ್ತಾದೆ.

ಸಂಕರದಿಂದ ಶಂಕರ

10ನೇ ಸಂಭೂ ಶೇಖರನ ಆಳ್ವಿಕೆಯ ಸಮಯದಲ್ಲಿ ಆರ್ಯ ದ್ರಾವಿಡರಲ್ಲಿ ಪರಸ್ಪರ ಹೊಕ್ಕುಬಳಕೆ ಕೌಟುಂಬಿಕವಾಗಿ ಆಗತೊಡಗಿತ್ತು. ಈ ಬಗೆಯ ವರ್ಣಸಂಕರಕ್ಕೆ ಸಂಭೂ ಶೇಖರನ ಸಮ್ಮತವಿದ್ದಂತೆ ತೋರುತ್ತದೆ. ಹಾಗಾಗಿಯೇ ಅವನನ್ನು ಸಂಭೂಸಂಕರ ಅಥವಾ ಶಂಭೂ ಶಂಕರನೆಂದು ಕರೆಯಲಾಗತೊಡಗಿತಂತೆ.

ಈ ಗೊಂಡ್ವಾನ ಸಂಸ್ಕೃತಿಯನ್ನು ವಿವರಿಸುವ ಕೃತಿಯಲ್ಲಿ ಮತ್ತೊಂದು ಅಂಶವನ್ನು ಒತ್ತಿ ಹೇಳುತ್ತಾರೆ.

"ಆರಂಭದಿಂದಲೂ ಆರ್ಯ ಮತ್ತು ಅನಾರ್ಯರ ಸಂಘರ್ಷ ಸಹಸ್ರಾರು ವರ್ಷಗಳವರೆಗೆ ನಡೆಯಿತು. ಈಗ ಎರಡೂ ಸಮುದಾಯಗಳು ಒಟ್ಟಾಗಿ ಬದುಕಿ ಭಾರತದ ಆಧಾರ ಸ್ತಂಭಗಳಾಗಿವೆ. ಆದರೆ ಎರಡು ಸಂಸ್ಕೃತಿಗಳ ಆಚರಣೆಗಳು ಭೂಮಿ ಆಕಾಶದಷ್ಟು ವ್ಯತ್ಯಾಸವಿದೆ. ಒಂದು ಸತ್ಯದ ಪ್ರತೀಕವಾದರೆ ಇನ್ನೊಂದು ಮೋಸದ ಬಲೆಯಂತಿದೆ."

ಹಾಗೇ ಮುಂದುವರಿಯುತ್ತಾ "ಶಂಭು ಮಹಾದೇವನ ಈ ಭೂಮಿಯ ಮೇಲೆ ಅತಿಕ್ರಮಣ ಮಾಡಿದ ಆರ್ಯರು ಕೂಟನೀತಿಯಿಂದ ಪಾರ್ವತಿಗೆ ಮೋಹಜಾಲದ ಶಿಕ್ಷಣ ನೀಡಿ, ಪರಮೇಶ್ವರನನ್ನು ಜಾಲದಲ್ಲಿ ಬೀಳಿಸಲು ಮಾದಕದ್ರವ್ಯ ನೀಡಿ ನಿಷ್ಕ್ರಿಯಗೊಳಿಸಿ, ಆತ ಸುಪ್ತ ಅವಸ್ಥೆಯಲ್ಲಿದ್ದಾಗ ಪಾರ್ವತಿಯನ್ನು ಕಳುಹಿಸಿದರು. ಈಶ್ವರನ ಬಳಿ ಬಂದ ಪಾರ್ವತಿ, ದುರ್ಗಾ, ಜಗದಂಬಾ ರೂಪ ಧರಿಸಿ ಶಂಭು ಮಹಾದೇವನ ದಾನವ ಗಣ, ದಯೀತಗಣ, ದಸ್ಯೂರಗಣ, ದೈಭೂತಗಣ, ದೈಬೀರಗಣಗಳ ಸಂಹಾರ ಮಾಡಿದರು. ಶಂಭುವಿಗೆ ತನ್ನ ತಪ್ಪಿನ ಅರಿವಾಗಿ ಸತಪುಡಾದ ಪೆಂಕ್ ಮೇಡೀ ಬಿಟ್ಟು ಹಿಮಾಲಯದ ನಿರ್ಜನ ಪ್ರದೇಶಕ್ಕೆ ಹೋದನು. ಅಲ್ಲಿ ಅವನನ್ನು ಗುರುತಿಸುವವರು ಯಾರೂ ಇರಲಿಲ್ಲ. ಮಾದಕ ಪದಾರ್ಥ ಸೇವಿಸಿದ್ದರಿಂದ ವೀರ್ಯವಿರದೇ ನಿಸ್ತೇಜನಾಗಿದ್ದ. ಅರ್ಧ ನರ ಅರ್ಧ ನಾರಿಯಾಗಿ ಪರಿವರ್ತಿತನಾಗಿದ್ದ. ಕೋಯಾ ವಂಶದವರು ಸಂಭು ಮಹಾದೇವನನ್ನು ಮಹಾದೇವ ಎಂದು ಕರೆಯುವರು. ಅಗಾಧ ರೌದ್ರ ರೂಪ ಜ್ವಾಲೆಯಿಂದ ಉಳಿಯಲು ಶಂಭುವನ್ನು ಆರಾಧಿಸುತ್ತಾರೆ. ಶಿವನ ತಲೆ ಯಾವಾಗಲೂ ತಣ್ಣಗಿರಲೆಂದು ಜಲದ ಹನಿ ಬೀಳುವಂತೆ ಮಾಡಿರುತ್ತಾರೆ. ಒಟ್ಟಾರೆ ಶಿವಶಂಕರ ಆರ್ಯ ಅನಾರ್ಯರ ದೇವರು ಎಂದು ಪ್ರತಿಪಾದಿಸುತ್ತಾರೆ. ■

ಕಾರ್ಪೊರೇಟ್‌ಗಳಿಗೆ ರಸದೌತಣ, ಕಾರ್ಮಿಕರಿಗೆ ನರಕ


ಮೋದಿ ಸರ್ಕಾರಕ್ಕೆ ಎರಡು ರಿಮೋಟ್ ಕಂಟ್ರೋಲ್. ಸಂಘ ಪರಿವಾರ ಮತ್ತು ಕಾರ್ಪೊರೇಟ್‌ಗಳು. ಒಂದರ ಅಜೆಂಡಾ ಹಿಂದೂ ರಾಷ್ಟ್ರ. ಇನ್ನೊಂದರದು ಸಂಪತ್ತಿನ ಅನಿಯಂತ್ರಿತ ಲೂಟಿ. ಹೀಗಾಗಿ ಒಂದು ಕಡೆ ಸಂಘ ಪರಿವಾರದ ಆಣತಿಯಂತೆ ಇತಿಹಾಸದ ತಿರುಚುವಿಕೆ, ಶಿಕ್ಷಣದ ಕೇಸರೀಕರಣ, ಲವ್ ಜಿಹಾದ್, ಮತಾಂತರದ ಗುಲ್ಲು, ಮರುಮತಾಂತರ ಇತ್ಯಾದಿ ಕಾರ್ಯಕ್ರಮಗಳು ಬಹಳ ಬಿರುಸಿನಿಂದ ನಡೆಯುತ್ತಿವೆ. ಇನ್ನೊಂದು ಕಡೆ ಉದ್ಯಮಿಗಳ ಕಾಲಬುಡಕ್ಕೆ ಭೂಮಿ, ನೀರು ಒಂದರ ಮೇಲೊಂದರಂತೆ ವಿನಾಯಿತಿ, ಸವಲತ್ತು ಇತ್ಯಾದಿ ಸಮರ್ಪಿಸಲಾಗುತ್ತಿದೆ. ಕಾರ್ಪೊರೇಟ್‌ಗಳ ಮುಂದಿನ ಡಿಮಾಂಡ್ ಏನೆಂದರೆ ಕಾರ್ಮಿಕ ಕಾಯ್ದೆಗಳು ತಮ್ಮ ಪರವಾಗಿರುವಂತೆ ಬದಲಾಯಿಸಬೇಕು. ಅಂತೆಯೆ ಸದ್ಯ ಜಾರಿಯಲ್ಲಿರುವ 'ಪುರಾತನ' ಕಾಯ್ದೆಗಳು 'ಅಭಿವೃದ್ಧಿ'ಗೆ ಅಡ್ಡಿಯಾಗಿವೆ ಎನ್ನುತ್ತಿರುವ ಪಂಜರದ ಗಿಣಿಯಾದ ಮೋದಿ ಸರ್ಕಾರ ಇದೀಗ ಸಂಬಂಧಪಟ್ಟ ಕಾಯ್ದೆಗಳನ್ನು ಬದಲಾಯಿಸಿ ಕಾರ್ಪೊರೇಟ್‌ಗಳಿಗೆ ರಸದೌತಣ ಬಡಿಸಲು ಹೊರಟಿದೆ.


ಇದರರ್ಥ ಇಷ್ಟೆ. ಉದ್ಯಮಿಗಳಿಗೆ ಹಾಲೋಗರ ಉಣ್ಣಿಸುತ್ತಾ ಉಣ್ಣಿಸುತ್ತಾ ಕಾರ್ಮಿಕರ ಕಿಬ್ಬದಿಯ ಕೀಲು ಮುರಿಯಲು ಸಿದ್ಧತೆಗಳಾಗುತ್ತಿವೆ. ಇದರ ಭಾಗವಾಗಿ ಓವರ್‌ಟೈಂ ಮಿತಿಯನ್ನು ಈಗಾಗಲೆ ದ್ವಿಗುಣಗೊಳಿಸಲಾಗಿದೆ. ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಲು ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದ್ದು ಆ ಮಸೂದೆ ಈಗ ಸಂಸತ್ತಿನ ಅನುಮೋದನೆಗಾಗಿ ಕಾಯುತ್ತಿದೆ. ಇದೀಗ ಮತ್ತೊಂದು ಆಘಾತಕಾರಿ ಬೆಳವಣಿಗೆ ನಡೆದಿದೆ. 40ಕ್ಕಿಂತ ಕಡಮೆ ಕಾರ್ಮಿಕರಿರುವ ಸಣ್ಣ ಕಾರ್ಖಾನೆಗಳನ್ನು ಕಾರ್ಖಾನೆಗಳ ಕಾಯ್ದೆ, ಔದ್ಯಮಿಕ ವಿವಾದಗಳ ಕಾಯ್ದೆ ಮತ್ತು ಕನಿಷ್ಠ ವೇತನ ಕಾಯ್ದೆಗಳ ವ್ಯಾಪ್ತಿಯಿಂದ ಹೊರಗಿರಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ನಿಟ್ಟಿನಲ್ಲಿ ಮತ್ತೊಂದು ನೂತನ ಮಸೂದೆ ಸಿದ್ಧಗೊಳ್ಳುತ್ತಿದೆ. ಆದರೆ ಕಾರ್ಮಿಕ ಸಂಘಟನೆಗಳನ್ನು ತಿದ್ದುಪಡಿ ಪ್ರಕ್ರಿಯೆಯಿಂದ ಹೊರಗಿರಿಸಲಾಗಿದೆ. ಇದನ್ನೆಲ್ಲ ಫಿಕ್ಕಿ, ಸಿಐಐ ಮೊದಲಾದ ಕಾರ್ಪೊರೇಟ್ ಗುಂಪುಗಳು ತೋಳ್ತೆರೆದು ಸ್ವಾಗತಿಸಿವೆಯಾದರೆ ಎಲ್ಲಾ ಕಾರ್ಮಿಕ ಸಂಘಟನೆಗಳು ತೀವ್ರವಾಗಿ ವಿರೋಧಿಸಿವೆ. ವಿಶೇಷವೆಂದರೆ ವಿರೋಧಿಸುವವರ ಪೈಕಿ ಬಿಜೆಪಿಯ ಭಾರತೀಯ ಮಜ್ದೂರ್ ಸಂಘವೂ ಒಂದು! ಬಿಎಂಎಸ್ ಈಗಾಗಲೇ ಮೋದಿ ಸರ್ಕಾರದ 'ಮೇಕ್ ಇನ್ ಇಂಡಿಯ' ನೀತಿಯನ್ನು ಬಿಚ್ಚುಮಾತುಗಳಲ್ಲಿ ಟೀಕಿಸಿದೆ. ರಾಜಸ್ತಾನದಲ್ಲಿ ವಸುಂಧರಾ ರಾಜೆ ನೇತೃತ್ವದ ಬಿಜೆಪಿ ಸರ್ಕಾರ ಆಗಲೇ ಔದ್ಯಮಿಕ ವಿವಾದ ಮತ್ತು ಗುತ್ತಿಗೆ ಕಾರ್ಮಿಕರ ಕಾಯ್ದೆಗಳಿಗೆ ಕಾರ್ಪೊರೇಟ್ ಪರ ತಿದ್ದುಪಡಿಗಳನ್ನು ಮಾಡಿರುವುದನ್ನು ನಾವು ಗಮನಿಸಬೇಕು.



ಹೇಗೂ ಲೋಕಸಭೆಯಲ್ಲಿ ಮೆಜಾರಿಟಿ ಇರುವಾಗ ಮಸೂದೆಗಳು ಅನುಮೋದಿಸಲ್ಪಟ್ಟು ಹೊಸ ಕಾಯ್ದೆಗಳು ಜಾರಿಯಾಗುವುದಂತೂ ಹೆಚ್ಚುಕಮ್ಮಿ ಗ್ಯಾರಂಟಿಯೆ ಎನ್ನಬಹುದು. ಒಂದು ವೇಳೆ ನೂತನ ಕಾಯ್ದೆಗಳು ಅನುಷ್ಠಾನಗೊಂಡಲ್ಲಿ ಸುಮಾರು 70 ಪ್ರತಿಶತ ಕಾರ್ಮಿಕರು ಫ್ಯಾಕ್ಟರೀಸ್ ಕಾಯ್ದೆಯ ವ್ಯಾಪ್ತಿಯಿಂದ ಹೊರಗುಳಿಯಲಿದ್ದಾರೆ. ಉದ್ಯಮಗಳಲ್ಲಿ ಹಯರ್ ಆಂಡ್ ಫಯರ್ ನೀತಿ ಶುರುವಾಗಲಿದೆ. ಮಾಲಿಕರು ಕಾರ್ಮಿಕರನ್ನು ಇಚ್ಛಾನುಸಾರ ನೇಮಿಸಿಕೊಳ್ಳಬಹುದು, ಕಿತ್ತುಹಾಕಬಹುದು. ಯೂನಿಯನ್ ಚಟುವಟಿಕೆಗಳಿಗೆ ಕಡಿವಾಣ ಬೀಳಲಿದೆ. ಇನ್ನು ಮುಂದೆ ಲೇಬರ್ ಇನ್ಸ್‌ಪೆಕ್ಟರ್‌ಗಳು ಕಾರ್ಮಿಕರ ದೂರುಗಳಿಗೆ ಸ್ಪಂದಿಸಿ ರೇಡ್ ಮಾಡುವಂತಿಲ್ಲ, ಎಲ್ಲಿಗೆ ರೇಡ್ ಮಾಡಬೇ[ಕೆಂಬು]ವುದನ್ನು ಕಂಪ್ಯೂಟರ್ ನಿರ್ಧರಿಸಲಿದೆ! ಪರಿಣಾಮ[ವಾಗಿ] ಕಾರ್ಮಿಕರು ಅತಂತ್ರ ಸ್ಥಿತಿಯಲ್ಲಿ ಬದುಕಬೇಕಾದ ಸನ್ನಿ[ವೇಶ] ನಿರ್ಮಾಣವಾಗಲಿದೆ.

ಮೋದಿಯ ಕಾರ್ಪೊರೇಟ್‌ಕೇಂದ್ರಿತ 'ಅಭಿವೃದ್ಧಿ'[ಯಲ್ಲಿ] ಕಾರ್ಮಿಕರು ಮತ್ತಿತರ ಶೋಷಿತ ವರ್ಗಗಳಿಗೆ ಅವಕಾಶ[...] ಎನ್ನುವುದಕ್ಕೆ ಇದಕ್ಕಿಂತ ಸ್ಪಷ್ಟ ನಿದರ್ಶನ ಇನ್ನೊಂ[ದಿಲ್ಲ.] ಕನಿಷ್ಠ ಪೆನ್ಷನ್ ಹೆಚ್ಚಳ, ಭವಿಷ್ಯನಿಧಿ ಮಾರ್ಪಾಟುಗ[ಳ] ಕ್ಯಾರಟ್ ತೋರಿಸಿ ತಮ್ಮ ಹಕ್ಕುಗಳನ್ನು ಕಸಿಯ[ಲು] ಹೊರಟಿರುವ ಮೋದಿ ಸರ್ಕಾರದ ವಿರುದ್ಧ ಕಾರ್ಮಿಕ[ರು] ಬೃಹತ್ ಹೋರಾಟಕ್ಕೆ ಸಜ್ಜುಗೊಳ್ಳುತ್ತಿದ್ದಾರೆ.





ರಾಜ್ಯದ ಊರುಗಳ ಹೆಸರುಗಳ ಕನ್ನಡೀಕರಣಕ್ಕೆ ಕೇಂದ್ರ ಸರಕಾರ ಅನುಮೋದನೆ ನೀಡಿರುವುದು ಸಂತೋಷದ ಸಂಗತಿ. ಸಂಬಂಧಪಟ್ಟವರೆಲ್ಲರಿಗೂ ಹಾರ್ದಿಕ ಅಭಿನಂದನೆಗಳು. ಅದರಲ್ಲಿ ಮೈಸೂರಿನ ಕಾಗುಣಿತ ಮಾತ್ರ ಎಡವಟ್ಟಾಗಿದೆ. ಕನ್ನಡ ಹೆಸರುಗಳನ್ನು ಇಂಗ್ಲಿಷ್ ವರ್ಣಮಾಲೆಯಲ್ಲಿ ಬರೆಯುವಾಗ ಸಾಮಾನ್ಯ ಧ್ವನಿ ಬರವಣಿಗೆಯ ಕ್ರಮವನ್ನು ಅನುಸರಿಸಲಾಗಿದೆ. ಅಂದರೆ ಕನ್ನಡದ ಹ್ರಸ್ವ, ದೀರ್ಘ, ಅಲ್ಪಪ್ರಾಣ, ಮಹಾಪ್ರಾಣ, ದ ಡ, ನ ಣ, ಲ ಳ ಗಳ ವ್ಯತ್ಯಾಸಗಳನ್ನು ಪರಿಗಣಿಸದಿರುವುದು ಸ್ವಾಗತಾರ್ಹ.

ಆದರೆ ಮೈಸೂರಿನ ಹೆಸರು ಬರೆಯುವಾಗ ಮಾತ್ರ ಇಂಗ್ಲಿಷ್ ಭಾಷೆಯ ಕಾಗುಣಿತ ಕ್ರಮವನ್ನು ಅನುಸರಿಸಿರುವುದು ಭಾಷಾವಿಜ್ಞಾನದ ತತ್ತ್ವಗಳಿಗೆ ವಿರುದ್ಧವಾಗಿದೆ. ಇದರಿಂದ ಕನ್ನಡ ಗೊತ್ತಿಲ್ಲದವರು ಗೊಂದಲಕ್ಕೆ ಗುರಿಯಾಗುತ್ತಾರೆ.

ಮೈಸೂರು ಪದದಲ್ಲಿರುವ ಮೈ ಎನ್ನುವುದು ಮ್ (ವ್ಯಂಜನ) ಐ (ಸ್ವರ) ಸೇರಿ ಆಗಿದೆ. ಅದನ್ನು ಇಂಗ್ಲಿಷ್ ವರ್ಣಮಾಲೆಯಲ್ಲಿ ಬರೆಯುವಾಗ ಎಂ ವೈ ಎಂದು ಬರೆದರೆ ಮ್ಯ್ ಎಂದಾಗುವುದರಿಂದ ಅದನ್ನು ಉಚ್ಚರಿಸಲಾಗುವುದಿಲ್ಲ.

ಮ್ ವ್ಯಂಜನವನ್ನು ಐ ಸ್ವರ ಸಹಿತ ಎಂಎಐ ಎಂದೇ ಬರೆಯಬೇಕು. ನಾವು ಬಳಸುತ್ತಿರುವುದು ಇಂಗ್ಲಿಷ್ ವರ್ಣಮಾಲೆಯನ್ನು ಮಾತ್ರ. ಇಂಗ್ಲಿಷ್ ಭಾಷೆಯ ಕಾಗುಣಿತವನ್ನಲ್ಲ. ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಎಂವೈಗಳನ್ನು ಮೈ ಎಂದು ಓದಬಹುದು. ಹ್ರಸ್ವ ಸ್ವರವನ್ನು ಎರಡು ಬಾರಿ ಬರೆದರೆ ಅದು ದೀರ್ಘವಾಗಬಹುದು. ಆದರೆ ಇಂಗ್ಲಿಷ್ ಭಾಷೆಯ ಬರವಣಿಗೆ ಅವೈಜ್ಞಾನಿಕವಾಗಿರುವುದರಿಂದ ಹ್ರಸ್ವ ಒ ಅನ್ನು ಎರಡು ಬಾರಿ ಬರೆದರೆ ದೀರ್ಘ ಓ ಮಾತ್ರವಲ್ಲ ಊ ಕೂಡ ಆಗುತ್ತದೆ. ಉದಾ: ಓ -**door**, ಊ -**fool** ಅದನ್ನು ಕುರುಡಾಗಿ ಅನುಸರಿಸಿ **mysuru, mysooru** ಎಂದೆಲ್ಲ ಬರೆಯುವುದು ತಪ್ಪು. ಅದು ಕನ್ನಡವನ್ನು ಇಂಗ್ಲಿಷ್ ಭಾಷೆಯ ಕಾಗುಣಿತದಲ್ಲಿ ಬರೆದ ಹಾಗೆ ಅವೈಜ್ಞಾನಿಕ.

ಕನ್ನಡ ಮೈ ಅನ್ನು ಇಂಗ್ಲಿಷ್ ಲಿಪಿಯಲ್ಲಿ ಬರೆಯುವಾಗ ಮ್ ಮತ್ತು ಐ ಗಳನ್ನು ಎಂಎಐ ಎಂದು ಬರೆದಾಗ ಮಾತ್ರ ಓದಲು ಸಾಧ್ಯ. ಮುಂಬೈ, ಚೆನ್ನೈಗಳನ್ನು ಇಂಗ್ಲಿಷಿನ ಲಿಪಿಯಲ್ಲಿ ಬರೆಯುವಾಗ ಐ ಅನ್ನು ಎಐ ಅಕ್ಷರಗಳಲ್ಲಿ ಬರೆಯುತ್ತಾರೆ. ಆದ್ದರಿಂದ **mumbai, chennai** ಇರುವ ಹಾಗೆ **maisuru** ಎಂದೇ ಬರೆಯಬೇಕು.

- ಪಂಡಿತಾರಾಧ್ಯ, ಮೈಸೂರು


ಜನಪರ, ದಕ್ಷ, ಪ್ರಾಮಾಣಿಕ ಅಧಿಕಾರಿಗಳನ್ನು ಸರ್ಕಾರ ನಡೆಸಿಕೊಳ್ಳುವ ರೀತಿ

ಮೈಸೂರಿನಲ್ಲಿರುವ ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕಿ ವಿ.ರಶ್ಮಿ ಅವರ ಮೇಲೆ ನಡೆದ ಹಲ್ಲೆಯ ಬಗ್ಗೆ ತಿಳಿದು ದಿಗ್ಭ್ರಮೆಯಾಗಿದೆ.

ಐಎಎಸ್ ಅಧಿಕಾರಿಯಾದ ರಶ್ಮಿ ಅವರು ಭ್ರಷ್ಟಾಚಾರದ ಕಡು ವಿರೋಧಿ. ಅವರು ಎಟಿಐ ಸಂಸ್ಥೆಯಲ್ಲಿನ ಭ್ರಷ್ಟಾಚಾರವನ್ನು ತೊಳೆಯುವುದರಲ್ಲಿ ನಿರತರಾಗಿದ್ದರು. ಅವರ ಭ್ರಷ್ಟಾಚಾರದ ವಿರೋಧಿ ಹೋರಾಟಕ್ಕೆ ನಮ್ಮ (?) ಸರ್ಕಾರಗಳು ಅವರಿಗೆ ಕೊಟ್ಟಿರುವ ಉಡುಗೊರೆಯೆಂದರೆ ಕಳೆದ 17 ವರ್ಷಗಳಲ್ಲಿ 20 ವರ್ಗಾವಣೆಗಳು!! ಸಾಲದ್ದಕ್ಕೆ ಈಗ ಭ್ರಷ್ಟರಿಂದ ಇವರ ಮೇಲೆ ಹಲ್ಲೆ ಜೊತೆಗೆ ಆತ್ಮರಕ್ಷಣೆಗೆ ಪತ್ರಿಕಾ ಹೇಳಿಕೆ ಕೊಟ್ಟಿದ್ದಕ್ಕೆ ನೋಟಿಸ್ ಬೇರೆ...

ಇಂತಹ ಸರ್ಕಾರಗಳು ಏಕಿರಬೇಕು??? ಜನಪರ ಹಾಗು ದಕ್ಷ ಅಧಿಕಾರಿಗಳಿಗೆ ಉತ್ತೇಜನ ಕೊಟ್ಟು ಜನರಿಗೆ ಒಳ್ಳೆಯ ಸೇವೆಯನ್ನು ಒದಗಿಸುವ ಬದಲು ಅವರಿಗೆ ಹಿಂಸೆ ಕೊಡುವ ಸರ್ಕಾರಗಳು ನಾವು ಆರಿಸಿ ಕಳಿಸಿದ ಸರ್ಕಾರಗಳೆಂದು ಹೇಳಿಕೊಳ್ಳಲು ನಾಚಿಕೆಯಾಗುತ್ತದೆ... ಅಸಹ್ಯವಾಗುತ್ತದೆ.

- ವೀರಬ್ಯಾತಯ್ಯ, ಬೆಂಗಳೂರು



'ಎಂಎಐ'ಸೂರು ಎಂದರೆ ಸರಿ!

ಯೋಗೇಶ್ ಮಾಸ್ಟರರ 'ಆರ್ಯರ ಪ್ರಜಾಪತಿ ವರ್ಸಸ್ ಅರಣ್ಯಕರ ಪಶುಪತಿ' ಲೇಖನವನ್ನು ಓದುವಾಗ ನನಗೆ ಅನಿಸಿದ್ದು: ದಕ್ಷಿಣ ಭಾರತೀಯ ದ್ರಾವಿಡಿಯನ್ನರೂ ತಮ್ಮ ಮಕ್ಕಳಿಗೆ ಆರ್ಯನ್ ಎಂಬ ಹೆಸರು ಇಡುತ್ತಿದ್ದಾರೆ, ಇದು ಸರಿಯೇ?

ಯಾರೋ ಒಬ್ಬ ಬಾಲಿವುಡ್ಡಿನ ಹೀರೋ ತನ್ನ ಮಗನಿಗೆ 'ಆರ್ಯನ್' ಎಂಬ ಹೆಸರಿಟ್ಟನೆಂದು ಈಗ ನಮ್ಮ ಕರ್ನಾಟಕದ ದ್ರಾವಿಡಿಯನ್‌ಗಳೆಲ್ಲಾ ತಮ್ಮ ಮಕ್ಕಳಿಗೆ ಆರ್ಯನ್ ಎಂಬ ಹೆಸರು ಇಟ್ಟು ಹೆಮ್ಮೆ ಪಡುತ್ತಿದ್ದಾರೆ. ಉತ್ತರ ಭಾರತೀಯರು ಯಾರಾದರೂ ತಮ್ಮ ಮಕ್ಕಳಿಗೆ 'ದ್ರಾವಿಡಿಯನ್' ಎಂಬ ಹೆಸರನ್ನು ಇಟ್ಟದ್ದು ಎಲ್ಲಾದರೂ ನಾವು ಕಂಡಿದ್ದೇವೆಯೇ? ಉತ್ತರದವರಿಗೆ ಈ ಆರ್ಯನ್ ಹೆಸರು ಹೆಮ್ಮೆಯ ಸಂಕೇತವಾಗಿರಬಹುದು. ಆದರೆ ದಕ್ಷಿಣದವರು ತಮ್ಮ ಮಕ್ಕಳಿಗೆ ಈ ಹೆಸರು ಇಡುವ ಮೊದಲು ಸ್ವಲ್ಪ ಯೋಚಿಸಬೇಕು.

ದ್ರಾವಿಡ ಜನಾಂಗದವರಾದ ದಕ್ಷಿಣ ಭಾರತಿಯರಿಗೆ ಈ ಆರ್ಯನ್ ಎಂಬ ಶಬ್ದವು ದುಷ್ಟತನ, ಸ್ವಾರ್ಥ ಮತ್ತು ಶೋಷಣೆಯ ಅನ್ವರ್ಥನಾಮ. ವಿದೇಶದಿಂದ ಬಂದ ಈ ಬರ್ಬರ ಜನಾಂಗವಾದ ಆರ್ಯನ್ನರು ಶಾಂತಿಪ್ರಿಯ ಸುಸಂಸ್ಕೃತ ಜನಾಂಗವಾದ ದ್ರಾವಿಡ ಮೂಲನಿವಾಸಿಗಳ ಮೇಲೆ ಆಕ್ರಮಣ ಮಾಡಿ ನಮ್ಮ ನೆಲವನ್ನು ತಮ್ಮ ಬಾಹುಬಲದಿಂದ ಆಕ್ರಮಿಸಿ ನಮ್ಮ ಸಂಪತ್ತನ್ನೆಲ್ಲ ಲೂಟಿ ಮಾಡಿ ನಮ್ಮ ಅಸಹಾಯಕ ಹೆಂಗಸು- ಮಕ್ಕಳನ್ನು ಗುಲಾಮರನ್ನಾಗಿ ಮಾಡಿ ಅವರಿಗೆ ದುಸ್ಯು ಅರ್ಥಾತ್ ದಾಸರೆಂದು ಕರೆದು, ಅವರನ್ನು ವಿರೋಧಿಸಿದವರನ್ನು ಅಸುರರು/ರಾಕ್ಷಸರು ಎಂದು ತುಚ್ಛೀಕರಿಸಿ ನಮ್ಮನ್ನು ಸಿಂಧೂ ನದಿ ತೀರದಿಂದ ದಕ್ಷಿಣಕ್ಕೆ ಓಡಿಸಿದ ಅನಾಗರಿಕ ದುಷ್ಟ ಜನಾಂಗದವರು ಈ ಆರ್ಯನ್ನರು. ಹಾಗಿರುವಾಗ ಅಂತಹ ಇದೀ ಅನಾಗರಿಕ ಜನಾಂಗದ ಹೆಸರನ್ನು ನಮ್ಮ ಪ್ರೀತಿಯ ಮಕ್ಕಳಿಗೆ ಇಡುವುದು ಅನಿಷ್ಟವಲ್ಲವೇ?

ನಾವು ನಮ್ಮ ಮಕ್ಕಳಿಗೆ ಪಿಶಾಚಿ, ದೆವ್ವ, ಕೀಚಕ, ದುಶ್ಯಾಸನ, ನರಿ, ತೋಳ, ಹದ್ದು, ಚೇಳು ಎಂಬ ಹೆಸರನ್ನು ಇಡುವುದಿಲ್ಲವಲ್ಲ! ಹಾಗಾದರೆ ಅದೇ ಗುಂಪಿನಲ್ಲಿ ಬರುವ ಆರ್ಯನ್ ಎಂಬ ಅನಿಷ್ಟ ಹೆಸರನ್ನು ಮಕ್ಕಳಿಗೆ ಇಡುವುದು ಸರಿಯೇ? ಕ್ರಿಕೆಟಿಗ ರಾಹುಲ್ ದ್ರಾವಿಡ್ ಮರಾಠಿ ಬ್ರಾಹ್ಮಣನಾಗಿದ್ದರೂ ದ್ರಾವಿಡ್ ಎಂಬ ಉಪನಾಮ ಅವನ ಕುಟುಂಬದವರು ಹೊಂದಿದ್ದೇಕೆ ಎಂದು ಮಹಾರಾಷ್ಟ್ರದಲ್ಲಿ ಹಲವರು ಖೇದಭರಿತ ಆಶ್ಚರ್ಯ ವ್ಯಕ್ತಪಡಿಸಿದ್ದರು. ಹಾಗಿದ್ದರೆ ನಾವು ದಾಕ್ಷಿಣಾತ್ಯರು ಮಕ್ಕಳಿಗೆ ಆರ್ಯನ್ ಎಂಬ ಹೆಸರು ಇಡುವುದು ಅಥವಾ ನಮ್ಮ ಹೊಸ ಮನೆಗೆ ಮತ್ತು ಕನ್ನಡ ಸಿನೆಮಾಗಳಿಗೆ 'ಆರ್ಯನ್' ಎಂಬ ಹೆಸರು ಇಡುವುದು ಸರಿಯೇ? ಆರೆಸ್ಸೆಸ್ ಚೆಡ್ಡಿಗಳಿಗೆ ಅಥವಾ ರಾಮಚಂದ್ರ ಮಠಾಧೀಶರಿಗೆ ಬೇಕಾದರೆ ಎಲ್ಲರೂ ಆರ್ಯನ್ ಎಂದು ಕರೆಯಲಿ ಪರವಾಗಿಲ್ಲ, ಕಾರಣ ಆ ಹೆಸರು ಇವರಿಗೆ ತುಂಬಾ ಫಿಟ್ ಆಗುತ್ತದೆ.

-ಆರ್. ಬಿ. ಶೆಣವ, ಮಂಗಳೂರು

ಅತ್ಯಾಚಾರ: ಸಮುದಾಯಗಳ ಸಮರ್ಥನೆಗಳನ್ನು ಅಡಗಿಸಿಡುವಂತಹ ಸಾಧನ!!

ಭಾರತದ ಇತಿಹಾಸದಲ್ಲಿ ಕೆಳಜಾತಿಯವರನ್ನು ದಲಿತರು, ಅಸ್ಪೃಶ್ಯರು ಎಂದೆಲ್ಲ ಬಿಂಬಿಸುತ್ತಾ ಬಂದಿರುವುದು ಮೇಲ್ಜಾತಿ ವರ್ಗ. ದಲಿತ ಮಹಿಳೆಯ ಸಬಲೀಕರಣಕ್ಕೆ ಈಗಾಗಲೇ ನಗರೀಕರಣ ಮತ್ತು ಉತ್ತಮ ಕಾನೂನಿನಿಂದ ಸಹಾಯ[ವಾ]ಗಿದ್ದರೂ ಕೂಡ ಅವರ ಮೇಲಾಗುತ್ತಿರುವ ಅತ್ಯಾ[ಚಾರ] ನಿಂತಿಲ್ಲ. ನಮ್ಮ ಮಾಧ್ಯಮಗಳು ಕೂಡ ನಗರದಲ್ಲಿ ಪ[...] ಪ್ರವಾಸಿಗರು ಮತ್ತು ಮಹಿಳೆಯರ ಮೇಲಾಗುವ ಅತ್ಯಾ[ಚಾರ]ಗಳ ಬಗ್ಗೆ ಬೊಬ್ಬೆ ಹೊಡೆಯುತ್ತವೆಯೇ ಹೊರತು ಜಾತಿ[...]ಯ ಮೇಲೆ ಬಂಡವಾಳಶಾಹಿಗಳು ನಡೆಸುವ ಅತ್ಯಾ[ಚಾರ]ವಾಗಲೀ, ಧರ್ಮಗಳ ಘರ್ಷಣೆಯಿಂದಾಗುವ ಅ[...] ಪ್ರೇರಿತ ಅತ್ಯಾಚಾರವನ್ನಾಗಲೀ ಬಿತ್ತರಿಸುವುದೇ ಇ[...]

ಭಾರತದಲ್ಲಿ ನಡೆಯುತ್ತಿರುವ ಅತ್ಯಾಚಾರ ಪ್ರಕರಣ[...] ಜಾತಿ ಪದ್ಧತಿಯ ಪಾತ್ರವನ್ನು ನಾವು ಗುರುತಿಸದ ಹೊ[ರತು] ಅತ್ಯಾಚಾರಗಳಿಗೆ ಪೂರ್ಣ ತಡೆಯೊಡ್ಡಲು ಅ[...] ಜಾತಿಪದ್ಧತಿಗಳು ಸಾಮಾನ್ಯವಾಗಿಯೆ ಅಸಮಾನತೆಯ[...] ಅಸಹನೆಯನ್ನು ಉತ್ಪಾದಿಸುತ್ತವೆ. ಈ ಅಸಮಾನತೆ ಅ[...] ಉಡುಗೆ, ಭಾಷೆಯಲ್ಲಿ ಕಾಣುವುದು ಸಹಜ. ಆದ[ರೆ] ಅಸಮಾನತೆಯಿಂದಾಗಿ ಮೇಲ್ಜಾತಿ ಪುರುಷನೊಬ್ಬ ಕೆ[ಳಜಾತಿಯ] ಮಹಿಳೆಯನ್ನು ಲೈಂಗಿಕವಾಗಿ ಹಿಂಸಿಸುವುದು ಮತ್ತು [...] ತನ್ನ ಅಧಿಕಾರವೆಂದು ಭಾವಿಸುವುದು ಊಳಿಗಮ[...]ನಿಸುತ್ತದೆ. ಇಂತಹ ಕೆಟ್ಟ ಅಧಿಕಾರಕ್ಕೆ ಬೆಂಗಾವ[ಲಾಗಿ] ನಿಂತಿರುವ ಧಾರ್ಮಿಕ ಮತ್ತು ರಾಜಕೀಯ ಇಚ್ಛಾಶ[ಕ್ತಿ] ಹೀಗೆ ಪ್ರಚೋದಿಸುತ್ತವೆ "ನೀನೊಬ್ಬ ನಿಜವಾದ [...] ಒಡೆಯನಾಗಿ ಭೂಮಿಯ ಅನುಭವವನ್ನು ಪ[ಡೆಯ]ಬೇಕೆಂದರೆ ಮೊದಲು ಅಲ್ಲಿ ಕೆಲಸ ಮಾಡುವ [...] ಮಹಿಳೆಯನ್ನು ಅನುಭವಿಸಿದಾಗ ಮಾತ್ರ ಸಾಧ್ಯ"

ಹಲವಾರು ಬಾರಿ ಇಂತಹ ಪ್ರಚೋದನೆಗೆ ಒ[...] ಮೇಲ್ಜಾತಿ ವರ್ಗ ಕೆಳಜಾತಿಯ ಮಹಿಳೆ[ಯರ ಮೇಲೆ] ಅತ್ಯಾಚಾರಗೈಯುತ್ತಿರುವುದು ನಿರಂತರವಾಗಿದೆ[...] ಅತ್ಯಾಚಾರಕ್ಕೆ ಬಲಿಯಾದ ಹೆಣ್ಣುಮಕ್ಕಳು, ಮಹಿಳೆ[ಯರು] ಯಾವುದೇ ಕಾನೂನು, ಸಾಮಾಜಿಕ ಸಹಾಯ ದೊ[ರೆಯದೆ] ಆತ್ಮಹತ್ಯೆಗೆ ಶರಣಾಗುತ್ತಾರೆ. ಹಿಂದೂ ಒಬ್ಬ ತನ್ನ ಧ[ರ್ಮ] ಬೆಂಬಲಿತ ಪ್ರತೀಕಾರಕ್ಕೋಸ್ಕರ ಮುಸ್ಲಿಂ ಮಹಿಳೆಯ [ಮೇಲೆ] ಅತ್ಯಾಚಾರ ಮಾಡುವುದು, ಜಮೀನ್ದಾರನೊಬ್ಬ [...] ತೀರಿಸಲಾಗದ ದಲಿತ ಅಶಕ್ತ ಮಹಿಳೆಯ ಮೇಲೆ ಅ[ತ್ಯಾಚಾರ] ಮಾಡುವುದೆಲ್ಲವ ಗಮನಿಸಿ ದಾಗ, ಅತ್ಯಾ[ಚಾರ] ಸಮುದಾಯಗಳ ಸಮರ್ಥನೆಗಳನ್ನು ಅಡಗಿಸಿಡು[ವ] ಸಾಧನವಾಗುತ್ತಿದೆ ಎಂದೆನಿಸುವುದಿಲ್ಲವೆ?

ಸಮ ಸಮಾಜ ಕಟ್ಟಲು ಎಲ್ಲರೂ ಕಟಿ[ಬದ್ಧರಾ]ಗೋಣ!!!

-ಪ್ರೊ. ಡಾ. ಅಭಿನಂದನ ಬಳ್ಳಾರಿ, ಬೆಂಗ[ಳೂರು]

ಪ್ರತ್ಯೇಕ ರಾಜ್ಯ ಬೇಡಿಕೆ (ಅ)ಸಮಂಜಸವೇ?

ಕರ್ನಾಟಕ ಒಂದು ಸಾಂಸ್ಕೃತಿಕ ವೈಚಾರಿಕ ಕ್ರಾಂ[ತಿ] ಸಮೃದ್ಧಿಭರಿತ ನಾಡು. ಕಾವೇರಿಯಿಂದ ಗೋದಾವರಿ[ವರೆಗಿನ] ನಾಡನ್ನು ಕರ್ನಾಟಕವೆಂದು ಬಣ್ಣಿಪೆನು [...] ಕವಿರಾಜಮಾರ್ಗದ ಶ್ರೀವಿಜಯ ಹೇಳಿದ್ದಾನೆ. [...] ಕರ್ನಾಟಕ ಏಕೀಕರಣಗೊಂಡ ವರ್ಷ.

ಈಗ ಕರ್ನಾಟಕ ವಿಭಜನೆಯ ಮಾತನ್ನು ಆ[...] ಸಮಂಜಸವೇ?


ಚಾಲುಕ್ಯ, ವಿಜಯನಗರ, ರಾಷ್ಟ್ರಕೂಟ,

ಹಂಸಲೇಖಾರ ಹಾಡುಹಸೆ

ಹಂಸಲೇಖಾ ಅವರ ಬಗ್ಗೆ ಧ್ಯಾನಿಸಲು ಕಾರಣಗಳಿವೆ. ...ದ ಚಿತ್ರಗೀತೆಗಳು ತನ್ನದೇ ವೈಶಿಷ್ಟ್ಯತೆಯನ್ನು ಮೆರೆದದ್ದು ... ಪ್ರತಿಭೆಯ ಮೂಲಕ. ಇವರು ಸಂಗೀತ ನೀಡುವ, ...ತ್ಯ ರಚಿಸುವವರೆಗೆ ಕನ್ನಡ ಚಿತ್ರಗೀತೆಗಳ ಹೊಸತನ ...ರಿಗೆ ಗೊತ್ತಾಗಿರಲಿಲ್ಲ, ಸಾಮಾನ್ಯ ಜನರ ಆಡುಭಾಷೆ ...ನ್ನೇ ಹಾಡುಗಳಲ್ಲಿ ತಂದದ್ದು; ಕನ್ನಡ ಜನತೆ ಅವರೆಗೆ ...ರದ ನೆಲದ ಸದ್ದು ಜನಪದೀಯ ಸ್ಪರ್ಶದ ಹಾಡುಗಳು ...ಸತೊಡಗಿದ್ದು; ಚಿತ್ರಗಳ ಜೊತೆಜೊತೆಗೆ ಅಂದರೆ ...ಕತೆಯನ್ನು ಹಾಡಿನ ಮೂಲಕ ಹೇಳುವ ಪರಿಪಾಠ ...ಭವಾಗಿದ್ದು; ಮೊಟ್ಟಮೊದಲ ಬಾರಿಗೆ ಕನ್ನಡಿಗನ ...ದ ಲೋಕಕ್ಕೆ ಚಿತ್ರಗೀತೆಗಳು ಬೇರೆಯದೇ ರೀತಿಯಲ್ಲಿ ...ಇಟ್ಟಿದ್ದು; ಕನ್ನಡ ಚಿತ್ರಗಳೆಲ್ಲ ಸಂಗೀತಮಯ, ...ತ್ಯಮಯವಾದದ್ದು- ಇವೆಲ್ಲ ಈಗ ಚರಿತೆಯ ಭಾಗ. ...ಯೇ ಹಂಸಲೇಖಾರು ನಡೆದುಬಂದ ದಾರಿಯೂ.

1972ರಲ್ಲಿ 'ತ್ರಿವೇಣಿ' ಚಿತ್ರಕ್ಕೆ ಹಾಡು ಬರೆಯುವ ...ಲಕ ಇಪ್ಪತ್ತೊಂದು ವರ್ಷದ ಹಂಸಲೇಖಾ (...ವಿಂದರಾಜು ಗಂಗರಾಜು) ಚಿತ್ರರಂಗಕ್ಕೆ ಬಂದರು. ... ನಿರ್ದೇಶಕ ಎಂ.ಎನ್.ಪ್ರಸಾದ್ ಅವರ ಮೂಲಕ. ...ಾಡಿನಿಂದ ಬಂದ ಈ ಪ್ರತಿಭೆಗೆ ಭಾಷೆಯ ಮೇಲೆ ...ರವಾದ ಹಿಡಿತವಿದ್ದುದರಿಂದ 'ನೀನಾ ಭಗವಂತ' ...ದ ಹಾಡು ಬರೆಯುವುದು ಕಷ್ಟವಾಗಲಿಲ್ಲ. 'ತ್ರಿವೇಣಿ' ...ಕ್ಕೆ ಈ ಹಾಡಿನ ಜೊತೆಗೆ ಮತ್ತೊಂದು ಗೀತೆಯನ್ನೂ ...ದರು, ಆಮೇಲೆ ಸುಮಾರು ಒಂದು ದಶಕದಷ್ಟು ... ಯಾವುದೇ ಚಿತ್ರಕ್ಕೆ ಹಾಡು ಬರೆದಿಲ್ಲ ಎಂಬುದು ... ಮೂಡಿಸುವಂಥದ್ದು. ಮತ್ತೆ 1983ರಲ್ಲಿ 'ನಾನು ...ಹೆಂಡ್ತಿ' ಚಿತ್ರಕ್ಕೆ 'ಯಾರೇ ನೀನು ಚೆಲುವೆ... ನಿನ್ನಷ್ಟಕ್ಕೆ ... ಏಕೆ ನಗುವೇ?' ಎಂಬ ಹಾಡು ಬರೆದರು; ಆ ... ಸೂಪರ್ ಹಿಟ್ ಆಯಿತು. ಅಲ್ಲಿಂದಾಚೆಗೆ ...ಲೋಕ' ಚಿತ್ರವು ಇವರೊಳಗೆ ಗಹನವಾಗಿ ಅಡಗಿದ್ದ ...ತ, ಸಾಹಿತ್ಯದ ಝಲಕನ್ನು ತೋರಿತು; ಅಲ್ಲಿಯವರೆಗೆ ದಾಖಲಾಗದ ಸರಳ ಭಾಷೆ, ವಿಶಿಷ್ಟ ಸಂಗೀತ ಇವರ ಆಳದ ಸಂಗೀತ ಜ್ಞಾನ, ನೇಟಿವಿಟಿ ಪ್ರಜ್ಞೆ ಮತ್ತು ಪದಸಂಪತ್ತನ್ನು ಬಿಚ್ಚಿಟ್ಟವು. ಒಮ್ಮೆಲೇ ಸೆಳೆದುಬಿಡುವ ಗುಣವನ್ನು ಹೊಂದಿದ್ದ ಇವರ ಹಾಡುಗಳು ಕೇಳುಗರನ್ನು ಕಾಡಲಾರಂಭಿಸಿದವು. ಹಾರ್ಮೋನಿಯಂ, ಕೊಳಲು, ಗಿಟಾರ್, ತಬಲಾ ಇತ್ಯಾದಿ ವಾದ್ಯಗಳ ನಾದ ಮತ್ತು ಜನಪದೀಯ ಸ್ಪರ್ಶ ಹಂಸಲೇಖಾರ ಅಂತರ್ಯದ ಸೂಕ್ಷ್ಮಾತಿಸೂಕ್ಷ್ಮ ಭಾವನೆಗಳು ಕನ್ನಡಿಗರ ಮೇಲೆ ದಾಳಿ ಮಾಡುವಂತೆ ಮಾಡಿದವು. ಕರ್ನಾಟಕ ಮಾತ್ರವಲ್ಲದೆ ಇಡೀ ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಸಂಗೀತಗಾರ ಹಾಗೂ ಸಾಹಿತಿ ಏಕವ್ಯಕ್ತಿಯ ಮೂಲಕ ಪಡಿಮೂಡಿ ಸಿನಿಮಾದಂತಹ ಸಾರ್ವತ್ರಿಕ ಮಾಧ್ಯಮದ ಮುಖೇನ ಜನರಲ್ಲಿ ಬೆರಗು, ರೋಮಾಂಚನ ಮೂಡಿಸತೊಡಗಿದವು; ಹಂಸಲೇಖಾರ ವಿಶಿಷ್ಟ ವ್ಯಕ್ತಿತ್ವ ಹಾಡಿನ ಮಾಧ್ಯಮದ ಮೂಲಕ ವಿಸ್ಮಯದಂತೆ ಬಿಚ್ಚಿಕೊಳ್ಳುತ್ತಿದ್ದ ಕಾಲವದು.

ಈ ಮಧ್ಯೆ ಹಾಡುಗಳ ಜೊತೆಗೆ ಒಂದಿಷ್ಟು ಚಿತ್ರಗಳಿಗೆ ಸಂಭಾಷಣೆ ಬರೆಯಲು ಶುರು ಮಾಡಿಕೊಂಡ ಮೇಲೆ ಹಂಸಲೇಖಾ ತಮ್ಮ ಸಮಯ, ದೃಷ್ಟಿ ಹಂಚಿಹೋಗುವ ಅಪಾಯಕ್ಕೆ ದಾರಿ ಮಾಡಿಕೊಳ್ಳುತ್ತಿದ್ದಾರೆ ಎಂಬ ಆತಂಕವೂ ಜನರಲ್ಲಿ ಹುಟ್ಟಿಕೊಂಡಿತ್ತು, ಆದರೆ ಹಾಗಾಗಲಿಲ್ಲ, ಮೈಸೂರು ಕಡೆಯ ಈ ಪ್ರತಿಭೆ ತಮ್ಮ ಮನೋಜ್ಞ ಸಾಲುಗಳು ಮತ್ತು ಹೊಸತನದ ನಾದದ ಮೂಲಕ ಹಾಡುಗಳತ್ತಲೇ ಹೆಚ್ಚು ತೊಡಗಿಕೊಂಡರು. ಅವರ ಕ್ರಿಯಾಶೀಲತೆ, ಚಿತ್ರದಿಂದ ಚಿತ್ರಕ್ಕೆ ಮಾಡುತ್ತಿದ್ದ ಪ್ರಯೋಗಗಳು ಇನ್ನಷ್ಟು ಜನಪ್ರಿಯತೆ ತಂದು ಕೊಟ್ಟವು. ಅವರು ಕಟ್ಟುತ್ತಿದ್ದ ಮಟ್ಟುಗಳು ಹಂಸಲೇಖಾರನ್ನು ಜನರ ಪ್ರೀತಿಗೆ ಗುರಿಮಾಡಿದವು,



ನಾದಬ್ರಹ್ಮನನ್ನಾಗಿ ಮಾಡಿದವು. ಇಡೀ ಕನ್ನಡಿಗರ ಹೃದಯ ಗೆದ್ದಿದ್ದ ಹಂಸಲೇಖಾ 'ಪುಟ್ನಂಜ', 'ರಾಮಾಚಾರಿ', 'ಹಳ್ಳಿ ಮೇಷ್ಟ್ರು', 'ರಣಧೀರ', 'ಬೆಳ್ಳಿ ಕಾಲುಂಗುರ', 'ಆಕಸ್ಮಿಕ', 'ಮುಂಜಾನೆಯ ಮಂಜು', 'ಒಡಹುಟ್ಟಿದವರು', 'ಹಾಲುಂಡ ತವರು', 'ಯಾರೇ ನೀನು ಚೆಲುವೆ', 'ಅಣ್ಣಯ್ಯ', 'ತವರಿಗೆ ಬಾ ತಂಗಿ', 'ಸಿಪಾಯಿ' ಮುಂತಾದ ಚಿತ್ರಗಳಲ್ಲಿ ಅದ್ಭುತ ಸಂಗೀತ, ಸಾಹಿತ್ಯ ನೀಡಿದರು. ದಶಕಗಳ ಕಾಲ ಎಡೆಬಿಡದೆ ಒಂದರ ಹಿಂದೆ ಒಂದು ಹಿಟ್ ಕೊಡುತ್ತಿದ್ದ ಹಂಸಲೇಖಾ ಹಾರ್ಮೋನಿಯಂ ಮಣೆಗಳ ಮೇಲೆ ಬೆರಳಿಟ್ಟರೆ ಸಂಗೀತವಾಗುತ್ತಿತ್ತು, ಹಾಳೆಯ ಮೇಲೆ ಪೆನ್ನಿಟ್ಟರೆ ಸಾಹಿತ್ಯವಾಗುತ್ತಿತ್ತು. ತೀರಾ ಸರಳ, ಸಮೃದ್ಧ ಹಾಡುಗಳ ಮೂಲಕವೇ ಅತ್ಯಂತ ಆರ್ದ್ರ, ಮೋಹಕ ಮಿಡಿತಗಳನ್ನು ಅಭಿವ್ಯಕ್ತಗೊಳ್ಳುತ್ತಿದ್ದವು.

ಅಪಾರ ಗೆಲುವು, ಸಾರ್ಥಕ ಭಾವನೆಯನ್ನು ನೀಡಿದ ಸಿನಿಮಾ ರಂಗ ಹಂಸಲೇಖಾರಲ್ಲಿ ಹೊಸ ಅಚ್ಚರಿಯನ್ನೇ ಮೂಡಿಸಿತ್ತು; ಚಿತ್ರರಂಗದ ವಿಚಿತ್ರ ಮೆಂಟಾಲಿಟಿಯೇ ಅವರಲ್ಲಿ ಬೆರಗು ತಂದಿದ್ದವು ಎನ್ನಬಹುದು. ಹೊರಗಿನಿಂದ ಬಣ್ಣಬಣ್ಣವಾಗಿ ಕಾಣುವ ಚಿತ್ರರಂಗ ಒಳಗೆ ಬೇರೆಯದೇ ಆಗಿರುತ್ತದೆ; ವಿಚಿತ್ರ ರೆಡಿಮೇಡ್ ಜಗತ್ತು, ರೆಡಿಮೇಡ್ ಮನಸ್ಥಿತಿ, ವ್ಯಕ್ತಿತ್ವಗಳನ್ನು ರೂಪಿಸುತ್ತದೆ. ಎಲ್ಲರೂ ನಮ್ಮವರು, ಹಾಗೆಯೇ ಯಾರೂ ನಮ್ಮವರಲ್ಲ ಎಂಬ ಭಾವನೆಯನ್ನು ಮೂಡಿಸುತ್ತದೆ. ಎಲ್ಲ ಸಂಬಂಧಗಳೂ ಚೆನ್ನಾಗಿಯೇ ಬೆಸೆದುಕೊಳ್ಳುತ್ತವೆ, ಆದರೆ ಎಲ್ಲವೂ ವ್ಯವಹಾರಿಕವಾಗಿ ಕೊನೆಗೊಳ್ಳುತ್ತವೆ... ತಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಸಮರ್ಥವಾಗಿ ಜೇಷ್ಠತೆಯನ್ನು ಕಾಯ್ದುಕೊಂಡು ಹಾಡುಗಳನ್ನು ಕೊಡಲು ಪ್ರಯತ್ನಿಸುತ್ತಿದ್ದ ಹಂಸಲೇಖಾ ಹೊಸ ಸಂಗೀತ ನಿರ್ದೇಶಕರ ಪ್ರವೇಶದ ನಂತರ ಸಮಯಸಾಧಕ ಚಿತ್ರರಂಗದವರಿಂದ ತುಸು ಅಸಡ್ಡೆಗೆ ಒಳಗಾಗಿದ್ದೂ ಸುಳ್ಳಲ್ಲ, ಇವರಿಂದ ಸೂಪರ್‌ಹಿಟ್ ಹಾಡುಗಳನ್ನು ಪಡೆದು ತಮ್ಮ ಚಿತ್ರಗಳನ್ನು ಗೆಲ್ಲಿಸಿಕೊಂಡಿದ್ದ ಎಷ್ಟೋ ಜನ ನಿರ್ದೇಶಕರು ಬೇರೆ ಬೇರೆ ಸಂಗೀತ ನಿರ್ದೇಶಕರತ್ತ ಕಣ್ಣು ಹೊರಳಿಸಿದರು. ಮೊದಲಿನಷ್ಟೇ ಉತ್ಸಾಹ, ಹೊಸತಿನೆಡೆಗಿನ ಹಂಬಲ, ಮುರಿದು ಕಟ್ಟುವ ಆತ್ಮವಿಶ್ವಾಸ, ಜೀವನ ಸ್ಫೂರ್ತಿ, ಆದಮ್ಯ ಚೈತನ್ಯ ಹೊಂದಿದ್ದ ಹಂಸಲೇಖಾ ಮತ್ತೆ ತಮ್ಮ ಮೊದಲಿನ ವೈಭವದ ಯುಗವನ್ನು ಮರಳಿಸುವುದರಲ್ಲಿ, ತಮ್ಮ ಹಳೆಯ ಚಾರ್ಮನ್ನು, ಫಾರ್ಮನ್ನು ಕಂಡುಕೊಳ್ಳುವಲ್ಲಿ ತುಸು ಪ್ರಯಾಸ ಪಡಬೇಕಾಯಿತು. ಆದರೂ ಹೊಸಬರ ನಡುವೆಯೇ 'ನೆನಪಿರಲಿ', 'ಅಣ್ಣ ತಂಗಿ' 'ದಿಗ್ಗಜರು', 'ರಾಜಾಹುಲಿ' ತರಹದ ಚಿತ್ರಗಳ ಹಾಡುಗಳ ಮೂಲಕ ತಮ್ಮೊಳಗಿನ ಕ್ರಿಯೇಟರ್‌ಗೆ ಇನ್ನೂ ಯುವತನ ಇರುವುದಾಗಿ ತೋರಿಸಿದ್ದನ್ನು ಇಲ್ಲಿ ನೆನೆಯಬಹುದು.

ಹಂಸಲೇಖಾರ ಬಗ್ಗೆ ಆಲೋಚಿಸುವಾಗ ನಮ್ಮನ್ನು ಅವರ ಈ ಕ್ರಿಯಾಶೀಲತೆ, ಅಗಾಧವಾದ ಅಂತಃಶಕ್ತಿ ಕಾಡುತ್ತದೆ. ಭಾರತೀಯ ಸಿನಿಮಾಗಳಲ್ಲಿ ಹಾಡುಗಳೇ ಪ್ರಧಾನವೆಂದು, ಹಾಡಿಲ್ಲದ ಭಾರತೀಯ ಸಿನಿಮಾ ಬೋರು ಹೊಡೆಸುತ್ತದೆ ಎಂದು ಕೇಳಿದ್ದೇವೆ, ನಂಬಿದ್ದೇವೆ. ಆದರೆ ಹಂಸಲೇಖಾ ತರಹದ ಸಂಗೀತಗಾರರು ಚಿತ್ರದ ಕತೆಯನ್ನು ಹೇಳುವಲ್ಲಿ ಹಾಡುಗಳನ್ನು ಮಾಧ್ಯಮವಾಗಿ ಬಳಸಿಕೊಳ್ಳುವುದು ನಿಜಕ್ಕೂ ಗ್ರೇಟ್; 'ನಮ್ಮೂರ ಯುವರಾಣಿ ಕಲ್ಯಾಣವಂತೆ' ಗೀತೆಯಿಲ್ಲದ 'ರಾಮಾಚಾರಿ' ಚಿತ್ರವಾಗಲೀ, 'ಪುಟ್ಟಮಲ್ಲಿ ಪುಟ್ಟಮಲ್ಲಿ ಕೇಳು ನೀನಿಲ್ಲಿ' ಹಾಡಿಲ್ಲದ 'ಪುಟ್ನಂಜ' ಚಿತ್ರವಾಗಲೀ, 'ಅಣ್ಣಯ್ಯ ಅಣ್ಣಯ್ಯ ಬಾರೋ' ಇಲ್ಲದ 'ಅಣ್ಣಯ್ಯ' ಸಿನಿಮಾವನ್ನಾಗಲೀ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಯಾಕೆಂದರೆ ಇವು ಕೇವಲ ಹಾಡುಗಳು ಮಾತ್ರವಲ್ಲದೆ ಚಿತ್ರಕತೆಯೊಂದಿಗೆ ಬೆರೆತು ಸಿನಿಮಾದ ಕತೆಯು ಮುನ್ನಡೆಯಲು, ಕತೆಯ ಆಶಯ ಪ್ರೇಕ್ಷಕನಿಗೆ ಸಮರ್ಪಕವಾಗಿ ತಲುಪುವಲ್ಲಿ ಸಹಕರಿಸುತ್ತವೆ; ಹಂಸಲೇಖಾರ ಹಾಡುಗಳಂತೆಯೇ ಅವರಲ್ಲಿನ ಸಾಹಿತ್ಯಜ್ಞಾನ, ವಚನ ಸಾಹಿತ್ಯ, ದಾಸ ಸಾಹಿತ್ಯದ ಮೇಲೆ ಹೊಂದಿದ್ದ ಹಿಡಿತ, ಜಾನಪದ ಪರಿಜ್ಞಾನ, ನೆಲದ ಮಿಡಿತಗಳನ್ನು ಎತ್ತಿ ಹಿಡಿಯುವಂತಹ ವಾದ್ಯಗಳ ಬಗೆಗಿನ ಹಿಡಿತ, ಅವುಗಳನ್ನು ತಮ್ಮ ಗೀತೆಗಳಲ್ಲಿ ಬಳಸಿಕೊಳ್ಳುವಲ್ಲಿನ ಜಾಣ್ಮೆ ಮೆಚ್ಚುವಂಥದ್ದು ಹಾಗೂ ಇತರರಿಗೆ ಮಾದರಿಯೂ ಹೌದು.

ಕೇವಲ ಮೂರು ದಶಕಗಳಲ್ಲಿ ಮಾನವನ ಅಂತರಂಗದ ಭಾವನೆಗಳನ್ನೆಲ್ಲಾ ಗ್ರಹಿಸಿದ ಈ ಮಹಾನ್ ಕಲಾವಿದ ಅದೆಷ್ಟೋ ಸಂಗೀತ ನಿರ್ದೇಶಕರನ್ನು, ಗಾಯಕಗಾಯಕಿಯರನ್ನು ಬೆಳೆಸಿದರು. ದಂತಕತೆಯಾಗಬೇಕೆಂಬ ಆಸಕ್ತಿಯೂ ಅವರಲ್ಲಿ ಇರಲಿಲ್ಲ, ಜನ ತಮ್ಮನ್ನು ಹೊಗಳಲಿ ಎಂದೂ ಬಯಸಲಿಲ್ಲ, ತಮ್ಮಿಂದ, ತಮ್ಮ ಹಾಡುಗಳಿಂದ ಅಪಾರ ಲಾಭ ಪಡೆದು ತಮ್ಮನ್ನು ದೂರ ಉಳಿಸಿದ ಅದೆಷ್ಟೋ ಚಿತ್ರರಂಗದ ಮಂದಿ ತಮಗೆ ಕೃತಜ್ಞರಾಗಿರಬೇಕೆಂದೂ ಆಸೆ ಪಡಲಿಲ್ಲ, 'ದೇಸಿ' ಹೆಸರಿನಲ್ಲಿ ಸಾಂಸ್ಕೃತಿಕವಾಗಿ ತೊಡಗಿಸಿಕೊಂಡ ಹಂಸಲೇಖಾ ತಮ್ಮ ಅನಂತರದ ದಿನಗಳ ಶೂನ್ಯವನ್ನು ತುಂಬಿಕೊಂಡು ಮತ್ತಷ್ಟು ಕ್ರಿಯಾಶೀಲವಾಗಿ ಕೆಲಸ ಮಾಡಲು ಹಂಬಲಿಸಿದಂತೆ ಕಂಡಿತು. ತಾವು ಆರಂಭಿಸಿದ ವಿದ್ಯಾಲಯದ ಮೂಲಕ ಮುಂದಿನ ಪೀಳಿಗೆಗೆ, ಮುಂದಿನ ಕರ್ನಾಟಕಕ್ಕೆ ತಮ್ಮೊಳಗಿರುವ ಕಲೆಯನ್ನು ರವಾನಿಸಿ ಹೋಗಬೇಕೆಂದು ತೀರ್ಮಾನಿಸಿದಂತಿತ್ತು.


ಸೋಲು, ಗೆಲುವು ಈ ಎರಡನ್ನೂ ಕಂಡಿರುವ ಹಂಸಲೇಖಾ ಮನಸು ಮಾಡಿದ್ದರೆ ತಮಿಳಿಗೋ, ತೆಲುಗಿಗೋ ಹೋಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಕೀರ್ತಿ, ಹಣ ಎಲ್ಲವನ್ನೂ ಗಳಿಸಬಹುದಿತ್ತು, ಆದರೆ ಈ ಮಹಾನ್ ಪ್ರತಿಭೆ ಕನ್ನಡವನ್ನೇ ಪ್ರೀತಿಸಿದರು, ಕನ್ನಡಿಗರಿಗೇ ತಮ್ಮ ಕಲೆಯನ್ನು ಮೀಸಲಾಗಿಸಿದರು. ಭ್ರಮೆಗಳ ಬೆನ್ನಟ್ಟಿ ಹೋಗುವುದನ್ನು ಕೈಬಿಟ್ಟರು. ಸಾವಿರಾರು ಗೀತೆಗಳನ್ನು ಈ ನಾಡಿಗೆ ಕೊಟ್ಟು, ತಮ್ಮ ಅದ್ಭುತ ಹಿನ್ನೆಲೆ ಸಂಗೀತದ ಮೂಲಕ ಚಿತ್ರದ ಒಂದೊಂದು ದೃಶ್ಯವೂ ಪ್ರೇಕ್ಷಕನ ಎದೆಯಾಳಕ್ಕೆ ಇಳಿಯುವಂತೆ ಮಾಡಿ, ಎಲ್ಲಾ ಜಂಬ, ಹಮ್ಮುಬಿಮ್ಮುಗಳಿಂದ ಮುಕ್ತರಾಗಿ, ಸರಳ ಸಜ್ಜನರಾಗಿ ತಮ್ಮ ವ್ಯಕ್ತಿತ್ವವನ್ನು ಜನರ ಮನಸುಗಳಲ್ಲಿ ದಾಖಲಿಸಿದರು. ದೀಪಾವಳಿಯ ಈ ಸಂದರ್ಭದಲ್ಲಿ ಹಂಸಲೇಖಾ ಅವರು 'ನಂಜುಂಡಿ' ಚಿತ್ರಕ್ಕೆ ಬರೆದಿದ್ದ ಈ ಕೆಳಗಿನ ಸಾಲುಗಳನ್ನು ನೆನೆಯುತ್ತಾ ಈ ಪುಟ್ಟ ಬರಹಕ್ಕೆ ತೆರೆ ಎಳೆಯೋಣ ಅಲ್ಲವೇ...

ದೀಪದಿಂದ ದೀಪವ
ಹಚ್ಚಬೇಕು ಮಾನವ
ಪ್ರೀತಿಯಿಂದ
ಪ್ರೀತಿ ಹಂಚಲು...
ಮನಸಿನಿಂದ ಮನಸನು
ಬೆಳಗಬೇಕು ಮಾನವ
ಮೇಲು ಕೀಳು
ಭೇದ ನಿಲ್ಲಲು...

● ಹೃದಯಶಿವ

...ೌರ್ಯ, ಆದಿಲಶಾಹಿ, ಬಹುಮನಿ, ರಟ್ಟರು, ...ರ್ಗದ ನಾಯಕರು, ಸುರಪುರದ ನಾಯಕರು ಇವರು ...ದ್ದು ಉತ್ತರ ಕರ್ನಾಟಕದಲ್ಲಿ. ಚಾಲುಕ್ಯರು ಕರ್ನಾಟಕವನ್ನು ...ದಾ ತಟದವರೆಗೆ ವಿಸ್ತರಿಸಿದ್ದರು. ವಿಜಯನಗರ ...ವು ನೆರೆಯ ಇಂದಿನ ಪುರಂದರ (ಪಂಡರಾಪುರ), ...ರಾಷ್ಟ್ರ, ತಿರುಪತಿ - ಆಂಧ್ರ ಪ್ರದೇಶ ತೆಲಂಗಾಣ ...ಸಿತ್ತು.

...ಾಷ್ಟ್ರಕೂಟ ಇಂದಿನ ಅಜಂತಾ ಎಲ್ಲೋರಾ



...ರಾಷ್ಟ್ರ) ಒಂದನೆಯ ಕೃಷ್ಣನ ಆಡಳಿತದಲ್ಲಿ ...ಗೊಂಡಿತು. ಕದಂಬರ ರಾಜ್ಯ ನೆರೆಯ ಗೋವಾವರೆಗೂ ...ತ್ತು, ಅಷ್ಟೆ ಏಕೆ, ಶರಣರ ವಚನಗಳನ್ನು ರಕ್ಷಿಸಿದ ... ಕದಂಬರಿಗೆ ಸಲ್ಲಬೇಕು. ಕದಂಬರ ರಾಜಧಾನಿ ...ಸಿ- ಎರಡನೆಯ ರಾಜಧಾನಿ ಖಾನಾಪುರದ ಹಲಸಿ. ...ಚೂರ್ಯರು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಕ್ಕೆ ...ಟಕವನ್ನು ವಿಸ್ತರಿಸಿದ್ದರು. ಆದಿಲಶಾಹಿ, ಬಹುಮನಿ ... ಮಹಮದಿಯರಾದರೂ ಕರ್ನಾಟಕವನ್ನು ...ಕೊಂಡ, ಆಂಧ್ರ, ಅಹಮದನಗರ, ಮಹಾರಾಷ್ಟ್ರಕ್ಕೆ ...ಸಿದ್ದರು. ಚಿತ್ರದುರ್ಗದ ಕೋಟೆ ದೇಶದಲ್ಲಿಯೇ ...ದು. ಹೀಗೆ ಉತ್ತರ ಕರ್ನಾಟಕವಾದ ಹೈದರಾಬಾದ್ ...ಟಕದಲ್ಲಿ ಮಹತ್ತರ ರಾಜರು ಆಳಿ ಹೋದರು. ... ಸೀಮೆಗಳನ್ನು ದಾಟಿ ಪ್ರಬಲ ಬಲಿಷ್ಠ ಕರ್ನಾಟಕ ...ಲ್ಲಿ ಉತ್ತರ ಕನ್ನಡಿಗರ ಪಾತ್ರ ದೊಡ್ಡದು.

...ದುವಂಶದ ಮೈಸೂರು ಮಹಾರಾಜರ ಆಳ್ವಿಕೆಗೆ ...ತ್ತು, ಕರ್ನಾಟಕ ಆರ್ಥಿಕವಾಗಿ ಸಮೃದ್ಧಿಯನ್ನು ...ಿತು. ಇಡೀ ಕರ್ನಾಟಕವೇ ಮೈಸೂರು ಮಹಾರಾಜರ ...ನ ಒಪ್ಪಿಕೊಳ್ಳಬೇಕಾಯಿತು. ಇಲ್ಲಿಂದಲೇ ...ಯಿತು ಪ್ರಾದೇಶಿಕ ಅಸಮಾನತೆ. 1956 ...ಕ ಏಕೀಕರಣ ಚಳವಳಿಗೆ ಹಳೆ ಮೈಸೂರಿನ ...ಡಿಯನ್ನು ತೀರ ಕಡಿಮೆ. ಅನಕೃ, ಕುವೆಂಪು ಮುಂಚೂಣಿಯಲ್ಲಿದ್ದರು.

ಆದರೆ ಸಮಗ್ರ ಉತ್ತರ ಕರ್ನಾಟಕದ ನಾಯಕರು, ಜನರು ಕರ್ನಾಟಕ ಏಕೀಕರಣ ಚಳವಳಿಗೆ ತ್ಯಾಗ ಬಲಿದಾನ ಮಾಡಿದ್ದಾರೆ. ಅತ್ತ ಹೈದರಾಬಾದ್ ಜನರು ರಜಾಕರರ ವಿರುದ್ಧ ಹೋರಾಟ ಮಾಡಿದರು. ಇಂತಹ ಪರಿಸ್ಥಿತಿ ಹಳೆ ಮೈಸೂರು ಪ್ರಾಂತದವರಿಗೆ ಇರಲಿಲ್ಲ. ಅಲ್ಲದೆ ಕನ್ನಂಬಾಡಿ ಆಣೆಕಟ್ಟು, ಹಾರಂಗಿ, ಹೇಮಾವತಿ ಮುಂತಾದ ನೀರಾವರಿ ಯೋಜನೆಗಳು ತುಂಬಾ ಫಲಪ್ರದವಾಗಿದ್ದವು. ಇವುಗಳನ್ನು ಹಾಗೂ ಇತರ ಅಭಿವೃದ್ಧಿಯನ್ನು ಅಲ್ಲಿನ ಜನ ಇಷ್ಟಪಡಲಿಲ್ಲ.

ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರಿಗೆ ರಾಷ್ಟ್ರ ನಾಯಕ ಮಹಾನ್ ಮುತ್ಸದ್ದಿ ಎಸ್.ನಿಜಲಿಂಗಪ್ಪನವರು ಏಕೀಕರಣದ ಅರಿಕೆ ಮಾಡಿಕೊಟ್ಟರು. ಇದಕ್ಕೆ ಸಾಥ್ ಕೊಟ್ಟವರು ಶಾಂತವೇರಿ ಗೋಪಾಲ ಗೌಡರು.

1905ರಲ್ಲಿಯೆ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂದು ಹಾಡಿದ ಹುಯಿಲಗೋಳ ನಾರಾಯಣರಾಯರು, ಕನ್ನಡಕ್ಕಾಗಿ ಕುವೆಂಪ ಎನ್ನುವ ಹಾಗೆ ಕನ್ನಡವೆನೆ ಕುಣಿದಾಡುವುದೆನ್ನದೆ, ಕನ್ನಡಕೆ ಹೋರಾಡು ಕನ್ನಡದ ಕಂದ ಕನ್ನಡವ ಕಾಪಾಡು ನನ್ನ ಆನಂದ, ಕನ್ನಡ ಕನ್ನಡ ಕನ್ನಡ ಒಂದೇ ಕರ್ನಾಟಕ ಒಂದೇ ಇದ್ದರು ಒಂದೇ ಇರದಿದ್ದರೂ ಒಂದೇ ಎಂದು ಬೇಂದ್ರೆ ಹಾಡಿದರು. 1956 ರಂದು ನವೆಂಬರ್ 1ಕ್ಕೆ ನಮ್ಮ ನಾಡು ಕರುನಾಡು ಕರ್ನಾಟಕ ಉದಯವಾಯಿತು.

ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಹಸಿಗೋಡೆಯ ಹರಳಿನಂತೆ ಹುಸಿ ಹೋಗದ ಕನ್ನಡ ಎಂದರು ಚೆನ್ನವೀರ ಕಣವಿ.

ಕನ್ನಂಬಾಡಿ, ಹಾರಂಗಿ, ಕಬಿನಿ, ಹೇಮಾವತಿ ಜಲಾಶಯಗಳಿಂದ ಕೇವಲ 25 ಲಕ್ಷ ಎಕರೆ ಭೂಮಿಗೆ ಕಾವೇರಿಯ ನದಿ ಹರಿದರೆ, ಏಕೀಕರಣದ ನಂತರದ ಕರ್ನಾಟಕದ ಮೊದಲನೆಯ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರು ಕೃಷ್ಣಾ, ಮಲಪ್ರಭಾ, ಘಟಪ್ರಭಾ ಅಣೆಕಟ್ಟಿನ ನೀಲ ನಕಾಶ ತಯಾರಿಸಿದರು. ಅದಕ್ಕೆ ಬೇಕಾದ ಸಮರ್ಥ -ಅಭಿಯಾಂತ್ರಿಕರನ್ನು ನಿಯಮಿಸಿದರು. ಆದರೆ ಯೋಜನೆ ಮುಗಿಯಲು 3-4 ದಶಕಗಳೇ ಬೇಕಾದವು.

ಮಹಾದಾಯಿ ಯೋಜನೆ, ಕಳಸಾ ಬಂಡೂರಿ ಯೋಜನೆ ಈಗಲೂ ಕುಂಟುತ್ತಾ ನಡೆದಿದೆ. ಹಳೆ ಮೈಸೂರಿನ ಭಾಗಕ್ಕಿಂತ ಹೆಚ್ಚಿನ ಭೂಭಾಗವು ನೀರಾವರಿಗೆ ಒಳಪಟ್ಟರೂ ಉತ್ತರ ಕರ್ನಾಟಕದಲ್ಲಿ ಬಡತನ ಮತ್ತು ದಾರಿದ್ರ್ಯವನ್ನು ನೀಗಿಸಲಾಗಿಲ್ಲ, ಚಿತ್ರದುರ್ಗ ಮತ್ತು ಗದಗ ಜಿಲ್ಲೆಗಳಲ್ಲಿ ಈಗಲೂ ಕುಡಿಯುವ ನೀರಿಗಾಗಿ ಹಾಹಾಕಾರ ಇದ್ದೇ ಇದೆ. ಉತ್ತರ ಕರ್ನಾಟಕ ಸಮಗ್ರವಾಗಿ ಅಭಿವೃದ್ಧಿ ಆಗಬೇಕಾದರೆ ಮೊದಲು ನಮ್ಮ ನೀರಾವರಿ ಯೋಜನೆಗಳು ಸಫಲಗೊಳ್ಳಬೇಕು.

ಹಂಪಿ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಕೂಡಲ ಸಂಗಮ ಇರುವುದೂ ಉತ್ತರ ಕರ್ನಾಟಕದಲ್ಲೇ. ಬಾದಾಮಿ-ಐಹೊಳೆ ವಿಶ್ವದ ಕಲಾಕೃತಿಗಳ ತೊಟ್ಟಿಲು ಎಂದು ವಿದೇಶಿ ಶಾಸ್ತ್ರಜ್ಞನು ಹೇಳಿದ್ದಾನೆ. ಆದರೂ ಇಲ್ಲಿ ಪ್ರವಾಸೋದ್ಯಮ ಬೆಳೆಯಲಿಲ್ಲ.

ಇಳಕಲ್, ರಬಕವಿ, ಬನಹಟ್ಟಿ, ರಾಮದುರ್ಗ, ಬಾಗಲಕೋಟೆ, ಬೆಳಗಾವಿ, ಶಹಾಪುರ್, ಖಾಸಬಾಘ, ಸುರೆಬಾನ, ತೇರದಾಳ ಮುಂತಾದ ಪ್ರದೇಶಗಳು ನಾಡಿನ ರಾಷ್ಟ್ರದ ಹೆಸರಾಂತ ಜವಳಿ ಕೈಮಗ್ಗಿನ ವೃತ್ತಿಗೆ ಪ್ರಸಿದ್ಧಿ ಪಡೆದಿವೆ. ಆದರೂ ಇವುಗಳು ತಯಾರಿಸುವ ಬಟ್ಟೆಗಳಿಗೆ ಬೇಡಿಕೆ ಇಲ್ಲ, ಅಷ್ಟೇ ಅಲ್ಲ, ಈ ಪ್ರದೇಶದಲ್ಲಿ ಉದ್ಯಮ ಮತ್ತು ಕೈಗಾರಿಕೆಯನ್ನು ಬೆಳೆಸುವ ಕೆಲಸ ನಡೆದಿಲ್ಲ.

ಇನ್ನು ಶಿಕ್ಷಣ ವಲಯದಲ್ಲಿ ಬೀದರ ಮತ್ತು ಗುಲ್ಬರ್ಗ ಹಿಂದುಳಿದ ಜಿಲ್ಲೆಗಳಾಗಿವೆ. ಕಾರಣ ಇಲ್ಲಿ ಸರಕಾರೀ ಪ್ರೌಢಶಾಲೆಗೂ ಕೊರತೆ ಇದೆ. ಮಹಾವಿದ್ಯಾಲಯಗಳಿಗಂತೂ ಇಲ್ಲ ಬರ. ಇಲ್ಲಿ ಎಸ್‌ಎಸ್‌ಎಲ್‌ಸಿ ಹಾಗು ಪಿಯುಸಿ ಬೋರ್ಡುಗಳು/ಪ್ರಾಂತೀಯ ಕಚೇರಿಗಳು ಅಗತ್ಯ.

ರಾಯಚೂರಿನಲ್ಲಿ ವರ್ಷಕ್ಕೆ ಸಾವಿರಾರು ಮಕ್ಕಳು ಅಪೌಷ್ಟಿಕತೆಯಿಂದಾಗಿ ಸಾಯುತ್ತಿದ್ದಾರೆ. ಬೀದರ, ಬಿಜಾಪುರ್, ಗುಲ್ಬರ್ಗ ಮತ್ತು ಯಾದಗಿರಿಯಲ್ಲಿ ಕಿತ್ತು ತಿನ್ನುವ ಬಡತನ ಇದೆ. ಇಲ್ಲಿನ ಅನೇಕ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ.

ಸವಾಯಿ ಗಂಧರ್ವ, ಡಾ.ಮಲ್ಲಿಕಾರ್ಜುನ ಮನ್ಸೂರು, ಡಾ.ಗಂಗೂಬಾಯಿ ಹಾನಗಲ್, ಪಂಡಿತ ಭೀಮಸೇನ ಜೋಷಿ, ಡಾ.ಬಸವರಾಜ ರಾಜಗುರು ಮುಂತಾದ ಅನೇಕ ಶ್ರೇಷ್ಠ ಸಂಗೀತಗಾರರು ಉತ್ತರ ಕರ್ನಾಟಕದ ಧಾರವಾಡದವರು. ಇಲ್ಲಿ ಸಂಗೀತ ವಿಶ್ವವಿದ್ಯಾಲಯ ನಿರ್ಮಾಣಗೊಂಡು ಕೇಂದ್ರದ ಯುಜಿಸಿ ಆರ್ಥಿಕ ಸಹಯೋಗದೊಂದಿಗೆ ಇನ್ನು ಅನೇಕ ಗಾಯಕರನ್ನು ಹುಟ್ಟುಹಾಕಬೇಕಿದೆ.

ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ, ಸಮಗ್ರ ಅಭಿವೃದ್ಧಿಗಾಗಿ ಡಾ.ನಂಜುಂಡಪ್ಪ ಸಮಿತಿಯು ಒಂದು ವರದಿಯನ್ನು ಸಿದ್ಧಪಡಿಸಿತು. ಆದರೆ ಇಂದು ಯಾವುದೇ ಸರ್ಕಾರ ಇದರ ಬಗ್ಗೆ ಚಕಾರ ಎತ್ತುತ್ತಿಲ್ಲ, ಡಾ.ನಂಜುಂಡಪ್ಪ ವರದಿ ಸಮಗ್ರವಾಗಿ ಜಾರಿಗೆಯಾಗಿ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಹಣವನ್ನು ನೀಡಿ ಹಾಗೂ ಅದರ ಸದುಪಯೋಗವನ್ನು ಸರಿಯಾಗಿ ಮಾಡಿಕೊಳ್ಳುವ ಇಚ್ಛಾಶಕ್ತಿ ನಮಗೆ ಬೇಕು.

ಪ್ರಾದೇಶಿಕ ಅಸಮತೋಲನ ಖಂಡಿತ ಒಪ್ಪಬೇಕಾದ ಸಂಗತಿ. ಆದರೆ ಇಲ್ಲಿ ಒಬ್ಬರನ್ನೊಬ್ಬರು ಆರೋಪಿಸುವುದು ಸರಿಯಲ್ಲ ಮತ್ತು ಇಂತಹ ಕುಂದುಕೊರತೆಗಳಿಗಾಗಿಯೇ ಪ್ರತ್ಯೇಕ ರಾಜ್ಯದ ಬೇಡಿಕೆ ಸಮಂಜಸವಲ್ಲ.

ಬೆಂಗಳೂರು ಜಗದ ಹೆಮ್ಮೆ. ಇದರ ಅಬಿವೃದ್ಧಿ ಆಗಲೇ ಬೇಕು. ಅದರ ಜೊತೆಗೆ ಇನ್ನಿತರ ಜಿಲ್ಲೆಗಳೂ ಅಭಿವೃದ್ಧಿಗೊಳ್ಳಲಿ. ನಮ್ಮ ಭಾವ ಶಕ್ತಿ ಇಚ್ಛಾಶಕ್ತಿಯಾಗಿ, ಕ್ರಿಯಾಶಕ್ತಿಯಾಗಿ ರೂಪುಗೊಳ್ಳಲಿ.

ಆಲೂರು ವೆಂಕಟರಾಯರು, ಶಿ.ಶಿ.ಬಸವನಾಳರು, ಕುವೆಂಪು, ಡಾ. ಪಾಟೀಲ ಪುಟ್ಟಪ್ಪ ಮುಂತಾದ ಅನೇಕ ಗಣ್ಯರಿಂದ ಉದಯಗೊಂಡ ರಾಜ್ಯ ಹೋಳಾಗುವುದು ಬೇಡ. ಒಂದಾದ ಕರ್ನಾಟಕ ಒಂದಾಗಿಯೇ ಇರಲಿ.

- ಡಾ ಶಶಿಕಾಂತ ಪಟ್ಟಣ, ಪೂನಾ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 05-11-2014 RNI No. KARKAN2005/1464



'ಹಗ್ಗದ ಕೊನೆ'ಗೆ ಸುದೀಪ್ ಧ್ವನಿ

ಕನ್ನಡದ ಪ್ರತಿಭಾವಂತ ನಟರ ಪೈಕಿ ಒಬ್ಬರಾದ ನವೀನ್ ಕೃಷ್ಣ ಅದೇಕೋ ದೊಡ್ಡ ಮಟ್ಟದಲ್ಲಿ ಯಶಸ್ಸು ಕಾಣಲಿಲ್ಲ, ಹಾಗೆ ನೋಡಿದರೆ ಈ ನಟನಿಗಿರುವ ಅಭಿನಯ ಪ್ರತಿಭೆ, ಸರಳತೆ, ಬದ್ಧತೆಗಳಿಗೆ ಇವರು ಇನ್ನೂ ಎತ್ತರಕ್ಕೆ ಏರಬೇಕಿತ್ತು, ಆದರೆ ಅದೇಕೋ ಏನೋ ಇವರೊಳಗಿನ ಕಲಾವಿದ ಸರಿಯಾದ ರೀತಿಯಲ್ಲಿ ಕನ್ನಡಿಗರಿಗೆ ಗೊತ್ತಾಗಲಿಲ್ಲ, ಅನೇಕ ಚಿತ್ರಗಳಲ್ಲಿ ನಟಿಸಿದ ನಂತರವೂ ಇವರಿಗೆ ಸಿಗಬೇಕಾದ ಮನ್ನಣೆ, ಯಶಸ್ಸು ಸಿಗಲೇ ಇಲ್ಲ, ಮೂಲತಃ ನಟ, ಸಂಭಾಷಣಾಕಾರ, ಗೀತರಚನಾಕಾರ, ನಿರ್ದೇಶಕರಾಗಿರುವ ನವೀನ್ ಕೃಷ್ಣ ಈಗ ಅಂಥದೇ ಒಂದು ಹೊಸ ಪ್ರಯತ್ನದಲ್ಲಿ 'ಹಗ್ಗದ ಕೊನೆ' ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾರೆ. ದಯಾಳ್ ಪದ್ಮನಾಭನ್ ಈ ಚಿತ್ರದ ನಿರ್ದೇಶಕ. ಇದೇ ಮೊದಲ ಬಾರಿಗೆ ನವೀನ್ ಕೃಷ್ಣ ಈ ಚಿತ್ರದ ಜೈಲಿನ ದೃಶ್ಯಗಳಲ್ಲಿ ಅರೆನಗ್ನರಾಗಿ ಕಾಣಿಸಿಕೊಳ್ಳುತ್ತಿದ್ದಾರೆ... ಹೀಗೆ ಒಂದಿಷ್ಟು ವೈಶಿಷ್ಟತೆಗಳಿಂದ ಕೂಡಿರುವ 'ಹಗ್ಗದ ಕೊನೆ'ಗೆ ಹೊಸದಾಗಿ ಸೇರ್ಪಡೆಯಾಗಿರುವ ಮತ್ತೊಂದು ವೈಶಿಷ್ಟ್ಯತೆ ಎಂದರೆ ಸುದೀಪ್ ಧ್ವನಿ. ಹೌದು, ಈ ಚಿತ್ರಕ್ಕೆ ಸುದೀಪ್ ವಾಯ್ಸ್ ಓವರ್ ಇದೆ. ಈ ಬಾರಿಯಾದರೂ 'ಹಗ್ಗದ ಕೊನೆ' ಮೂಲಕ ನವೀನ್ ಕೃಷ್ಣರ ಸೆಕೆಂಡ್ ಇನ್ನಿಂಗ್ಸ್ ಹೊಸ ರೀತಿಯಲ್ಲಿ ಶುರುವಾಗಲಿ ಅಲ್ಲವೇ?

ಮತ್ತೊಂದು ಪ್ರಶಸ್ತಿಯ ನಿರೀಕ್ಷೆಯಲ್ಲಿ

ಗಾಂಧಿನಗರದಲ್ಲಿ ಎರಡು ಬಗೆಯ ಸಿನಿಮಾಗಳು ತಯಾರಾಗುತ್ತವೆ ಎಂಬ ಮಾತು ಈಚಿನ ವರ್ಷಗಳಲ್ಲಿ ರೂಢಿಯಲ್ಲಿರುವಂಥದ್ದು; ಒಂದು ಕಮರ್ಷಿಯಲ್ ಚಿತ್ರಗಳು, ಮತ್ತೊಂದು ಕಾಸರವಳ್ಳಿ (ಕಲಾತ್ಮಕ) ಚಿತ್ರಗಳು! ಕಮರ್ಷಿಯಲ್ ಚಿತ್ರಗಳು ಥಿಯೇಟರಿನಲ್ಲಿ ಓಡಬಲ್ಲವು, ಹಣ ಮಾಡಬಲ್ಲವು; ಕ್ವಾಲಿಟಿ ವಿಷಯದಲ್ಲಿ ಕೆಲವೊಂದು ಚಿತ್ರಗಳನ್ನು ಹೊರತುಪಡಿಸಿದರೆ ಉಳಿದವುಗಳ ಬಗ್ಗೆ ಮಾತಾಡಲೇಬಾರದು. ಅಂತಹ ಕಳಪೆ ಗುಣಮಟ್ಟದ ಚಿತ್ರಗಳೂ ತಯಾರಾಗುತ್ತವೆ. ಇನ್ನು ಕಲಾತ್ಮಕ ಚಿತ್ರಗಳು ಗುಣಮಟ್ಟದಲ್ಲಿ ಮೇರುಸ್ಥಿತಿಯಲ್ಲಿದ್ದರೂ ಥಿಯೇಟರಿನಲ್ಲಿ ಓಡುವುದಿರಲಿ ಎಷ್ಟೋ ಜನರಿಗೆ ಅಂತ ಚಿತ್ರಗಳು ಬಂದಿವೆ ಎಂಬುದೇ ಗೊತ್ತಾಗುವುದಿಲ್ಲ, ಅವೇನಿದ್ದರೂ ಬುದ್ಧಿವಂತರ, ವಿದ್ಯಾವಂತರ, ಪಾಮರರಿಗಷ್ಟೇ... ಇಲ್ಲವೇ ಚಲನಚಿತ್ರೋತ್ಸವಗಳಲ್ಲಿ ಪಾಲ್ಗೊಳ್ಳುವ ಒಂದು ವರ್ಗದ ಪ್ರೇಕ್ಷಕರಿಗಷ್ಟೇ ಮೀಸಲಾಗುವ ದುರಂತವೇ ಹೆಚ್ಚು, ಇಂತಹ ಕಲಾತ್ಮಕ ಚಿತ್ರಗಳನ್ನು ಮಾಡುವವರಿಗೆ ರಾಜ್ಯಪ್ರಶಸ್ತಿ ರಾಷ್ಟ್ರಪ್ರಶಸ್ತಿಗಳೂ ಎಗ್ಗಿಲ್ಲದೆ ಬರುತ್ತವೆ ಎಂಬುದು ಮತ್ತೊಂದು ಸೀರಿಯಸ್ ಮ್ಯಾಟರ್. ಈ ಬೆಳವಣಿಗೆ ಜನರ ಮನಸಿನಲ್ಲಿ 'ಪ್ರಶಸ್ತಿಗಾಗಿ ಸಿನಿಮಾನ?' ಎಂಬ ರೀತಿಯಲ್ಲಿ ಪ್ರಶ್ನೆ ಹುಟ್ಟುಹಾಕಬಲ್ಲದು. ಎಷ್ಟೋ ಸಲ ಏನಾಗುತ್ತದೆ ಎಂದರೆ ಇಂತಹ ಪ್ರಶಸ್ತಿಗಳು ಬಂದವರಿಗೆ ಮತ್ತೆ ಮತ್ತೆ ಬರುವುದೂ ಈ ರೀತಿಯ ಅನುಮಾನಗಳು ಹುಟ್ಟಿಕೊಳ್ಳಲು ಕಾರಣವಾಗುತ್ತದೆ. ಒಂದು ವರ್ಷ ಗಿರೀಶ್ ಕಾಸರವಳ್ಳಿ ಚಿತ್ರಕ್ಕೆ ಪ್ರಶಸ್ತಿ ಬಂದಿದ್ದರೆ ಮತ್ತೊಂದು ವರ್ಷ ಪಿ.ಶೇಷಾದ್ರಿ ಚಿತ್ರಕ್ಕೆ ಪ್ರಶಸ್ತಿ ಬಂದದ್ದೂ ಉಂಟು. ಇತರ ಅನೇಕರಿಗೆ ಈ ಬಗೆಯ ಪ್ರತಿಷ್ಠಿತ ಪ್ರಶಸ್ತಿಗಳು ಬಂದಿದ್ದರೂ ಅದೇಕೋ ಗಿರೀಶ್ ಕಾಸರವಳ್ಳಿ, ಪಿ. ಶೇಷಾದ್ರಿಗೆ ಬಂದ ಮಟ್ಟದಲ್ಲಿ ಬಂದಿಲ್ಲ ಎಂಬ ಅಸಮಾಧಾನದ ಮಾತೂ ಜನರಲ್ಲಿದೆ. ಇಷ್ಟಕ್ಕೂ, ಇವರ ಸಿನಿಮಾಗಳು ಎಲ್ಲಿ ತಯಾರಾಗುತ್ತವೆ? ಯಾವಾಗ ಬಿಡುಗಡೆಯಾಗುತ್ತವೆ? ಯಾವ ಜ್ಯೂರಿ ಕಮಿಟಿ ಇವರಿಗೆ ಪ್ರಶಸ್ತಿ ನೀಡುತ್ತದೆ? ಎಂಬ ಅನೇಕ ವಿಷಯಗಳು ಸಾಮಾನ್ಯ ಜನರಿಂದ ದೂರವೇ ಉಳಿದಿರುತ್ತವೆ. ಎಷ್ಟೋ ಸಲ ಕಾಸರವಳ್ಳಿ, ಬಿ.ಸುರೇಶ, ಶೇಷಾದ್ರಿ ತರಹದವರ ಚಿತ್ರಗಳು ನಿಜಕ್ಕೂ ಪ್ರಶಸ್ತಿಗೆ ಅರ್ಹವಾಗಿದ್ದರೂ ಕೂಡ ಇದರ ಹಿಂದೆ ಏನೇನೋ ಲಾಬಿಗಳೂ, ಒಳ ಒಪ್ಪಂದಗಳೂ ನಡೆಯುತ್ತವೆ ಎಂಬ ಗಂಭೀರ ದೌಟುಗಳೂ ಜನರಲ್ಲಿ ಮೂಡುತ್ತವೆ; ಇವರಿಗೆ ಪದೇ ಪದೇ ಪ್ರಶಸ್ತಿ ಬರುವುದು ಈ ಅನುಮಾನಕ್ಕೆ ದಾರಿ ಮಾಡಿಕೊಡುತ್ತದೆ. ಇವರಿಗಿಂತಲೂ ಪ್ರತಿಭಾವಂತ, ಕ್ರಿಯಾಶೀಲ ನಿರ್ದೇಶಕರೂ ಕರ್ನಾಟಕದಲ್ಲಿ ಯಾವೊಬ್ಬರೂ ಇಲ್ಲವೇ? ಇವರು ಮಾತ್ರ ಅಲ್ಟಿಮೇಟ್ ಫಿಲಂ ಮೇಕರ್‌ಗಳೇ? ಎಂಬ ಶಂಕೆಗಳೂ ಹುಟ್ಟಿಕೊಳ್ಳುತ್ತವೆ. ಅಂದಹಾಗೆ ಶೇಷಾದ್ರಿಯಂತಹ 'ಅವಾರ್ಡ್ ಡೈರೆಕ್ಟರ್' ಈಗ ಮತ್ತೊಂದು ವೈಜ್ಞಾನಿಕ ವಸ್ತುವನ್ನು (Euthanasia) ಇಟ್ಟುಕೊಂಡು ಒಂದು ಚಿತ್ರ ನಿರ್ಮಿಸಲು ಹೊರಟಿರುವುದರಿಂದ ಇಷ್ಟೆಲ್ಲಾ ಬರೆಯಬೇಕಾಯಿತು ನೋಡಿ, ಈ ಚಿತ್ರಕ್ಕೂ ಪ್ರಶಸ್ತಿ ಬಂದರೂ ಬರಬಹುದು...



ಮೇಘನಾ ಈಗ ವಂಶೋದ್ಧಾರ




ನಟನಟಿಯರ ಮಕ್ಕಳು ಅದರಲ್ಲೂ ಗಂಡು ಮಕ್ಕಳು ಹೀರೋಗಳಾಗಿ ನಟಿಸಿದ ಅನೇಕ ಉದಾಹರಣೆಗಳು ನಮಗೆ ಸಿಗುತ್ತವೆ. ಆದರೆ ನಟನಟಿಯರ ಹೆಣ್ಣು ಮಕ್ಕಳು ಹೀರೋಯಿನ್ ಆಗಿ ಕ್ಲಿಕ್ಕಾದ ಉದಾಹರಣೆಗಳು ನಮ್ಮಲ್ಲಿ ಕಡಿಮೆ. ಹಾಗೆ ನೋಡಿದರೆ ರಾಜ್‌ಕುಮಾರ್ ಮಕ್ಕಳು ಹೀರೋಗಳಾದರೆ, ತೂಗುದೀಪ ಶ್ರೀನಿವಾಸ್ ಮಕ್ಕಳ ಪೈಕಿ ಒಬ್ಬ ಹೀರೋ ಮತ್ತೊಬ್ಬ ಡೈರೆಕ್ಟರ್. ಇನ್ನು ಶ್ರೀನಿವಾಸ್ ಮೂರ್ತಿ ಮಗ ಹೀರೋ ಆಗಿ ಗೆಲ್ಲಬೇಕಿತ್ತು, ಪ್ರಭಾಕರ್ ಮಗ ಒಬ್ಬ ಒಳ್ಳೆಯ ಆಕ್ಷನ್ ಹೀರೋ ಆಗುವ ಎಲ್ಲಾ ಅವಕಾಶಗಳನ್ನು ಹಾಳುಮಾಡಿದ.ಕ್ರೆಡಿಟ್ಟು ಆತ ಮೊದಲಬಾರಿ ನಟಿಸಿದ 'ದಿಲ್' ಎಂಬ ಕೆಟ್ಟ ಚಿತ್ರವನ್ನು ನಿರ್ದೇಶಿಸಿದ ದಿಲ್ ಸತ್ಯ ಎಂಬಾತನಿಗೆ ಸಲ್ಲುತ್ತದೆ. ಸುಧೀರ್ ಮಕ್ಕಳಲ್ಲಿ ಒಬ್ಬ ರೀ... ಚಿತ್ರಗಳನ್ನು ಮಾಡಿ ನಿರ್ದೇಶಕನಾಗಿ ಒಂದಿಷ್ಟು ಗೆಲುವು ಪಡೆದರೆ ಮ... ಹೀರೋ ಆಗಿ ಕ್ಲಿಕ್ಕಾಗಲಿಲ್ಲ, ಜಗ್ಗೇಶ್ ಮಕ್ಕಳು ಅದೇಕೆ ಸಿನಿಮ... ನಟಿಸುತ್ತಾರೆ ಎಂಬುದು ಇನ್ನೂ ಅರ್ಥವಾಗಲಿಲ್ಲ, ದೇವರಾಜ್ ಮಗ ... ಬಗೆಯ ಪಾತ್ರಗಳಿಗೆ ಕಟ್ಟು ಬಿದ್ದು ಗೆಲುವು ಕಾಣಲು ಪರದಾಡುತ್ತಿರು... ನಿಮಗೆ ಗೊತ್ತಿದೆ. ಈ ಪಟ್ಟಿ ಬೆಳೆಸುತ್ತಾ ಹೋದರೆ ಹೀಗೆ ಬೆಳೆಯ... ಹೋಗುತ್ತದೆ...

ಆದರೆ ತಾರೆಯರ ಮಕ್ಕಳು ಹೀರೋಯಿನ್ ಆಗಿದ್ದೆಷ್ಟು? ಎಂಬ... ಉತ್ತರ ಸಿಗುವುದು ಕಷ್ಟ. ಈ ಮಾತಿಗೆ ಉಲ್ಟಾ ಹೊಡೆಯೋ... ಸುಂದರರಾಜ್-ಪ್ರಮೀಳಾ ಜೋಷಾಯ್ ಜೋಡಿಯ ಮಗಳು ... ರಾಜ್ ಒಂದು ರೇಂಜಿಗೆ ಒಂದಿಷ್ಟು ಚಿತ್ರಗಳಲ್ಲಿ ನಟಿಸಿ ಈಗ ... ಹೀರೋಯಿನ್‌ಗಳ ಲಿಸ್ಟಿಗೆ ಸೇರಿಕೊಳ್ಳುವಲ್ಲಿ ಪ್ರಯತ್ನ ನಡೆಸಿದ್ದಾ... ಮೇಘನ ಈಗ ನಟಿಸಲು ಮುಂದಾಗಿರುವ ಚಿತ್ರದ ಹೆಸರು 'ವಂಶೋ... ವಿಜಯ ರಾಘವೇಂದ್ರ ಈ ಚಿತ್ರ ಹೀರೋ. ಈ ಹಿಂದೆ 'ತಿಪ್ಪಜ್ಜಿ ಸ... ಎಂಬ ಸಿನಿಮಾ ನಿರ್ದೇಶಿಸಿದ್ದ ಹಳೇ ತಲೆ ಚಿಕ್ಕಣ್ಣ ಇದರ ನಿರ್ದೇ... ಮೇಘನ ಮುಂದೊಮ್ಮೆ ಸ್ಟಾರ್ ನಟಿಯಾಗ್ತಾರಾ? ಎಂಬ... ನೋಡಬೇಕು.

ಹಿಡಿ ಮಣ್ಣು ನಿಮ್ಮ ಬಾಯೊ...

ಕೆ.ಮಂಜು ಮತ್ತೊಂದು ಚಿತ್ರವನ್ನು ನಿರ್ಮಿ... ಹೊರಟಿದ್ದಾರೆ. ಈ ಚಿತ್ರದಲ್ಲಿ ಅನೇಕ ಮು... ಕಾಣಿಸಿಕೊಳ್ಳುತ್ತಿರುವುದು ಮತ್ತೊಂದು ವಿಶೇಷ. ... ರಾಘವೇಂದ್ರ, ರಕ್ಷಿತ್ ಶೆಟ್ಟಿ, ಶ್ರೀನಗರ ಕಿಟ್ಟಿ ಆ ಪ... ಪ್ರಮುಖರು. ಈ ಹಿಂದೆ 'ಬಾಲ್ ಪೆನ್' ಎಂಬ ... ನಿರ್ದೇಶಿಸಿದ್ದ ಶಶಿಕಾಂತ್ ಈ ಚಿತ್ರದ ನಿರ್ದೇಶಕರಾಗಿದ್ದು ಚಿತ್ರದ ಹೆಸರು 'ಯಕ್ಕಾ ರಾಜಾ ರಾಣಿ'ಯಂತೆ. ಅಂದಹಾಗೆ ಈ ಶಶಿಕಾಂತ್ ಅವರು ಕೆ.ಮಂಜು ನಿರ್ಮಿಸಿದ ಕೆಲವೊಂದು ಚಿತ್ರಗಳಿಗೆ ಸ್ಕ್ರಿಪ್ಟ್ ಬರೆದಿದ್ದರಂತೆ.



ಅಂದಹಾಗೆ ಒಂದಕ್ಕಿಂತ ಹೆಚ್ಚು ಹೀರೋಗಳನ್ನು ಹಾಕಿಕೊಂಡು ಚಿತ್ರ ನಿರ್ಮಾಣ ಮಾಡುವ ಪರಿಪಾಠ ಮೊದಲಿಗೆ ಹಿಂದಿಯಲ್ಲಿ ಶುರುವಾಗಿ ಕಡೆಗೆ ದಕ್ಷಿಣ ಭಾರತದ ಚಿತ್ರಗಳಲ್ಲಿಯೂ ಅಂಥದೊಂದು ಪ್ರಯೋಗಗಳು ನಡೆದವು. ಕನ್ನಡದ ಮಟ್ಟಿಗೂ ಈ ನಡೆ ಶುರುವಾಗಿದ್ದು ಸುಳ್ಳಲ್ಲ... 'ಹುಡುಗರು', 'ಕಳ್ಳ ಮಳ್ಳ ಸುಳ್ಳ', '... ಸಾರ್ ಕುರಿಗಳು', 'ಕೋದಂಡ ರಾಮ', 'ಸಾಹುಕಾರ', 'ಜೋಡಿ', 'ದಿ... ತಕ್ಷಣಕ್ಕೆ ನೆನಪಾಗುವ ಚಿತ್ರಗಳು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642...
Fax : 26604536, E-mail :lankesh70@rediffmail.com